ಸೋಮವಾರ, ಆಗಸ್ಟ್ 7, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಸೂತಿ
ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಅಂಗವಾಗಿ ವಿಜಯಪುರದಲ್ಲಿ ಕಸೂತಿ ಹಾಕುತ್ತಿರುವ ಲಂಬಾಣಿ ಮಹಿಳೆ



सत्यमेव जयते
राजस्थान सरकार

Public sentiment gets honoured Now Rajasthan becomes a State with 50 DISTRICTS

New Districts

- Anupgarh
- Balotara
- Beawar
- Deeg
- Deedwana-Kuchaman
- Dudu
- Gangapur City
- Jaipur Rural
- Jodhpur Rural
- Kekri
- Kotputli-Behror
- Khairthal-Tijara
- Neem Ka Thana
- Phalodi
- Salumbar
- Sanchore
- Shahpura

New Divisions

- Sikar
- Banswara
- Pali

*Indicative map/Not to scale

"Rajasthan being the largest state from geographical point of view, the need for administrative strengthening was felt for quite a long time. The districts being large, the service delivery was difficult and it was also taking more time for the common man to go to the district headquarters.

Now with the formation of new districts, time and resources will be saved and work will gain new speed and new opportunities will be created. Today, the foundation day of the newly formed districts is being celebrated with pomp and show. Best wishes to all the people of the state on this historic occasion.

— **Ashok Gehlot,** Chief Minister, Rajasthan

Join Hon'ble Chief Minister Shri Ashok Gehlot
Live in District Foundation Programme at 12 noon

To Watch LIVE | Scan (QR code) | Log on @AshokGehlot.Rajasthan

राजस्थान संवाद

Revenue Department, Rajasthan

ಸರಣಿ ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣ • ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಿಸಿಬಿ ಮಹಜರು

ಮೊಬೈಲ್– ಸಿಮ್ ಕಾರ್ಡ್ ಜಜ್ಜಿದ ನಾಸಿರ್

• ಸಂತೋಷ ಜಿಗಳಿಕೊಪ್ಪ

ಟಿ. ನಾಸೀರ್

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದುಕೊಂಡು ಸ್ಫೋಟಕ್ಕೆ ಸಂಚು ರೂಪಿಸಿದ್ದ ಶಂಕಿತ ಉಗ್ರ ಟಿ. ನಾಸೀರ್, ತನ್ನ ಮೊಬೈಲ್ ಹಾಗೂ ಸಿಮ್‌ಕಾರ್ಡ್ ಜಜ್ಜಿ ಪುಡಿ ಮಾಡಿ ಸಾಕ್ಷ್ಯ ನಾಶ ಮಾಡಿರುವುದು ಸಿಸಿಬಿ ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ.

‘ಬೆಂಗಳೂರಿನಲ್ಲಿ 2008ರಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಟಿ. ನಾಸೀರ್, ಜೈಲಿನಲ್ಲಿದ್ದುಕೊಂಡೇ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದ. ಪ್ರಕರಣದಲ್ಲಿ ಸಿಕ್ಕಿಬೀಳುವ ಭಯದಲ್ಲಿ ಮೊಬೈಲ್ ಹಾಗೂ ಸಿಮ್‌ಕಾರ್ಡ್ ನಾಶ ಮಾಡಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಾಸೀರ್ ವಿರುದ್ಧ ಕರ್ನಾಟಕ ಹಾಗೂ ಕೇರಳದಲ್ಲಿ 36 ಪ್ರಕರಣಗಳು ದಾಖಲಾಗಿವೆ. ಎರಡು ಪ್ರಕರಣಗಳಲ್ಲಿ ಈತನಿಗೆ ಜೀವಾವಧಿ ಶಿಕ್ಷೆಯೂ ಆಗಿದೆ. ಇದೇ ಕಾರಣಕ್ಕೆ ಈತ ಮೇಲಿಂದ ಮೇಲೆ ಭಯೋತ್ಪಾದನಾ ಕೃತ್ಯಗಳಿಗೆ ಸಂಚು ರೂಪಿಸುತ್ತಿದ್ದ. ತನಗೆ ಕಾನೂನಿನ ಭಯವೂ ಇಲ್ಲವೆಂದು ಈತ ಹೇಳುತ್ತಿದ್ದಾನೆ’ ಎಂದು ತಿಳಿಸಿವೆ.

‘ಹೆಬ್ಬಾಳ ಠಾಣೆ ವ್ಯಾಪ್ತಿಯ ಸುಲ್ತಾನ್‌ಪಾಳ್ಯದ ಮನೆಯೊಂದರ ಮೇಲೆ ಜುಲೈ 18ರಂದು ದಾಳಿ ನಡೆಸಿ, ಶಂಕಿತರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ (30) ಹಾಗೂ ಮೊಹಮ್ಮದ್ ಉಮರ್‌ನನ್ನು ಬಂಧಿಸಲಾಗಿತ್ತು. ಇವರೆಲ್ಲರಿಗೂ ಟಿ. ನಾಸೀರ್ ನಿರ್ದೇಶನ ನೀಡುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿತ್ತು.’

‘ಬಾಡಿ ವಾರೆಂಟ್ ಮೂಲಕ ಟಿ. ನಾಸೀರ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ, ಹಲವು ಮಾಹಿತಿ ಬಾಯ್ಬಿಟ್ಟಿದ್ದಾನೆ. ತಾನು ಉಪಯೋಗಿಸುತ್ತಿದ್ದ ಮೊಬೈಲ್ ಹಾಗೂ ಸಿಮ್‌ಕಾರ್ಡ್ ನಾಶ ಮಾಡಿರುವುದಾಗಿ ತಪ್ಪೊಪ್ಪಿಕೊಳ್ಳುತ್ತಿದ್ದಾನೆ. ಮೊಬೈಲ್ ಚೂರುಗಳನ್ನು ಬೇರೆ ಬೇರೆ ಕಡೆ ಎಸೆದಿದ್ದಾನೆ. ಅವುಗಳನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಜೈಲಿನಿಂದಲೇ ಜುಲೈ 16 ಹಾಗೂ 17ರಂದು ಶಂಕಿತ ಉಗ್ರ ಮಹಮ್ಮದ್ ಉಮರ್‌ಗೆ ಕರೆ ಮಾಡಿದ್ದ ಟಿ. ನಾಸೀರ್, ಹಲವು ನಿಮಿಷ ಮಾತನಾಡಿದ್ದ. ಸ್ಫೋಟದ ಬಗ್ಗೆ ಚರ್ಚಿಸಿದ್ದ. ಮೊಬೈಲ್ ಕರೆಗಳ ಸುಳಿವು ಆಧರಿಸಿ, ಶಂಕಿತ ಉಗ್ರರನ್ನು ಸೆರೆ ಹಿಡಿಯಲಾಗಿದೆ. ಇದೇ ಕರೆಗಳು, ಪ್ರಕರಣದ ಮಹತ್ವದ ಸಾಕ್ಷ್ಯಗಳು. ಇದನ್ನು ಅರಿತಿದ್ದ ನಾಸೀರ್, ಮೊಬೈಲ್ ಹಾಗೂ ಸಿಮ್‌ಕಾರ್ಡ್ ಜಜ್ಜಿ ನಾಶ ಮಾಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

3 ಆ್ಯಪ್‌ಗಳ ಮೂಲಕ ಮಾತುಕತೆ: ‘ಮೊಬೈಲ್ ಮೂಲಕ ಆರಂಭದಲ್ಲಿ ಸಾಮಾನ್ಯ ಕರೆ ಮಾಡುತ್ತಿದ್ದ ನಾಸೀರ್, ಪೊಲೀಸರಿಗೆ ಸುಳಿವು ಸಿಗಬಹುದೆಂದು ತಿಳಿದಿದ್ದ. ಮೂರು ಪ್ರತ್ಯೇಕ ಮೊಬೈಲ್ ಆ್ಯಪ್‌ಗಳ ಮೂಲಕ ಜೈಲಿನಿಂದ ಇತರರಿಗೆ ಕರೆ ಮಾಡುತ್ತಿದ್ದ. ಇಂಥ ಕರೆಗಳ ವಿವರಗಳನ್ನೂ ಈಗಾಗಲೇ ಸಂಗ್ರಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಜೈಲಿನಲ್ಲಿ ಮಹಜರು: ‘ಐವರು ಶಂಕಿತರ ಉಗ್ರರ ಜೊತೆಯಲ್ಲಿ ಟಿ. ನಾಸೀರ್‌ನನ್ನೂ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿತ್ತು. ಇದೇ ಸಂದರ್ಭದಲ್ಲಿ ನಾಸೀರ್‌ನನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದು ಮಹಜರು ನಡೆಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ನಾಸೀರ್ ಹಾಗೂ ಜುನೇದ್ ಭೇಟಿಯಾಗಿದ್ದ ಸ್ಥಳ, ಇತರೆ ಶಂಕಿತರ ಜೊತೆ ನಾಸೀರ್ ಮಾತುಕತೆ ನಡೆಸಿದ್ದ ಸ್ಥಳ ಸೇರಿದಂತೆ ಹಲವು ಕಡೆಗಳಲ್ಲಿ ಮಹಜರು ಮಾಡಲಾಗಿದೆ’ ಎಂದು ಹೇಳಿವೆ.

‘ಹಣದ ವಹಿವಾಟು: ದುಬೈ ಬ್ಯಾಂಕ್‌ಗೆ ಇ-ಮೇಲ್’

‘ಸ್ಫೋಟಕ್ಕೆ ಸಂಚು ರೂಪಿಸಿದ್ದ ಶಂಕಿತರ ಉಗ್ರರಿಗೆ ದುಬೈನಿಂದ ಹಣ ಬಂದಿರುವುದಕ್ಕೆ ದಾಖಲೆ ಲಭ್ಯವಾಗಿದೆ. ದುಬೈನಲ್ಲಿರುವ ಬ್ಯಾಂಕೊಂದರ ಮೂಲಕ ಶಂಕಿತರ ಖಾತೆಗಳಿಗೆ ಹಣ ಜಮೆ ಆಗಿದೆ. ಹೀಗಾಗಿ, ಜಮೆ ಮಾಡಿದವರು ಯಾರು? ಅವರ ವಿಳಾಸವೇನು ? ಎಂಬುದನ್ನು ತಿಳಿಸುವಂತೆ ದುಬೈನ ಬ್ಯಾಂಕ್‌ಗೆ ಇ-ಮೇಲ್ ಕಳುಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪರಪ್ಪನ ಅಗ್ರಹಾರ ಕಾರಾಗೃಹ ಬಳಿಯ ಅಂಗಡಿಯೊಂದರ ಮಾಲೀಕ, ಟಿ, ನಾಸೀರ್‌ಗೆ ಹಣ ನೀಡುತ್ತಿದ್ದ ಮಾಹಿತಿ ಲಭ್ಯವಾಗಿದೆ. ಕಮಿಷನ್ ಆಸೆಗಾಗಿ ಜೈಲಿನಲ್ಲಿದ್ದ ನಾಸೀರ್‌ಗೆ ಆಗಾಗ ಹಣ ಕೊಡುತ್ತಿದ್ದ ಮಾಲೀಕನ ಹಿನ್ನೆಲೆ ಪರಿಶೀಲಿಸಲಾಗುತ್ತಿದೆ’ ಎಂದು ತಿಳಿಸಿವೆ.

‘ಎನ್‌ಐಎ ತನಿಖೆ ಸಾಧ್ಯತೆ’

‘ಪ್ರಕರಣದ ಆರು ಶಂಕಿತ ಉಗ್ರರನ್ನು ಸಿಸಿಬಿ ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದ ಪ್ರಕರಣದ ಸಂಪೂರ್ಣ ತನಿಖೆ ಹೊಣೆಯನ್ನು ಎನ್‌ಐಎ ಅಧಿಕಾರಿಗಳು ವಹಿಸಿಕೊಳ್ಳುವ ಸಾಧ್ಯತೆ ಇದೆ’ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಥಾಯ್ಲೆಂಡ್ ರಾಕೂನ್ ನಾಯಿ ತಂದು ಸಿಕ್ಕಿಬಿದ್ದ ಪ್ರಯಾಣಿಕ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಥಾಯ್ಲೆಂಡ್‌ನಿಂದ ವಿಮಾನದಲ್ಲಿ ಬಚ್ಚಿಟ್ಟುಕೊಂಡು ತರಲಾಗಿದ್ದ ಎರಡು ವಿದೇಶಿ ನಾಯಿ ಮರಿಗಳನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಜುಲೈ 28ರ ಮಧ್ಯರಾತ್ರಿ ಥಾಯ್ ಏರ್‌ವೇಸ್ ವಿಮಾನದಲ್ಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಚೆನ್ನೈನ 28 ವರ್ಷದ ವ್ಯಕ್ತಿ ಬಾಸ್ಕೆಟ್‌ನಲ್ಲಿ ನಾಯಿಮರಿಗಳನ್ನು ಬಚ್ಚಿಟ್ಟುಕೊಂಡು ಬಂದಿದ್ದ. ತಪಾಸಣೆ ವೇಳೆ ಆತ ಕಸ್ಟಮ್ಸ್ ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದಿದ್ದಾನೆ.

ಒಂದು ನಾಯಿ ಮೃತಪಟ್ಟಿದ್ದು, ಮತ್ತೊಂದನ್ನು ಮರಳಿ ಥಾಯ್ಲೆಂಡ್‌ಗೆ ಕಳುಹಿಸಲಾಗಿದೆ. ಕಸ್ಟಮ್ಸ್ ಕಾಯ್ದೆ ಅಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ, ₹ 80 ಸಾವಿರ ದಂಡ ವಿಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಥಾಯ್ಲೆಂಡ್ ಸರ್ಕಾರದ ವನ್ಯಜೀವಿ ಇಲಾಖೆ ನೆರವು ಪಡೆದು ಬದುಕುಳಿದಿದ್ದ ನಾಯಿಮರಿಯನ್ನು ಥಾಯ್ ಏರ್‌ವೇಸ್ ವಿಮಾನದ ಮೂಲಕ ವಾಪಸ್ ಥಾಯ್ಲೆಂಡ್‌ಗೆ ಕಳುಹಿಸಿಕೊಟ್ಟಿದ್ದೇವೆ’ ಎಂದು ಬೆಂಗಳೂರು ಕಸ್ಟಮ್ಸ್ ವಕ್ತಾರರು ತಿಳಿಸಿದ್ದಾರೆ.

‘ಪ್ರಾಣಿ ಸಾಗಣೆ ಕುರಿತು ಆರೋಪಿ ದಾಖಲೆ ನೀಡಿಲ್ಲ. ಆತನ ವಿರುದ್ಧ ಪ್ರಕರಣ ದಾಖಲಿಸಿ, ದಂಡ ವಿಧಿಸಲಾಗಿದೆ. ಈ ಮೊದಲು ಆರೋಪಿ ವಿರುದ್ಧ ಚೆನ್ನೈನಲ್ಲಿಯೂ ವನ್ಯಪ್ರಾಣಿ ಕಳ್ಳಸಾಗಣೆ ಪ್ರಕರಣ ದಾಖಲಾಗಿದೆ’ ಎಂದಿದ್ದಾರೆ.

6 ಪ್ರಯಾಣಿಕರ ಬಿಟ್ಟು ಹಾರಿದ ವಿಮಾನ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶುಕ್ರವಾರ (ಆಗಸ್ಟ್ 4) ಮಂಗಳೂರಿಗೆ ಹೊರಟಿದ್ದ ಇಂಡಿಗೊ ವಿಮಾನ ಆರು ಪ್ರಯಾಣಿಕರನ್ನು ಬಿಟ್ಟು ತೆರಳಿದೆ.

ನಿಗದಿತ ಸಮಯಕ್ಕಿಂತ 12 ನಿಮಿಷ ಮೊದಲೇ ವಿಮಾನ ನಿರ್ಗಮಿಸಿದ್ದು, ಆರು ತಾಸು ನಿಲ್ದಾಣದಲ್ಲಿ ಕಾದಿದ್ದ ಆರು ಪ್ರಯಾಣಿಕರನ್ನು ಬಳಿಕ ಮತ್ತೊಂದು ವಿಮಾನದಲ್ಲಿ ಮಂಗಳೂರಿಗೆ ಕಳಿಸಲಾಯಿತು.

‘ಬೆಂಗಳೂರಿನಿಂದ ಮಂಗಳೂರಿಗೆ ಇಂಡಿಗೊ ವಿಮಾನ ಶುಕ್ರವಾರ ಮಧ್ಯಾಹ್ನ 2.55ಕ್ಕೆ ಹೊರಡಬೇಕಿತ್ತು. ಆದರೆ 2.43ಕ್ಕೆ ಹೊರಟು ಹೋಗಿದೆ. ವಿಮಾನ ಪ್ರವೇಶಿಸಲು ನಿಗದಿತ ವೇಳೆಗೂ ಮುನ್ನವೇ ಬಾಗಿಲು ಮುಚ್ಚಲಾಗಿತ್ತು’ ಎಂದು ಪ್ರಯಾಣಿಕರು ದೂರಿದ್ದಾರೆ.

‘ವಿಮಾನವು ನಿಲ್ದಾಣದಿಂದ 2.57ಕ್ಕೆ ವಿಮಾನ ಹಾರಾಟ ಆರಂಭಿಸಿದೆ. ವಿಮಾನ ತಪ್ಪಿಸಿಕೊಂಡ ಪ್ರಯಾಣಿಕರಿಗೆ ಮತ್ತೊಂದು ವಿಮಾನದಲ್ಲಿ ಮಂಗಳೂರಿಗೆ ಕಳಿಸುವ ವ್ಯವಸ್ಥೆ ಮಾಡಲಾಯಿತು’ ಎಂದು ವಿಮಾನಯಾನ ಸಂಸ್ಥೆ ಪ್ರತಿಕ್ರಿಯಿಸಿದೆ. ‘ನಿಲ್ದಾಣಕ್ಕೆ ಸರಿಯಾದ ಸಮಯಕ್ಕೆ ಬಂದಿದ್ದೆ. ವಿಮಾನ ಹಾರಾಟ ಸಮಯ ಬದಲಾವಣೆ ಕುರಿತು ಮಾಹಿತಿ ನೀಡಿರಲಿಲ್ಲ. ವಿಮಾನ ತಪ್ಪಿದ್ದರಿಂದ ಕಾಯಬೇಕಾಯಿತು’ ಎಂದು ವಿಮಾನದಲ್ಲಿ ಪ್ರಯಾಣಿಸಬೇಕಿದ್ದ ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾನಮತ್ತ ಯುವತಿ ರಂಪಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತ ಯುವತಿಯೊಬ್ಬರು ಚರ್ಚ್‌ಸ್ಟ್ರೀಟ್‌ನಲ್ಲಿ ರಂಪಾಟ ಮಾಡಿ ಪೊಲೀಸರು ಹಾಗೂ ಸ್ಥಳೀಯರನ್ನು ತಳ್ಳಾಡಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

‘ಖಾಸಗಿ ಕಂಪನಿ ಉದ್ಯೋಗಿ ಎನ್ನಲಾದ ಯುವತಿ, ಸ್ನೇಹಿತರ ಜೊತೆ ಶನಿವಾರ ರಾತ್ರಿ ಚರ್ಚ್‌ಸ್ಟ್ರೀಟ್‌ಗೆ ಬಂದಿದ್ದರು. ವಿಪರೀತ ಮದ್ಯ ಕುಡಿದಿದ್ದರು. ಸಂಚಾರ ನಿಯಮ ಉಲ್ಲಂಘಿಸಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದರು. ಇದಾದ ನಂತರ, ಯುವತಿ ರಸ್ತೆಯಲ್ಲಿ ನಿಂತುಕೊಂಡು ಕೂಗಾಡುತ್ತಿದ್ದರು. ಪೊಲೀಸರ ಜೊತೆಯೂ ವಾಗ್ವಾದ ನಡೆಸಿದ್ದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ಸ್ನೇಹಿತರ ಮೂಲಕ ಯುವತಿಯನ್ನು ಮನೆಗೆ ಕಳುಹಿಸಲು ಮುಂದಾಗಿದ್ದ ಪೊಲೀಸರು, ಆಟೊವೊಂದನ್ನು ಸ್ಥಳಕ್ಕೆ ಕರೆಸಿದ್ದರು. ಆಟೊ ಹತ್ತಲು ನಿರಾಕರಿಸಿದ ಯುವತಿ, ರಸ್ತೆಯಲ್ಲೆಲ್ಲ ಓಡಾಡಿದರು. ಸ್ನೇಹಿತರ ಜೊತೆಯೂ ಗಲಾಟೆ ಮಾಡಿ, ತಳ್ಳಿದರು’ ಎಂದರು.

‘ಮನೆಗೆ ಹೋಗಿ’ ಎಂದು ಸ್ಥಳೀಯರು ಬುದ್ಧಿವಾದ ಹೇಳಿದ್ದರು. ಅವರ ಮೇಲೆಯೂ ಯುವತಿ ಹಲ್ಲೆಗೆ ಯತ್ನಿಸಿದ್ದರು. ಸ್ಥಳದಲ್ಲಿ ಮಹಿಳಾ ಸಿಬ್ಬಂದಿ ಇರದಿದ್ದರಿಂದ, ಪುರುಷ ಸಿಬ್ಬಂದಿ ಯುವತಿಯನ್ನು ಸಮಾಧಾನಪಡಿಸಲು ಹರಸಾಹಸಪಟ್ಟರು’ ಎಂದರು.

‘ಒಂದು ಗಂಟೆಯ ನಂತರ ಯುವತಿ ಮನವೊಲಿಸಿದ ಪೊಲೀಸರು ಆಟೊದಲ್ಲಿ ಮನೆಗೆ ಕಳುಹಿಸಿಕೊಟ್ಟರು. ಘಟನೆಯಿಂದಾಗಿ ಚರ್ಚ್‌ಸ್ಟ್ರೀಟ್‌ನಲ್ಲಿ ಕೆಲ ನಿಮಿಷ ವಾಹನಗಳ ದಟ್ಟಣೆ ಉಂಟಾಗಿತ್ತು’ ಎಂದು ಹೇಳಿದರು.

‘ಯುವತಿ ಹಾಗೂ ಸ್ನೇಹಿತೆಯರು, ಕಾರಿನಲ್ಲಿ ಬಂದಿದ್ದರು. ಸಂಚಾರ ನಿಯಮ ಉಲ್ಲಂಘಿಸಿದ್ದರು. ಇದೇ ವಿಚಾರವಾಗಿ ಯುವತಿ ರಂಪಾಟ ಮಾಡಿದ್ದರು. ಸಂಚಾರ ನಿಯಮ ಉಲ್ಲಂಘನೆ ಸಮೇತ ದಂಡ ವಿಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಹೆಡ್ ಕಾನ್‌ಸ್ಟೆಬಲ್ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ನವೀನ್ ಕುಮಾರ್

ಬೆಂಗಳೂರು: ವಿಜಯನಗರ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ನವೀನ್ ಕುಮಾರ್ (35) ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಈ ಬಗ್ಗೆ ಚಂದ್ರಾಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹಾಸನದ ನವೀನ್‌ಕುಮಾರ್, ಹಲವು ವರ್ಷಗಳಿಂದ ವಿಜಯನಗರ ಸಂಚಾರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅತ್ತಿಗುಪ್ಪೆಯಲ್ಲಿ ವಾಸವಿದ್ದರು. ಶನಿವಾರ ಬೆಳಿಗ್ಗೆ ಅವರ ಮೃತದೇಹ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

‘ಶುಕ್ರವಾರ ರಾತ್ರಿ ಕೆಲಸ ಮುಗಿಸಿ ನವೀನ್ ಮನೆಗೆ ಹೋಗಿದ್ದರು. ಶನಿವಾರ (ಆಗಸ್ಟ್ 5) ಬೆಳಿಗ್ಗೆ ಸಹೋದರ ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ. ಅನುಮಾನಗೊಂಡ ಸಹೋದರ, ಮನೆ ಬಳಿ ಹೋಗಿ ನೋಡುವಂತೆ ಸಂಬಂಧಿಕರಿಗೆ ತಿಳಿಸಿದ್ದರು. ಸಂಬಂಧಿಕರು, ಮನೆಗೆ ಹೋಗಿ ನೋಡಿದಾಗಲೇ ಮೃತದೇಹ ಕಂಡಿತ್ತು. ಮರಣೋತ್ತರ ಪರೀಕ್ಷೆ ಮುಗಿದ ಬಳಿಕ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ’ ಎಂದು ತಿಳಿಸಿದರು.

ಮದುವೆ ನಿಶ್ಚಯ: ‘ನವೀನ್ ಅವರಿಗೆ ಮದುವೆ ನಿಶ್ಚಯವಾಗಿತ್ತು. ಆಗಸ್ಟ್ ಕೊನೆಯ ವಾರದಲ್ಲಿ ಮದುವೆ ನಡೆಯಬೇಕಿತ್ತು. ಇದರ ನಡುವೆಯೇ ಅವರು ಮೃತಪಟ್ಟಿದ್ದು, ಸಾವಿನಲ್ಲಿ ಅನುಮಾನಗಳಿವೆ’ ಎಂದು ಪೊಲೀಸರು ಹೇಳಿದರು.

‘ಮದ್ಯದಲ್ಲಿ ವಿಷ ಬೆರೆಸಿ ಕುಡಿದು ನವೀನ್ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕೌಟುಂಬಿಕ ಕಾರಣದಿಂದ ಆತ್ಮಹತ್ಯೆಗೆ ಶರಣಾಗಿರುವ ಶಂಕೆ ಇದೆ. ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಪೊಲೀಸ್ ಚೌಕಿಗೆ ಡಿಕ್ಕಿ: ವಾಹನ ಸಮೇತ ಚಾಲಕ ಪರಾರಿ

ಬೆಂಗಳೂರು: ಅರಮನೆ ರಸ್ತೆಯಲ್ಲಿರುವ ಸಿಐಡಿ ಕಚೇರಿ ವೃತ್ತದ ಪೊಲೀಸ್ ಚೌಕಿಗೆ ಸರಕು ಸಾಗಣೆ ವಾಹನವೊಂದು ಡಿಕ್ಕಿ ಹೊಡೆದಿದ್ದು, ಚೌಕಿ ಭಾಗಶಃ ನಜ್ಜುಗುಜ್ಜಾಗಿದೆ. ಅಪಘಾತದ ನಂತರ ವಾಹನ ಸಮೇತ ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಾಗಿದೆ.

‘ಶನಿವಾರ ತಡರಾತ್ರಿ ಅಪಘಾತ ಸಂಭವಿಸಿರುವ ಮಾಹಿತಿ ಇದೆ. ವಾಹನ ಮತ್ತು ಚಾಲಕನ ವಿವರ ಸದ್ಯಕ್ಕೆ ಗೊತ್ತಾಗಿಲ್ಲ’ ಎಂದು ಪೊಲೀಸರು ಹೇಳಿದರು.

‘ಚಾಲಕ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದಾನೆ. ಡಿಕ್ಕಿಯ ರಭಸಕ್ಕೆ ಚೌಕಿ ಸಂಪೂರ್ಣ ಕಿತ್ತು ಹೋಗಿದ್ದು, ಎಲ್ಲೆಂದರಲ್ಲಿ ಅವಶೇಷಗಳು ಬಿದ್ದಿದ್ದವು. ಮಾಹಿತಿ ಬರುತ್ತಿದ್ದಂತೆ ಅವಶೇಷಗಳನ್ನು ತೆರವು ಮಾಡಲಾಗಿದೆ’ ಎಂದರು.

ರೌಡಿ ಹತ್ಯೆ: ಇಬ್ಬರು ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿ ಮನೆಯತ್ತ ಹೊರಟಿದ್ದ ರೌಡಿ ಮಹೇಶ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ್ದ ಪ್ರಕರಣದ ಇಬ್ಬರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸಿದ್ದಾಪುರ ಠಾಣೆಯ ರೌಡಿ ಪಟ್ಟಿಯಲ್ಲಿ ಹೆಸರಿದ್ದ ಮಹೇಶ್‌ನನ್ನು ಹಳೇ ವೈಷಮ್ಯದಿಂದಾಗಿ ಕೊಲೆ ಮಾಡಿರುವುದು ಗೊತ್ತಾಗಿದೆ. ಕೃತ್ಯ ಎಸಗಿದ್ದಾರೆ ಎನ್ನಲಾದ ರೌಡಿ ವಿಲ್ಸನ್ ಗಾರ್ಡನ್ ನಾಗ, ಈತನ ಸಹಚರ ಮೋಹನ್ ಅಲಿಯಾಸ್ ಡಬಲ್ ಮೀಟರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೊಲೆ ಪ್ರಕರಣದಲ್ಲಿ ಮಹೇಶ್ ಜೈಲಿಗೆ ಹೋಗಿದ್ದ. ಜೈಲಿನಿಂದ ಹೊರ ಬಂದ ನಂತರ, ನಾಗ ಹಾಗೂ ಆತನ ಕಡೆಯವರನ್ನು ಹತ್ಯೆಗೆ ಸಂಚು ರೂಪಿಸುತ್ತಿದ್ದ. ಈ ಮಾಹಿತಿ ತಿಳಿದ ನಾಗ, ಜೈಲಿನಿಂದ ಹೊರಬರುತ್ತಿದ್ದಂತೆ ಮಹೇಶ್ ಹತ್ಯೆ ಮಾಡಿದ್ದಾನೆ’ ಎಂದಿವೆ.

ವಾಹನಗಳಿಗೆ ಕಿಡಿಗೇಡಿಗಳಿಂದ ಬೆಂಕಿ

ಬೆಂಗಳೂರು: ವಸಂತನಗರದ ಮನೆಯೊಂದರ ಮುಂದೆ ನಿಲ್ಲಿಸಿದ್ದ ಐದು ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿಯೊಬ್ಬನನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಭಾನುವಾರ ನಸುಕಿನಲ್ಲಿ ನಡೆದಿರುವ ಕೃತ್ಯದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಒಬ್ಬನನ್ನು ವಶಕ್ಕೆ ಪಡೆದಿದ್ದು, ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಮನೆ ಎದುರು ಹೋಗಿದ್ದ ಆರೋಪಿಗಳು, ಸಾಲಿನಲ್ಲಿ ನಿಲ್ಲಿಸಲಾಗಿದ್ದ ಐದು ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿದ್ದರು. ಐದು ವಾಹನಗಳು ಸುಟ್ಟು ಕರಕಲಾಗಿವೆ. ವೈಯಕ್ತಿಕ ದ್ವೇಷದಿಂದಾಗಿ ಈ ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದರು.

ಸಂವಾದ

ಆಟ-ಗಲಾಟ ಸಂಸ್ಥೆಯು ಹಳೆ ಮದ್ರಾಸ್ ರಸ್ತೆಯಲ್ಲಿರುವ ಗೋಪಾಲನ್ ಮಾಲ್‌ನಲ್ಲಿ ಹಮ್ಮಿಕೊಂಡಿದ್ದ ‘ಬೆಂಗಳೂರು ಕಾವ್ಯ ಉತ್ಸವ’ದ ಏಳನೇ ಆವೃತ್ತಿಯ ಎರಡನೇ ದಿನವಾದ ಭಾನುವಾರ ಗೀತ ರಚನೆಕಾರ ಜಾವೇದ್ ಅಖ್ತರ್ ಜತೆಗೆ ಪತ್ರಕರ್ತೆ ಹುಮ್ರಾ ಖುರೈಶಿ ಸಂವಾದ ನಡೆಸಿದರು

ಸಚಿವ ಮುನಿಯಪ್ಪ ಹೇಳಿಕೆಗೆ ಕಾಂಗ್ರೆಸ್ ಎಂಎಲ್‌ಸಿ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾನೂನು ಸಲಹೆ ಪಡೆದು ಸದಾಶಿವ ಆಯೋಗದ ವರದಿ ಜಾರಿಗೆ ಪ್ರಯತ್ನಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಅವರು ನೀಡಿರುವ ಹೇಳಿಕೆ ಸರಿಯಲ್ಲ. ಅವರ ಹೇಳಿಕೆಯನ್ನು ವಿರೋಧಿಸುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಹೇಳಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಮೀಸಲಾತಿ ಸಂರಕ್ಷಣಾ ರಾಜ್ಯ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ. ಸಮುದಾಯವನ್ನು ಕಡೆಗಣಿಸಿದರೆ ಸುಮ್ಮನಿರುವುದಿಲ್ಲ. ಸಮುದಾಯದ ಬೇಡಿಕೆ ಈಡೇರಿಸುವಂತೆ ಶೀಘ್ರದಲ್ಲೇ ಮುಖ್ಯಮಂತ್ರಿ ಬಳಿಗೆ ನಿಯೋಗ ಕರೆದೊಯ್ಯಲಾಗುವುದು’ ಎಂದರು.

‘ಅಲೆಮಾರಿ ಮಾಡಿದ ಸರ್ಕಾರ’: ‘ರಾಜ್ಯ ಸರ್ಕಾರವು ‘ಶಕ್ತಿ’ ಯೋಜನೆಯಡಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿ, ಮಹಿಳೆಯರನ್ನು ಅಲೆಮಾರಿಗಳಾಗಿಸಿದೆ. ಹೀಗಾಗಿ, ಅವರು ಸುತ್ತಾಟ ನಡೆಸುತ್ತಿದ್ದಾರೆ’ ಎಂದು ಬಿಜೆಪಿ ಮುಖಂಡ ಅರವಿಂದ ಲಿಂಬಾವಳಿ ಹೇಳಿದರು.

‘ಗ್ಯಾರಂಟಿ ಯೋಜನೆಗೆ ನಮ್ಮ ವಿರೋಧ ಇಲ್ಲ. ಆದರೆ, ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಯ ₹ 11 ಸಾವಿರ ಕೋಟಿ ಅನುದಾನವನ್ನು ಗ್ಯಾರಂಟಿ ಯೋಜನೆಗೆ ಬಳಕೆ ಮಾಡುತ್ತಿರುವುದು ಸಲ್ಲದು. ಆ ಅನುದಾನವನ್ನು ಬೋವಿ, ಕೊರಮ, ಕೊರಚ, ಅಲೆಮಾರಿ ಸಮುದಾಯದ ಅಭಿವೃದ್ಧಿಗೆ ಬಳಸಬೇಕು’ ಎಂದು ಕೋರಿದರು.

ಆರೋಪಿ ಕಾಲಿಗೆ ಗುಂಡು: ಬಂಧನ

ಆನೇಕಲ್: ವಾರದ ಹಿಂದೆ ಕೆಂಪು ದೊಮ್ಮಸಂದ್ರದ ಬಳಿ ನಡೆದಿದ್ದ ಮೆಣಸಿಗನ ಹಳ್ಳಿಯ ಹೇಮಂತ್ (24) ಎಂಬ ಯುವಕನ ಕೊಲೆ ಪ್ರಕರಣದ ಆರೋಪಿ 19 ವರ್ಷದ ಯುವಕನ ಕಾಲಿಗೆ ಗುಂಡು ಹೊಡೆದು, ಪೊಲೀಸರು ಭಾನುವಾರ ಬಂಧಿಸಿದರು.

ಈ ಕೊಲೆ ಸಂಬಂಧ ಕಾನೂನು ಸಂಘರ್ಷ ಎದುರಿಸುತ್ತಿರುವ ಮೂವರು ಸೇರಿ ಐವರು ಯುವಕರು ಮತ್ತು ವಿದ್ಯಾರ್ಥಿಯೊಬ್ಬನ ತಂದೆಯನ್ನು ಬಂಧಿಸಿದ್ದಾರೆ. ಪ್ರೇಯಸಿ ಎದುರು ರೌಡಿ ಎಂದು ಬಿಂಬಿಸಿಕೊಳ್ಳಲು ಪಿಯು ವಿದ್ಯಾರ್ಥಿ ನಾಲ್ವರು ಸ್ನೇಹಿತರ ಜೊತೆಗೂಡಿ ಕೊಲೆ ಮಾಡಿದ್ದ. ಕೊಲೆ ನಂತರ ಆರೋಪಿಗಳು ತಲೆ ಮರೆಸಿಕೊಂಡಿದ್ದರು.

ಆನೇಕಲ್ ಸಮೀಪ ನಿರ್ಮಾಣ ಹಂತದ ಮನೆಯೊಂದರಲ್ಲಿ ಅಡಗಿದ್ದ ಆರೋಪಿಗಳ ಬಂಧನಕ್ಕೆ ಭಾನುವಾರ ತೆರಳಿದ್ದ ಪೊಲೀಸರ ಮೇಲೆ ಆರೋಪಿಗಳು ಚಾಕುವಿನಿಂದ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದರು. ಆಗ ಆಕಾಶ್ (19) ಎಂಬಾತನ ಕಾಲಿಗೆ ಗುಂಡು ಹೊಡೆದು ಬಂಧಿಸಿದರು ಎಂದು ಗ್ರಾಮಾಂತರ ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜಾನುಕುಂಟೆ ಗ್ರಾ.ಪಂ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಅಂಬಿಕಾ ರಾಜೇಂದ್ರಕುಮಾರ್ ಹಾಗೂ ಉಪಾಧ್ಯಕ್ಷರಾಗಿ ವೆಂಕಟೇಶ್ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ (ಮಹಿಳೆ) ಮತ್ತು ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಾಗಿತ್ತು.

27 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ಅಂಬಿಕಾ ಮತ್ತು ಹೇಮಲತಾ ನಾಮಪತ್ರ ಸಲ್ಲಿಸಿದ್ದರು. ಅಂಬಿಕಾ 16 ಮತ್ತು ಹೇಮಲತಾ 11 ಮತಗಳನ್ನು ಪಡೆದರು.

ಉಪಾಧ್ಯಕ್ಷರ ಸ್ಥಾನಕ್ಕಾಗಿ ನಾಮಪತ್ರ ಸಲ್ಲಿಸಿದ್ದ ವೆಂಕಟೇಶ್ 14 ಮತ್ತು ರತ್ನಮ್ಮ 13 ಮತಗಳನ್ನು ಪಡೆದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ರಾಜಾನುಕುಂಟೆ ಪ್ರತಿಷ್ಠಿತ ಪಂಚಾಯಿತಿಯಾಗಿದೆ. ಬಿಜೆಪಿಗೆ ಕೇಂದ್ರಸ್ಥಾನವಾಗಿದೆ. ಒಂದು ತಿಂಗಳ ಹಿಂದೆ, ಕೆಲ ಸದಸ್ಯರು ದ್ರೋಹಬಗೆದ ಕಾರಣ, ಪಂಚಾಯಿತಿ ಕಾಂಗ್ರೆಸ್ ಬೆಂಬಲಿತರ ತೆಕ್ಕೆಗೆ ಜಾರಿತ್ತು. ಅಂತಹವರನ್ನು ದೂರ ಇಡಲಾಗಿದೆ. ಮತ್ತೆ ಬಿಜೆಪಿ ಬೆಂಬಲಿತ ಸದಸ್ಯರ ವಶಕ್ಕೆ ಪಡೆಯಲು ಸಾಧ್ಯವಾಗಿದೆ ಎಂದರು.

ಕ್ಷೇತ್ರ ವ್ಯಾಪ್ತಿಯ ಬಹುತೇಕ ಪಂಚಾಯಿತಿಗಳಲ್ಲಿ ಬಿಜೆಪಿ ಬೆಂಬಲಿತರೇ ಅಧ್ಯಕ್ಷ, ಉಪಾಧ್ಯಕ್ಷರು ಆಯ್ಕೆಯಾಗಿದ್ದಾರೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಎಸ್.ಜಿ.ನರಸಿಂಹಮೂರ್ತಿ, ಚೊಕ್ಕನಹಳ್ಳಿ ವೆಂಕಟೇಶ್, ಸತೀಶ್ ಕಡತನಮಲೆ, ಕೆ.ಆರ್.ತಿಮ್ಮೇಗೌಡ, ಅದ್ದೆ ಮಂಜುನಾಥ ರೆಡ್ಡಿ, ಎಂ.ಮೋಹನ್ ಕುಮಾರ್, ಪ್ರಶಾಂತ್ ರೆಡ್ಡಿ, ಡಿ.ಜಿ.ಅಪ್ಪಯಣ್ಣ ಉಪಸ್ಥಿತರಿದ್ದರು.

ಕಸಘಟ್ಟಪುರ ಗ್ರಾ.ಪಂ: ಸಂಧ್ಯಾ ದೇವರಾಜ್ ಅಧ್ಯಕ್ಷೆ

ಹೆಸರಘಟ್ಟ: ಹೋಬಳಿಯ ಕಸಘಟ್ಟಪುರ ಗ್ರಾಮ ಪಂಚಾಯಿತಿಯ 2ನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಸಂಧ್ಯಾ ದೇವರಾಜ್, ಉಪಾಧ್ಯಕ್ಷರಾಗಿ ರಮೇಶ್ ಬಾಬು ಆಯ್ಕೆಯಾಗಿದ್ದಾರೆ.

32 ಸದಸ್ಯರಿದ್ದು, ಸಂಧ್ಯಾ ದೇವರಾಜ್ 20 ಮತ ಪಡೆದರು. ಉಪಾಧ್ಯಕ್ಷರಾಗಿ ರಮೇಶ್ ಅವಿರೋಧವಾಗಿ ಆಯ್ಕೆಗೊಂಡರು.

ಯುವತಿ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ರವಿಕುಮಾರ್

ರಾಮನಗರ: ಯುವತಿಯ ಹೆಸರಿನಲ್ಲಿ ವ್ಯಕ್ತಿಯೊಬ್ಬರಿಗೆ ಬ್ಲ್ಯಾಕ್‌ಮೇಲ್ ಮಾಡಿ ₹41 ಲಕ್ಷ ವಂಚಿಸಿದ್ದ ಯುವಕನೊಬ್ಬನನ್ನು ರಾಮನಗರ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಮೊಬೈಲ್ ಕರೆಗಳ ಜಾಡು ಬೆನ್ನತ್ತಿದ್ದ ರಾಮನಗರ ಸಿಇಎನ್ ಪೊಲೀಸರು ಬೆಂಗಳೂರಿನ ದಾಸರಹಳ್ಳಿಯ ಪೇಯಿಂಗ್ ಗೆಸ್ಟ್‌ಹೌಸ್‌ನಲ್ಲಿ (ಪಿ.ಜಿ) ವಾಸವಾಗಿದ್ದ ರವಿಕುಮಾರ್ (24) ಎಂಬಾತನನ್ನು ಬಂಧಿಸಿದ್ದಾರೆ.

ಮೂಲತಃ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಕಗ್ಗೇರಿಯ ರವಿಕುಮಾರ್ ಬೆಂಗಳೂರಿನಲ್ಲಿ ನೆಲೆಸಿದ್ದಾನೆ. ಖಾಸಗಿ ಡೇಟಾ ಬೇಸ್ ಕಂಪನಿಯಲ್ಲಿ ಕೆಲಸ ಮಾಡಿದ್ದ. ತಂತ್ರಜ್ಞಾನದಲ್ಲಿ ನಿಪುಣನಾಗಿದ್ದ. ಹೆಣ್ಣಿನ ದನಿಯಲ್ಲಿಯೇ ಮಾತನಾಡುವುದನ್ನು ಕಲಿತಿದ್ದ.

ಯುವತಿ ಹೆಸರಲ್ಲಿ ಖಾತೆ: ಈ ಕೌಶಲ ಬಳಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಪುರುಷರನ್ನು ಬಲೆಗೆ ಬೀಳಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡುತ್ತಿದ್ದ. ಈ ಕೃತ್ಯಕ್ಕಾಗಿ ಸಾಮಾಜಿಕ ಜಾಲತಾಣ ಮತ್ತು ಫೇಸ್‌ಬುಕ್‌ನಲ್ಲಿ ‘ಗೀತಾ ಸೆಕ್ಸಿ’ ಎಂಬ ಹೆಸರಿನಲ್ಲಿ ಖಾತೆ ತೆರೆದಿದ್ದ. ಪುರುಷರಿಗೆ ತಾನೇ ಫ್ರೆಂಡ್‌ಶಿಪ್ ರಿಕ್ವೆಸ್ಟ್ ಕಳಿಸಿ ಸ್ನೇಹಿತರನ್ನಾಗಿ ಮಾಡಿಕೊಳ್ಳುತ್ತಿದ್ದ. ಹೀಗೆ ರೋಹಳ್ಳಿಯ ರಾಜೇಶ್‌ನನ್ನು ಸ್ನೇಹಿತರನ್ನಾಗಿ ಮಾಡಿಕೊಂಡಿದ್ದ. ಅವಿವಾಹಿತರಾಗಿದ್ದ ಅವರನ್ನು ಮದುವೆಯಾಗುವುದಾಗಿ ನಂಬಿಸಿದ್ದ. ‘ನೇರವಾಗಿ ಭೇಟಿಯಾಗಲು ನಿರಾಕರಿಸುತ್ತಿದ್ದ. ಸಮಸ್ಯೆ ಇದೆ ಎಂದು ಹಣಕ್ಕೆ ಬೇಡಿಕೆ ಇಡುತ್ತಿದ್ದ. ಅದನ್ನು ನಂಬಿದ್ದ ರಾಜೇಶ್ ಹಂತಹಂತವಾಗಿ ಫೋನ್ ಪೇ, ಗೂಗಲ್ ಪೇ ಮೂಲಕ ಹಣ ಪಾವತಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಆಗ ಆರೋಪಿ ರಾಜೇಶ್ ಅವರ ಫೋಟೊವನ್ನು ಅಶ್ಲೀಲವಾಗಿ ಎಡಿಟ್ ಮಾಡಿ ವಾಟ್ಸ್‌ಆ್ಯಪ್‌ಗೆ ಕಳಿಸಿದ್ದ. ಹಣ ಕೊಡದಿದ್ದರೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವುದಾಗಿ ಬೆದರಿಸಿ ಆರು ತಿಂಗಳಲ್ಲಿ ₹ 41 ಲಕ್ಷ ವಸೂಲಿ ಮಾಡಿದ್ದ. ಆತನ ಕಾಟಕ್ಕೆ ಬೇಸತ್ತ ರಾಜೇಶ್ ಠಾಣೆಗೆ ಬಂದು ದೂರು ಕೊಟ್ಟರು. ಆರೋಪಿ ಹಲವರಿಗೆ ವಂಚಿಸಿರುವ ಸಾಧ್ಯತೆ ಇದೆ. ತನಿಖೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

ಮುಂಬೈ ವಸತಿ ಸಂಕೀರ್ಣಕ್ಕೆ ಜಮೀರ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಕೊಳೆಗೇರಿ ಪುನರ್ ವಸತಿ ಪ್ರಾಧಿಕಾರವು ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ಮಿಸುತ್ತಿರುವ ವಸತಿ ಸಂಕೀರ್ಣವನ್ನು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ವೀಕ್ಷಿಸಿದರು.

ಮುಂಬೈನ ಅಂಧೇರಿ ಈಸ್ಟ್‌ನಲ್ಲಿರುವ ಸಾಯಿಬಾಬಾ ನಗರದ ಟೀಚರ್ಸ್ ಕಾಲೊನಿಯಲ್ಲಿ ಈ ವಸತಿ ಸಂಕೀರ್ಣ ನಿರ್ಮಾಣವಾಗುತ್ತಿದೆ. ಅಲ್ಲಿನ ಅಧಿಕಾರಿಗಳಿಂದ ಜಮೀರ್ ಅವರು ಮಾಹಿತಿ ಪಡೆದುಕೊಂಡರು.

ಮುಂಬೈ ಕೊಳೆಗೇರಿ ಪುನರ್ ವಸತಿ ಪ್ರಾಧಿಕಾರದಿಂದ ಕೊಳೆಗೇರಿ ನಿವಾಸಿಗಳ ಸಹಕಾರ ಸಂಘ ಸ್ಥಾಪಿಸಿ ಗುತ್ತಿಗೆ ಆಧಾರದಲ್ಲಿ ಒಪ್ಪಂದ ಮಾಡಿಕೊಂಡು, ವಸತಿ ಸಂಕೀರ್ಣ ನಿರ್ಮಿಸಲಾಗುತ್ತಿದೆ. ಶೇ 50ರಷ್ಟು ಜಾಗವನ್ನು ಗುತ್ತಿಗೆ ಸಂಸ್ಥೆಗೆ ನೀಡಲಾಗುತ್ತದೆ. ಫಲಾನುಭವಿಗಳಿಗೆ ಬ್ಯಾಂಕ್ ಸಾಲದ ವ್ಯವಸ್ಥೆ ಬೇಕಿದ್ದರು ಗುತ್ತಿಗೆ ಸಂಸ್ಥೆಯೇ ನೆರವಾಗಲಿದೆ. ವಸತಿ ಸಂಕೀರ್ಣ ನಿರ್ಮಾಣದವರೆಗೆ ನಿವಾಸಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಿದ್ದು, ಬಾಡಿಗೆ ಸಹ ಪಾವತಿಸಲಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದರು.

ಇದೇ ಮಾದರಿಯಡಿ ಕರ್ನಾಟಕದಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿ, ರಾಜೀವ್ ಗಾಂಧಿ ವಸತಿ ನಿಗಮ ಯೋಜನೆಗಳಲ್ಲಿ ಜಾರಿ ಮಾಡಬಹುದೇ ಎಂದು ಅಧ್ಯಯನ ನಡೆಸಲು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಂಬೈ ಕೊಳೆಗೇರಿ ಪುನರ್ ವಸತಿ ಪ್ರಾಧಿಕಾರದ ಅಧಿಕಾರಿಗಳನ್ನು ಕರ್ನಾಟಕಕ್ಕೆ ಭೇಟಿ ನೀಡುವಂತೆಯೂ ಆಹ್ವಾನಿಸಿದರು. ವಸತಿ ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಮಾಜಿ ಸಂಸದ ಹರ್ಬನ್ ಸಿಂಗ್, ಪ್ರಾಧಿಕಾರದ ಅಧಿಕಾರಿಗಳಾದ ಆಶೀಶ್ ಚೌದರಿ, ಬಾಲಾಜಿ ಮುಂಡೆ, ಅಭಯ್ ರಾಮ್ ಇದ್ದರು.

ಸಚಿವ ಜಮೀರ್ ಅಹಮದ್ ಖಾನ್ ವಸತಿ ಸಂಕೀರ್ಣದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು

ಅಕ್ಕಿ ಸ್ವಚ್ಛತಾ ಯಂತ್ರಕ್ಕೆ ಸಿಲುಕಿದ್ದರಿಂದ ಕೈ ಕಳೆದುಕೊಂಡಿರುವ ಪ್ರಮೋದ್ ಸಿಂಗ್

ಒಂದೇ ಕೈ ಇದ್ದರೂ ಆಹಾರ ತಲುಪಿಸುವ ಯುವಕ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಅಕ್ಕಿ ಸ್ವಚ್ಛತಾ ಯಂತ್ರಕ್ಕೆ ಸಿಲುಕಿದ್ದರಿಂದ ಒಂದು ಕೈ ಕಳೆದುಕೊಂಡು ಕಷ್ಟದಲ್ಲಿ ಬೆಳೆದು ಉತ್ತರ ಪ್ರದೇಶದಿಂದ ಬಂದ ಯುವಕನೊಬ್ಬ ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಕುಟುಂಬವನ್ನು ಪೊರೆಯುತ್ತಿದ್ದಾರೆ.

ಉತ್ತರ ಪ್ರದೇಶದ ಶ್ರಾವಸ್ತಿ ಜಿಲ್ಲೆ ಹರ್ದತ್‌ನಗರದ ಪ್ರಮೋದ್ ಸಿಂಗ್ ಎಂಬ 22ರ ಹರೆಯದ ಯುವಕನೇ ಈ ರೀತಿ ಅಂಗವೈಕಲ್ಯವನ್ನು ಮೀರಿ, ಒಂದೇ ಕೈಯಲ್ಲಿ ದ್ವಿಚಕ್ರ ವಾಹನ ಚಲಾಯಿಸಿ ಕೆಲಸ ಮಾಡುತ್ತಿರುವವರು. ಬನ್ನೇರುಘಟ್ಟದಲ್ಲಿ ಇರುವ ಪ್ರಮೋದ್ ಸಿಂಗ್ ಲಾಲ್‌ಬಾಗ್ ಸುತ್ತಮುತ್ತ ಆಹಾರ ತಲುಪಿಸುವ ಕೆಲಸ ಮಾಡುತ್ತಿದ್ದಾರೆ.

ಹೆತ್ತವರು ಕೃಷಿ ಕೂಲಿ ಕಾರ್ಮಿಕರು. ಪ್ರಮೋದ್ ಸಿಂಗ್ 2 ವರ್ಷದ ಮಗುವಾಗಿದ್ದಾಗ ಅಪ್ಪ ಅಮ್ಮ ಕೆಲಸ ಮಾಡುತ್ತಿದ್ದ ಜಾಗದಲ್ಲಿ ಅಕ್ಕಿ ಸ್ವಚ್ಛಗೊಳಿಸುವ ಯಂತ್ರಕ್ಕೆ ಈ ಮಗುವಿನ ಕೈ ಸಿಲುಕಿ ಎಡಗೈ ಪೂರ್ತಿ ತುಂಡಾಗಿತ್ತು.

ದ್ವಿಚಕ್ರ ವಾಹನದಲ್ಲಿ ಕಾರ್ಯನಿರತ ಪ್ರಮೋದ್ ಸಿಂಗ್ –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಎಲ್ಲ ಸರಿ ಇರುವವರಿಗೇ ನಮ್ಮೂರಲ್ಲಿ ಸರಿಯಾಗಿ ಕೆಲಸ ಸಿಗುವುದಿಲ್ಲ. ಇನ್ನು ಕೈ ಇಲ್ಲದವನಿಗೆ ಸಿಗುತ್ತದಾ? ಬೆಂಗಳೂರು ನನಗೆ ಬದುಕು ನೀಡಿದೆ

ಪ್ರಮೋದ್ ಸಿಂಗ್, ಸ್ವಿಗ್ಗಿ ಉದ್ಯೋಗಿ

ನಾಲ್ವರು ಮಕ್ಕಳಲ್ಲಿ ಇವರೇ ದೊಡ್ಡವರಾಗಿರುವುದರಿಂದ 10ನೇ ತರಗತಿವರೆಗೆ ಓದಿ ಕೆಲಸ ಆರಂಭಿಸಿದ್ದರು.

ಒಂದು ಕೈ ಇಲ್ಲದ ಕಾರಣ ಕೂಲಿ ಕೆಲಸವೂ ಕಷ್ಟವಾಗಿತ್ತು. ಬೇರೆ ಕಡೆ ಉದ್ಯೋಗವೂ ಸಿಗಲಿಲ್ಲ. ತನ್ನದೇ ಊರಿನ ಸುರೇಶ್ ಕುಮಾರ್ ಎಂಬ ಗೆಳೆಯ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ಅವರ ನೆರವಿನಿಂದ ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದರು. ಆನ್‌ಲೈನ್ ಮೂಲಕ ಆಹಾರ ತರಿಸುವವರಿಗೆ ತಲುಪಿಸುವ ಏಜೆನ್ಸಿ ಸ್ವಿಗ್ಗಿಯಲ್ಲಿ ಕೆಲಸ ಸಿಕ್ಕಿತ್ತು.

ಬ್ಯಾಟರಿ ಚಾಲಿತ ದ್ವಿಚಕ್ರ ವಾಹನವನ್ನು ಒಂದೇ ಕೈಯಲ್ಲಿ ಚಲಾಯಿಸುತ್ತಾ ನಿಗದಿತ ಮನೆಗಳಿಗೆ ಆಹಾರ ತಲುಪಿಸುತ್ತಿದ್ದಾರೆ. ದಿನಕ್ಕೆ ಕನಿಷ್ಠ ₹ 600 ದುಡಿಯುತ್ತಿದ್ದು, ಬ್ಯಾಟರಿ ಚಾಲಿತ ದ್ವಿಚಕ್ರ ವಾಹನದ ಬಾಡಿಗೆ ₹ 200 ನೀಡಿ ಉಳಿದ ಆದಾಯದಲ್ಲಿ ತಾನೂ ಜೀವನ ನಡೆಸಿ, ಉತ್ತರ ಪ್ರದೇಶದಲ್ಲಿರುವ ಹೆತ್ತವರಿಗೂ ಪ್ರತಿ ತಿಂಗಳು ಹಣ ಕಳುಹಿಸುತ್ತಿದ್ದಾರೆ.

‘ನನ್ನ ತಮ್ಮಂದಿರು ಮುಂಬೈಯಲ್ಲಿ ದುಡಿಯುತ್ತಿದ್ದಾರೆ. ನಮ್ಮೂರಿನಲ್ಲಿ ದುಡಿಮೆಗೆ ಕೆಲಸವೇ ಸಿಗಲಿಲ್ಲ. ಬೆಂಗಳೂರು ನನಗೆ ಅನ್ನ ನೀಡಿದ ನಗರ. ಒಂದು ಕೈ ಇಲ್ಲದೇ ಇದ್ದರೂ ಕೆಲಸ ಕೊಟ್ಟಿದ್ದಾರೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ದುಡಿದಿರುವುದನ್ನೆಲ್ಲ ನಾನೇ ಖರ್ಚು ಮಾಡಿದರೆ ಅಪ್ಪ ಅಮ್ಮನಿಗೆ ಕಷ್ಟ ಆಗುತ್ತದೆ. ಅದಕ್ಕೆ ಪ್ರತಿತಿಂಗಳು ಹಣ ಉಳಿಸಿ ಕಳುಹಿಸುತ್ತಿದ್ದೇವೆ. ದುಡಿಮೆಯ ಜೊತೆಗೆ ಒಂದಷ್ಟು ಟಿಪ್ಸ್ ಕೂಡ ಸಿಗುತ್ತಿದೆ’ ಎಂದು ಹೇಳಿದರು.

ಮಣಿಪುರದಲ್ಲಿ ಶಾಂತಿ ಸ್ಥಾಪನೆ: ರಾಷ್ಟ್ರಪತಿ ಮುರ್ಮುಗೆ ಪತ್ರ

ಬೆಂಗಳೂರು: ಮಣಿಪುರದಲ್ಲಿ ಹಿಂಸಾಚಾರ ಕೊನೆಗಾಣಿಸಬೇಕು. ಶಾಂತಿ, ಸೌಹಾರ್ದ ಮರುಸ್ಥಾಪನೆ ಮಾಡಬೇಕು ಎಂದು ಆಗ್ರಹಿಸಿ ಸಾಮಾ ಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದೆ.

ಮಣಿಪುರದಲ್ಲಿ 3 ತಿಂಗಳಲ್ಲಿ 200ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದು, 800ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. 70 ಸಾವಿರಕ್ಕೂ ಅಧಿಕ ಮಂದಿ ಸ್ಥಳಾಂತರಗೊಂಡಿದ್ದಾರೆ. ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ. ಇದನ್ನು ನಿಯಂತ್ರಿಸಲು ಭಾರತ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ದೇಶದ ವಿವಿಧೆಡೆ ಸಾಮಾಜಿಕ ಅಸ್ಥಿರತೆ, ಅಶಾಂತಿ, ಅಭದ್ರತೆ ಸೃಷ್ಟಿಯಾಗಿದೆ. ವಿಶ್ವಾಸ, ಸಹೋದರ ಭಾವನೆ, ನಾಗರಿಕತೆ, ಪರಸ್ಪರ ನಂಬಿಕೆ ಕಳೆದು ಹೋಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಸೋಮವಾರ, ಆಗಸ್ಟ್ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 218 | ಪುಟ 12

• www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
'ಪರಿಸರ ಪಯಣ'ದಲ್ಲಿ ಜೀವವೈವಿಧ್ಯದ ಕಲಿಕೆ

ಮಹಿಳಾ ಮತ
ಸಂಘರ್ಷದ ಉನ್ಮಾದ: ಹೆಣ್ಣು ಮಕ್ಕಳೇ ಗುರಿ

ಹಣದುಬ್ಬರದ ಆತಂಕ: ಬಡ್ಡಿದರ ಯಥಾಸ್ಥಿತಿ ಸಂಭವ 8

ಪರಿಷತ್ ಸ್ಥಾನ, ಲೋಕಸಭೆ ಟಿಕೆಟ್‌ಗೆ ಹಟ 4

ಸೌಜನ್ಯಾ ಪ್ರಕರಣ; ಪುತ್ತೂರಿನಲ್ಲಿ ಗೌಡ ಸಮುದಾಯದ ಸಭೆ

ಮರು ತನಿಖೆಗೆ ಒತ್ತಾಯ 4

ಅವಿಶ್ವಾಸ ನಿರ್ಣಯ ಮೇಲೆ ಚರ್ಚೆ • ದೆಹಲಿ ಸೇವೆಗಳ ಮಸೂದೆ ರಾಜ್ಯಸಭೆಯಲ್ಲಿ ಮಂಡನೆ

ಸದನ: ಸಂಘರ್ಷ ಸಾಧ್ಯತೆ ಅಧಿಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಅವಿಶ್ವಾಸ ನಿರ್ಣಯ, ದೆಹಲಿ ಸೇವೆಗಳ ನಿಯಂತ್ರಣ ಮಸೂದೆ, ಮಣಿಪುರ ಹಿಂಸಾಚಾರ ಕುರಿತ ಚರ್ಚೆಗೆ ಸಂಬಂಧಿಸಿ ಉಂಟಾಗಿರುವ ಬಿಕ್ಕಟ್ಟು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಂಸತ್ ಸ್ಥಾನ ಮರುಸ್ಥಾಪನೆ ವಿಚಾರಗಳು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಸೋಮವಾರ ಗದ್ದಲ ಸೃಷ್ಟಿಸುವ ಸಾಧ್ಯತೆ ಇದೆ. ಅಧಿವೇಶನವು ಶುಕ್ರವಾರ ಮುಕ್ತಾಯವಾಗಲಿದೆ.

ದೆಹಲಿ ಸೇವೆಗಳ ನಿಯಂತ್ರಣ ಮಸೂದೆಯು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ರಾಜ್ಯಸಭೆಯಲ್ಲಿ ಸಂಘರ್ಷಕ್ಕೆ ಕಾರಣವಾಗಬಹುದು. ಅವಿಶ್ವಾಸ ನಿರ್ಣಯದ ಮೇಲಿನ ಮೂರು ದಿನಗಳ ಚರ್ಚೆಯು ಮಂಗಳವಾರ ಆರಂಭವಾಗಲಿದೆ.

ರಾಹುಲ್ ಗಾಂಧಿ ಅವರು ಮಾನನಷ್ಟ ಮೊಕದ್ದಮೆಯಲ್ಲಿ ತಪ್ಪಿತಸ್ಥ ಎಂದು ಸೂರತ್ ನ್ಯಾಯಾಲಯ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆ ನೀಡಿರುವ ಕಾರಣ, ಲೋಕಸಭಾ ಕಾರ್ಯಾಲಯ ಯಾವ ತೀರ್ಮಾನ ಕೈಗೊಳ್ಳಲಿದೆ ಎಂದು ಕಾಂಗ್ರೆಸ್ ಹಾಗೂ 'ಇಂಡಿಯಾ' ಮೈತ್ರಿಕೂಟದ ಇತರ ಪಕ್ಷಗಳು ಕಾಯುತ್ತಿವೆ.

ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಅನರ್ಹಗೊಳಿಸಿದ್ದನ್ನು ತೆರವುಗೊಳಿಸಿದಲ್ಲಿ, ಅವರು ಕಲಾಪಕ್ಕೆ ಹಾಜರಾಗಬಹುದು. ಕೇಂದ್ರ ಸರ್ಕಾರದ ಮೇಲಿನ ಅವಿಶ್ವಾಸ ನಿರ್ಣಯದ ಚರ್ಚೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ರಾಹುಲ್ ಅವರಿಗೆ ವಹಿಸುವ ಮೂಲಕ ಸಂಸತ್ತಿಗೆ ಅವರು ಭರ್ಜರಿಯಾಗಿ ಮರುಪ್ರವೇಶಿಸುವಂತೆ ಮಾಡುವುದು ಕಾಂಗ್ರೆಸ್‌ನ ಯೋಜನೆಯಾಗಿದೆ.

ಈ ವಿಚಾರವಾಗಿ ಲೋಕಸಭಾ ಕಾರ್ಯಾಲಯ ತೀರ್ಮಾನ ಕೈಗೊಳ್ಳುವುದನ್ನು ವಿಳಂಬ ಮಾಡಿದಲ್ಲಿ, ಅದು ಲೋಕಸಭೆಯಲ್ಲಿ ಭಾರಿ ಗದ್ದಲಕ್ಕೆ ಕಾರಣವಾಗುವ ಸಾಧ್ಯತೆ ಹೆಚ್ಚು.

ಅವಿಶ್ವಾಸ ನಿರ್ಣಯ ಕುರಿತು ಚರ್ಚೆಗೆ ಕಲಾಪ ಸಲಹಾ ಸಮಿತಿಯು 12 ಗಂಟೆಗಳಷ್ಟು ಕಾಲಾವಕಾಶ ನಿಗದಿ ಮಾಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಉತ್ತರ ನೀಡುವ ನಿರೀಕ್ಷೆ ಇದೆ.

ಮಣಿಪುರ ಪರಿಸ್ಥಿತಿ ಕುರಿತು ಸಂಸತ್‌ನಲ್ಲಿ ಪ್ರಧಾನಿ ಮೋದಿ ಹೇಳಿಕೆ ನೀಡಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಿತ್ತು. ಹೀಗಾಗಿ, ಮೋದಿ ಅವರು ಈ ವಿಷಯವಾಗಿ ಸಂಸತ್‌ನಲ್ಲಿ ಮಾತನಾಡುವುದನ್ನು ಖಾತರಿಪಡಿಸಲು ವಿಪಕ್ಷಗಳು ಅವಿಶ್ವಾಸ ನಿರ್ಣಯದ ತಂತ್ರಗಾರಿಕೆ ಮೊರೆ ಹೋಗಿವೆ.

ದೆಹಲಿ ಮಸೂದೆ: ವಿವಾದಾತ್ಮಕ ದೆಹಲಿ ಸೇವಾ ವಿಷಯಗಳ ಮೇಲಿನ ನಿಯಂತ್ರಣ ಕುರಿತ ಸುಗ್ರೀವಾಜ್ಞೆ ಬದಲಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿತ್ತು.

ಮಣಿಪುರ ಪರಿಸ್ಥಿತಿ ಕುರಿತು ಚರ್ಚೆಗೆ ಪಟ್ಟುಹಿಡಿದಿದ್ದ ವಿಪಕ್ಷಗಳು, ಮಸೂದೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲಿಲ್ಲ. ಕೊನೆಗೆ ವಿಪಕ್ಷಗಳ ಸಭಾತ್ಯಾಗದ ನಡುವೆ, ಮಸೂದೆಯನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು.

ರಾಹುಲ್ ಸಂಸದ ಸ್ಥಾನ ಮರುಸ್ಥಾಪನೆ ಆಗಲಿದೆಯೇ?



ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಮರುಸ್ಥಾಪನೆ ಕುರಿತು ಲೋಕಸಭೆ ಕಾರ್ಯಾಲಯವು ಸೋಮವಾರ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ. ಮೋದಿ ಉಪನಾಮ ಹೇಳಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಆದೇಶದ ಪ್ರತಿಯನ್ನು ಲೋಕಸಭಾ ಕಾರ್ಯಾಲಯಕ್ಕೆ ಕಾಂಗ್ರೆಸ್ ಈಗಾಗಲೇ ಸಲ್ಲಿಸಿದೆ. ಹಾಗಾಗಿ, ರಾಹುಲ್ ಗಾಂಧಿ ಅವರ ಸಂಸದ ಸ್ಥಾನ ಮರುಸ್ಥಾಪನೆ ಕುರಿತು ಕೈಗೊಳ್ಳುವ ತೀರ್ಮಾನಕ್ಕೆ ಮಹತ್ವ ಬಂದಿದೆ.

ಮಂಡನೆ ಆಗಲಿರುವ ಮಸೂದೆಗಳು

ಜುಲೈ 20ರಂದು ಮುಂಗಾರು ಅಧಿವೇಶನ ಆರಂಭವಾದಾಗಿನಿಂದ ಈ ವರೆಗೆ ಲೋಕಸಭೆಯಲ್ಲಿ 15 ಹಾಗೂ ರಾಜ್ಯಸಭೆಯಲ್ಲಿ 12 ಮಸೂದೆಗಳನ್ನು ಅಂಗೀಕರಿಸಲಾಗಿದೆ.

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ, ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ತಿದ್ದುಪಡಿ ಮಸೂದೆ, ಸಂಧಾನ ಮಸೂದೆಗಳನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಜನನ ಮತ್ತು ಮರಣಗಳ ನೋಂದಣಿ (ತಿದ್ದುಪಡಿ) ಮಸೂದೆ ರಾಜ್ಯಸಭೆಯಲ್ಲಿ ಮಂಡನೆಯಾಗಲಿದೆ.

ಇದು ರಾಹುಲ್ ಗಾಂಧಿ ಅವರಿಗೆ ಸಂಬಂಧಿಸಿದ ಪ್ರಶ್ನೆ ಮಾತ್ರ ಅಲ್ಲ. ಅವರು ಪ್ರತಿನಿಧಿಸುವ ವಯನಾಡ್ ಕ್ಷೇತ್ರದ ಜನರ ವಿಷಯವೂ ಆಗಿದೆ
ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ)

ಕೇಂದ್ರ ಸರ್ಕಾರವು ರಾಹುಲ್ ಗಾಂಧಿ ಅವರಿಗೆ ಹೆದರಿದೆ. ಇದೇ ಕಾರಣಕ್ಕೆ ಅವರನ್ನು ಮತ್ತೆ ಸಂಸದರಾಗಿ ಸ್ಥಾಪಿಸುವುದನ್ನು ವಿಳಂಬ ಮಾಡಲಾಗುತ್ತಿದೆ
ಸಂಜಯ್ ರಾವುತ್
ಶಿವಸೇನಾ (ಯುಬಿಟಿ) ಸಂಸದ

ರಾಹುಲ್ ಅವರ ಸಂಸದ ಸ್ಥಾನವನ್ನು ಮರುಸ್ಥಾಪನೆ ಮಾಡಿಲ್ಲವೇಕೆ? ಸಂಸತ್‌ನಲ್ಲಿ ರಾಹುಲ್ ಹಾಜರಿರುವುದಕ್ಕೆ ಬಿಜೆಪಿ ಹೆದರಿದೆಯೆ?
ಎಂ.ಕೆ.ಸ್ಟಾಲಿನ್
ತಮಿಳುನಾಡು ಮುಖ್ಯಮಂತ್ರಿ

ಲೋಕಸಭಾ ಕಾರ್ಯಾಲಯವು ಸುಪ್ರೀಂಕೋರ್ಟ್ ಆದೇಶ ಪಾಲನೆ ಮಾಡಬೇಕು. ಈ ವಿಷಯದಲ್ಲಿನ ಯಾವುದೇ ವಿಳಂಬ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ
ಮಹುವಾ ಮೊಯಿತ್ರಾ
ಟಿಎಂಸಿ ಸಂಸದೆ

ಧ್ವಂಸದ 'ಶಿಕ್ಷೆ' ಹರಿಯಾಣದ ನೂಹ್‌ನಲ್ಲಿ ನಡೆದ ಹಿಂಸಾಚಾರದ ವೇಳೆ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಲು ಬಳಸಿಕೊಂಡಿದ್ದರು ಎನ್ನಲಾದ ಕಟ್ಟಡವನ್ನು ನೆಲಸಮಗೊಳಿಸುವ ಕಾರ್ಯಾಚರಣೆಯನ್ನು ಅಧಿಕಾರಿಗಳು ಭಾನುವಾರ ನಡೆಸಿದರು –ಪಿಟಿಐ ಚಿತ್ರ 9

ಕ್ವಿಟ್ 'ಇಂಡಿಯಾ': ಮೋದಿ

ಟೀಕಿಸುವುದೇ ವಿರೋಧ ಪಕ್ಷಗಳ ಚಾಳಿ: ಪ್ರಧಾನಿ ವಾಗ್ದಾಳಿ

ನವದೆಹಲಿ (ಪಿಟಿಐ): ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಹಾಗೂ ಭಯೋತ್ಪಾದನಾ ಸಂಘಟನೆಗಳಲ್ಲಿ ಕೂಡ 'ಇಂಡಿಯಾ' ಎಂಬುದು ಇದೆ ಎಂದು ಪ್ರತಿಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ'ವನ್ನು ಲೇವಡಿ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಈಗ 'ಕ್ವಿಟ್ ಇಂಡಿಯಾ' ಚಳವಳಿ ಉಲ್ಲೇಖಿಸಿ ಟೀಕಾಪ್ರಹಾರ ನಡೆಸಿದ್ದಾರೆ.

ಅಮೃತ ಭಾರತ ನಿಲ್ದಾಣ ಯೋಜನೆಯಡಿ ದೇಶದ ವಿವಿಧ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮಕ್ಕೆ ಭಾನುವಾರ ವರ್ಚುವಲ್ ಆಗಿ ಚಾಲನೆ ನೀಡಿದ ಬಳಿಕ ಅವರು, ಪ್ರತಿಪಕ್ಷಗಳ ಕಾರ್ಯವೈಖರಿ ವಿರುದ್ಧ ಹರಿಹಾಯ್ದರು.

'ಕ್ವಿಟ್ ಇಂಡಿಯಾ' ಚಳವಳಿಯ ವರ್ಷಾಚರಣೆಯು ಆಗಸ್ಟ್ 9ರಂದು ನಡೆಯಲಿರುವುದನ್ನು ಉಲ್ಲೇಖಿಸಿದ ಅವರು, 'ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಶಕ್ತಿ ನೀಡಿದ ಈ ದಿನವನ್ನು ಎಂದಿಗೂ ಮರೆಯಲಾಗದು' ಎಂದು ಸ್ಮರಿಸಿದರು.

ನಾವು ಅಮೃತ ಕಾಲಘಟ್ಟದ ಹೊಸ್ತಿಲಿನಲ್ಲಿದ್ದೇವೆ. ಅಭಿವೃದ್ಧಿಯೇ ನಮ್ಮ ಗುರಿ. ರೈಲ್ವೆ ಇತಿಹಾಸದಲ್ಲಿ ಹೊಸ ಅಧ್ಯಾಯ ಶುರುವಾಗಿದೆ
ನರೇಂದ್ರ ಮೋದಿ, ಪ್ರಧಾನಿ

ಭ್ರಷ್ಟಾಚಾರ, ಕುಟುಂಬ ರಾಜಕಾರಣ ಹಾಗೂ ತುಷ್ಟೀಕರಣವೇ 'ಇಂಡಿಯಾ'ದ ಬೀಜಮಂತ್ರವಾಗಿವೆ. ದೇಶದಿಂದ ಇವುಗಳನ್ನು ತೊಲಗಿಸುವ ಸಮಯ ಬಂದಿದೆ. 'ಪ್ರತಿಯೊಂದು ಕೆಡುಕು ತೊಲಗಲಿ', 'ಭ್ರಷ್ಟಾಚಾರ ತೊಲಗಲಿ', 'ತುಷ್ಟೀಕರಣ ತೊಲಗಲಿ' ಎಂದು ಇಡೀ ದೇಶವೇ ಗರ್ಜಿಸುತ್ತಿದೆ ಎಂದು ಮೋದಿ ಹೇಳಿದರು.

'ವಿರೋಧ ಪಕ್ಷಗಳು ಒಳ್ಳೆಯ ಕೆಲಸವನ್ನು ಮಾಡುವುದಿಲ್ಲ; ಬೇರೆಯವರು ಮಾಡಿದರೂ ಸಹಿಸುವುದಿಲ್ಲ. ಟೀಕಿಸುವುದನ್ನೇ ಪ್ರವೃತ್ತಿ ಮಾಡಿಕೊಂಡಿದ್ದು ನಕಾರಾತ್ಮಕ ರಾಜಕೀಯಕ್ಕೆ ಇಳಿದಿವೆ' ಎಂದು ಆರೋಪಿಸಿದರು.

ಕೇಂದ್ರ ಸರ್ಕಾರವು ಸುಸಜ್ಜಿತವಾದ ಸಂಸತ್ ಭವನ ನಿರ್ಮಿಸಿದೆ. ಇದು ಸರ್ಕಾರ ಮತ್ತು ಪ್ರತಿಪಕ್ಷಗಳು ಪ್ರತಿನಿಧಿಸುವ ಪ್ರಜಾಪ್ರಭುತ್ವದ ಹೆಗ್ಗುರುತಾಗಿದೆ. ದೇಶದ ಹೆಮ್ಮೆಯ ಪ್ರತೀಕವಾದ ಇದಕ್ಕೂ ವಿರೋಧ ಕೇಳಿಬಂತು. ಎಪ್ಪತ್ತು ವರ್ಷಗಳಾದರೂ ಹುತಾತ್ಮರ ಸ್ಮಾರಕ ನಿರ್ಮಿಸಲಿಲ್ಲ. ಇದನ್ನು ನಾವು ಪೂರ್ಣಗೊಳಿಸಿದಾಗ ಅಪಸ್ವರ ಕೇಳಿಬಂದಿತು. ಕರ್ತವ್ಯ ಪಥದ ಅಭಿವೃದ್ಧಿಗೂ ವಿರೋಧದ ಕೂಗು ಎದ್ದಿತು. ಲಜ್ಜೆಗೆಟ್ಟಿರುವ ವಿರೋಧ ಪಕ್ಷಗಳು ಎಲ್ಲವನ್ನೂ ವಿರೋಧಿಸುವ ಗುಣವನ್ನು ಮೈಗೂಡಿಸಿಕೊಂಡಿವೆ. ಇದು ದೇಶದ ದುರದೃಷ್ಟ ಎಂದು ಟೀಕಿಸಿದರು.

ಇನ್ನೊಂದು ಸುದ್ದಿ 9

ಕ್ರಾಂತಿಕಾರಿ ಗೀತೆಗಳ ಗಾಯಕ ಗದ್ದರ್ ನಿಧನ

ಹೈದರಾಬಾದ್ (ಪಿಟಿಐ): 'ಗದ್ದರ್' ಎಂದೇ ಹೆಸರುವಾಸಿಯಾಗಿದ್ದ ತೆಲಂಗಾಣದ ಕ್ರಾಂತಿಕಾರಿ ಗಾಯಕ ಗುಮ್ಮಡಿ ವಿಠ್ಠಲ ರಾವ್ (77) ಅವರು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.



'ಶ್ವಾಸಕೋಶ ಮತ್ತು ಮೂತ್ರ ಸಂಬಂಧಿ ಸಮಸ್ಯೆ ಕಾಣಿಕೊಂಡ ಕಾರಣ ಅವರನ್ನು ಇಲ್ಲಿನ ಅಪೋಲೊ ಸ್ಪೆಕ್ಟ್ರಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದಕ್ಕೂ ಮುನ್ನ ಹೃದಯ ಸಂಬಂಧಿ ಸಮಸ್ಯೆ ಕಾಣಿಸಿಕೊಂಡ ಕಾರಣ ಇದೇ ಆಸ್ಪತ್ರೆಗೆ ದಾಖಲಾಗಿ ಆಗಸ್ಟ್ 3ರಂದು ಬೈಪಾಸ್ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು' ಎಂದು ಆಸ್ಪತ್ರೆಯು ಹೇಳಿಕೆಯಲ್ಲಿ ತಿಳಿಸಿದೆ.

ಗದ್ದರ್ ಅವರು 1949ರಲ್ಲಿ ಮೆದಕ್ ಜಿಲ್ಲೆಯ ತೂಫ್ರಾನ್‌ನಲ್ಲಿ ಜನಿಸಿದ್ದರು. 1980ರ ದಶಕದಲ್ಲಿ ಹಲವು ಚಳವಳಿಗಳಿಗೆ ತಮ್ಮ ಹಾಡಿನ ಮೂಲಕ ಸ್ಫೂರ್ತಿ ತುಂಬಿದ್ದರು. ತೆಲಂಗಾಣ ಪ್ರತ್ಯೇಕ ರಾಜ್ಯ ರಚನೆಗೆ ನಡೆದ ಚಳವಳಿ ಸಂದರ್ಭದಲ್ಲಿ ತಮ್ಮ ಕ್ರಾಂತಿಕಾರಿ ಗೀತೆಗಳ ಮೂಲಕ ಹೋರಾಟದ ಪ್ರೇರಕಶಕ್ತಿಯಾಗಿದ್ದರು. ದಶಕಗಳ ಹಿಂದೆ ಗದ್ದರ್ ಅವರ, 'ಪೊಡುಸ್ತುನ್ನ ಪೊದ್ದು ಮೀದಾ ನಡುಸ್ತುನ್ನ ಕಾಲಮಾ ಪೋರು ತೆಲಂಗಾನಮ' ಹಾಡು ತೆಲಂಗಾಣ ಹೋರಾಟ ಚಳವಳಿಯ ಕ್ರಾಂತಿಗೀತೆಯಾಗಿತ್ತು.

4ನೇ ಪುಟ ನೋಡಿ

ಶಾಸಕರ ಸಿಟ್ಟು ತಣಿಸಲು ಸಿ.ಎಂ ಕಸರತ್ತು

6 ಜಿಲ್ಲೆಗಳ ಶಾಸಕರ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ (ಸಿಎಲ್‌ಪಿ) ಮಾತು ಕೊಟ್ಟಂತೆ ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ (ಆಗಸ್ಟ್ 7) ಕರೆದಿದ್ದಾರೆ.

ವರ್ಗಾವಣೆ ಶಿಫಾರಸು ಮತ್ತು ಅನುದಾನ ವಿಚಾರದಲ್ಲಿ ಸಚಿವರು ಸ್ಪಂದಿಸುತ್ತಿಲ್ಲವೆಂದು ಪತ್ರ ಬರೆದು ಕೆಲವು ಶಾಸಕರು ಅಪಸ್ವರ ಎತ್ತಿದ ಕಾರಣದಿಂದಾಗಿ ಈ ಸಭೆ ನಿಗದಿಯಾಗಿದೆ.

ಮೊದಲ ಹಂತದಲ್ಲಿ ತುಮಕೂರು, ಯಾದಗಿರಿ, ಚಿತ್ರದುರ್ಗ, ಬಾಗಲಕೋಟೆ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳ ಉಸ್ತುವಾರಿ ಸಚಿವರು, ಸಚಿವರು ಹಾಗೂ ಶಾಸಕರ ಜೊತೆ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸಭೆ ನಡೆಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡಾ ಇರಲಿದ್ದಾರೆ.

ತಮ್ಮ ಬೇಡಿಕೆಗಳಿಗೆ ಮನ್ನಣೆ ನೀಡುತ್ತಿಲ್ಲವೆಂದು 30ಕ್ಕೂ ಹೆಚ್ಚು ಶಾಸಕರು ಮುಖ್ಯಮಂತ್ರಿಗೆ ಪತ್ರ ಬರೆದು ಇತ್ತೀಚೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೆ, ಶಾಸಕಾಂಗ ಪಕ್ಷದ ಸಭೆ ಕರೆಯುವಂತೆಯೂ ಒತ್ತಾಯಿಸಿದ್ದರು. ಆಳಂದ ಶಾಸಕ ಬಿ.ಆರ್. ಪಾಟೀಲ ಅವರ ಹೆಸರಿನಲ್ಲಿ ಮುಖ್ಯಮಂತ್ರಿಗೆ ಬರೆಯಲಾಗಿದೆ ಎಂಬ ಪತ್ರವೊಂದು ಕಾಂಗ್ರೆಸ್ ವಲಯದಲ್ಲಿ ಚರ್ಚೆಗೂ ಗ್ರಾಸವಾಗಿತ್ತು. ಹೀಗಾಗಿ ಹೋಟೆಲ್ ರ‍್ಯಾಡಿಸನ್ ಬ್ಲೂನಲ್ಲಿ ಜುಲೈ 27ರಂದು ಸಭೆ ನಡೆದಿತ್ತು. ಸಭೆಯಲ್ಲಿ ಮಾತನಾಡಿದ್ದ ಕೆಲವು ಹಿರಿಯ ಶಾಸಕರು, ಸಚಿವರ ಕಾರ್ಯವೈಖರಿಯನ್ನು ನೇರವಾಗಿಯೇ ಪ್ರಶ್ನಿಸಿದ್ದರು.

ಆ ಸಭೆಯಲ್ಲಿ ಶಾಸಕರಿಗೆ ಮಾತು ನೀಡಿದ್ದ ಸಿದ್ದರಾಮಯ್ಯ, 'ಏನೇ ಅಸಮಾಧಾನಗಳಿದ್ದರೂ ನೇರವಾಗಿ ನನಗೆ ಹೇಳಿ. ಪಕ್ಷದ ವೇದಿಕೆಯಲ್ಲಿ ಚರ್ಚಿಸಿ. ಮಾಧ್ಯಮಗಳ ಮುಂದೆ ಮಾತನಾಡಬೇಡಿ' ಎಂದು ಸಲಹೆ ನೀಡಿದ್ದರು. ಅಲ್ಲದೆ, 'ಆಡಳಿತಾತ್ಮಕ ಒತ್ತಡಗಳಿದ್ದರೂ ತಿಂಗಳಿಗೊಮ್ಮೆ ಜಿಲ್ಲಾವಾರು ಶಾಸಕರ ಸಭೆ ಕರೆದು ಕ್ಷೇತ್ರಗಳ ಕುಂದುಕೊರತೆಗಳ ಬಗ್ಗೆ ಚರ್ಚಿಸುತ್ತೇನೆ. ಸರ್ಕಾರದಿಂದ ತುರ್ತಾಗಿ ಆಗಬೇಕಿರುವ ಕೆಲಸಗಳು ಸಮರ್ಪಕವಾಗಿ ಆಗುವಂತೆ ನೋಡಿಕೊಳ್ಳುತ್ತೇನೆ' ಎಂದು ಭರವಸೆ ನೀಡಿದ್ದರು.

ಮಣಿಪುರ: 15 ಮನೆಗಳಿಗೆ ಬೆಂಕಿ

ಇಂಫಾಲ್: ಸಂಘರ್ಷ ಪೀಡಿತ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ದುಷ್ಕರ್ಮಿಗಳು 15 ಮನೆಗಳಿಗೆ ಬೆಂಕಿ ಇಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು. 9

ಒಳ ಪುಟಗಳು

ಒಳಮೀಸಲಾತಿ ಶಿಫಾರಸು ವಾಪಸ್‌ಗೆ ಪಟ್ಟು 4

ಬಾಲಕರಿಗೆ ಮೂತ್ರ ಕುಡಿಸಿದ ಗುಂಪು 9

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಿಡಿಎ: ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್‌ನಲ್ಲಿ ನಿವೇಶನದಾರರಿಗೆ ನಡುಕ

ನಕ್ಷೆಯಲ್ಲಿ ಉದ್ಯಾನ, ಲೇಔಟ್‌ನಲ್ಲಿ ಸ್ಮಶಾನ

● ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಉದ್ಯಾನ ನಿರ್ಮಿಸುವುದಾಗಿ ನಕ್ಷೆಯಲ್ಲಿ ತೋರಿಸಿದ್ದ ಬಿಡಿಎ, ನಿವೇಶನಗಳ ಹಂಚಿಕೆಯಾದ ಮೇಲೆ ಸ್ಮಶಾನಕ್ಕೆ ಅವಕಾಶ ಮಾಡಿಕೊಟ್ಟಿದೆ. ಈಗಲೂ ಇಲ್ಲಿ ಶವಗಳನ್ನು ಹೂಳುತ್ತಿದ್ದು, ನಿವೇಶನದಾರರು ಮನೆ ಕಟ್ಟಿಕೊಳ್ಳದೆ ಕಂಗಾಲಾಗಿದ್ದಾರೆ.

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್‌ನಲ್ಲಿ 6 ಮತ್ತು 18ನೇ ಸಂಖ್ಯೆಯ ನಾಗರಿಕ ಸೌಲಭ್ಯಗಳ ನಿವೇಶನಗಳಲ್ಲಿ ಉದ್ಯಾನ ನಿರ್ಮಿಸುವುದಾಗಿ ಬಿಡಿಎ ಬಡಾವಣೆ ನಕ್ಷೆಯಲ್ಲಿ ಸ್ಪಷ್ಟವಾಗಿ ನಮೂದಿಸಿದೆ. ಆದರೆ, 'ಬಿಡಿಎ' ಎಂದು ಗೇಟ್ ಹಾಕಿರುವುದು ಬಿಟ್ಟರೆ ಉಳಿದ ಯಾವ ಕೆಲಸವೂ ಇಲ್ಲಿ ಆಗಿಲ್ಲ. ಇಲ್ಲಿ ಶವಗಳನ್ನು ಹೂಳಲಾಗುತ್ತಿದೆ. ಅವುಗಳ ಮೇಲೆ ಸ್ಮಾರಕವನ್ನೂ ಕಟ್ಟಲಾಗುತ್ತಿದೆ. ಸುತ್ತಮುತ್ತ ವಾಸಿಸುತ್ತಿರುವವರು ಇದರಿಂದ ಭಯಗೊಂಡಿದ್ದಾರೆ. ನಿವೇಶನಗಳಿರುವವರು ಮನೆ ಕಟ್ಟಲು ಹಿಂಜರಿಯುತ್ತಿದ್ದಾರೆ.

ಸ್ಮಶಾನದ ಮುಂದೆ ಅಥವಾ ಅಕ್ಕಪಕ್ಕ ಮನೆ ನಿರ್ಮಿಸಲು ಸಹಜವಾಗಿ ಯಾರೂ ಮುಂದಾಗುವುದಿಲ್ಲ. ಹಲವು ವರ್ಷಗಳ ಬಳಿಕ ಬಿಡಿಎ ನಿವೇಶನ ದೊರೆತ ಸಂತಸದಲ್ಲಿದ್ದ ನಾಗರಿಕರಿಗೆ, ಮನೆ ಕಟ್ಟಲು ಸ್ಥಳಕ್ಕೆ ಹೋದ ಸಂದರ್ಭದಲ್ಲಿ 'ಹೊಸ ಸ್ಮಾರಕ'ಗಳು ತಲೆ ಎತ್ತಿರುವುದು ನಡುಕ ಉಂಟುಮಾಡಿದೆ.

'ಉದ್ಯಾನದ ಎದುರು ನಿವೇಶನ ಸಿಕ್ಕಿದೆ ಎಂದು ಖುಷಿಯಲ್ಲಿದ್ದೆವು. ಮನೆ ಕಟ್ಟಲು ಮುಂದಾದಾಗ ಅಲ್ಲಿ ಸ್ಮಶಾನ ಇತ್ತು. ಈ ಬಗ್ಗೆ ಬಿಡಿಎ ಎಂಜಿನಿಯರ್‌ಗಳನ್ನು ಕೇಳಿದರೆ ಹಾರಿಕೆ ಉತ್ತರ ನೀಡಿದರು. ಸ್ಥಳೀಯ ಎಂಜಿನಿಯರ್‌ಗಳು ದೂರು ತೆಗೆದುಕೊಳ್ಳುವುದಿಲ್ಲ. ಮನೆ ನಿರ್ಮಿಸಲು ಕುಟುಂಬದವರು ಒಪ್ಪುತ್ತಿಲ್ಲ. ಮಕ್ಕಳು ಹೆದರುತ್ತಿದ್ದಾರೆ' ಎಂದು ನಿವೇಶನದ ಮಾಲೀಕರೊಬ್ಬರು ಹೇಳಿದರು.

'ಉದ್ಯಾನ ನಿರ್ಮಾಣವಾಗುತ್ತದೆ ಎಂಬ ಸಂತಸದಲ್ಲಿದ್ದ ನಮಗೆ ಬಿಡಿಎ ಎಂಜಿನಿಯರ್‌ಗಳ ಮಾತಿನಿಂದ ಭಯ ಉಂಟಾಗಿದೆ. ಈ ನಿವೇಶನ ಬೇಡ, ಮಾರಾಟ ಮಾಡಿ ಅದೇ ಬೆಲೆಗೆ ಬೇರೆಡೆ ಖರೀದಿ ಮಾಡೋಣ ಎಂದರೆ ಯಾರೂ ಖರೀದಿಗೆ ಮುಂದಾಗುತ್ತಿಲ್ಲ. ಕೆಲವು ಅತಿ ಕಡಿಮೆ ಬೆಲೆಗೆ ಕೇಳುತ್ತಿದ್ದಾರೆ' ಎಂದು ಮತ್ತೊಬ್ಬ ನಿವೇಶನದಾರರು ಅಳಲು ತೋಡಿಕೊಂಡರು.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್‌ನಲ್ಲಿ ಉದ್ಯಾನಕ್ಕಾಗಿ ಬಿಟ್ಟಿರುವ ಜಾಗ

ಸ್ಥಳೀಯರು ಕೇಳಿದರು, ಬಿಟ್ಟಿದ್ದೇವೆ...

'30-35 ವರ್ಷಗಳಿಂದ ನಾವು ಇಲ್ಲಿ ಅಂತ್ಯಕ್ರಿಯೆ ಮಾಡುತ್ತಿದ್ದೇವೆ. ನಮಗೆ ಇಲ್ಲೇ ಅವಕಾಶ ನೀಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದರಿಂದ ಬಿಡಿಎ ಆ ಜಾಗವನ್ನು ಸ್ಮಶಾನವಾಗಿ ಬಿಟ್ಟಿದೆ. ಈ ಜಾಗವನ್ನು ಬಿಡಿಎ ತೋಟಗಾರಿಕೆ ವಿಭಾಗಕ್ಕೆ ಹಸ್ತಾಂತರಿಸಲಾಗಿದ್ದು, ಅವರು ಸ್ಮಶಾನಕ್ಕಾಗಿ ಅಭಿವೃದ್ಧಿ ಮಾಡಿಕೊಡುತ್ತಾರೆ' ಎಂದು ಬಿಡಿಎ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಭುಲಿಂಗಯ್ಯ ತಿಳಿಸಿದರು.

'ಎಂಜಿನಿಯರಿಂಗ್ ವಿಭಾಗದಿಂದ ನಮಗೆ ಈ ಜಾಗವನ್ನು ಹಸ್ತಾಂತರಿಸಿಲ್ಲ' ಎಂದು ತೋಟಗಾರಿಕೆ ವಿಭಾಗದ ಅಧಿಕಾರಿಗಳು ಹೇಳಿದರು.

ನಕ್ಷೆಯಲ್ಲೇ ತೋರಿಸಬೇಕು...

'ಹಿಂದೆ ಇದ್ದ ಸ್ಮಶಾನವನ್ನು ಮುಂದುರಿಸಬೇಕಾದರೂ ಅದನ್ನು ನಕ್ಷೆಯಲ್ಲಿ ತೋರಬೇಕು. ನಕ್ಷೆಯಲ್ಲಿ ತೋರಿಸದೆ ಇದ್ದು, ಸ್ಥಳೀಯರ ಒತ್ತಾಯಕ್ಕೆ ಮಣಿದು ಸ್ಮಶಾನ ಉಳಿಸುತ್ತೇವೆ, ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಲಾಗದು' ಎಂದು ಬಿಡಿಎ ಹಿರಿಯ ಅಧಿಕಾರಿಗಳು ಹೇಳಿದರು.

ಬಿಡಿಎ ಬೈ-ಲಾದ 4.12.1 ಮತ್ತು 4.12.2ನಲ್ಲಿ ಪಾರ್ಕ್ ಹಾಗೂ ತೆರೆದ ಪ್ರದೇಶಗಳ ಉಪಯೋಗದ ಬಗ್ಗೆ ಉಲ್ಲೇಖಿಸಲಾಗಿದೆ. ಮೈದಾನ, ಕ್ರೀಡಾಂಗಣ, ಉದ್ಯಾನ, ಈಜುಕೊಳ, ಸ್ಮಶಾನಕ್ಕೆ ಬಳಸಿಕೊಳ್ಳಬಹುದು. ಆದರೆ, ನಕ್ಷೆಯಲ್ಲಿ ಅದನ್ನು ನಮೂದಿಸಬೇಕು ಎಂದು ಸ್ಪಷ್ಟವಾಗಿದೆ ಎಂದು ತಿಳಿಸಿದರು.



ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್ ನಕ್ಷೆಯಲ್ಲಿ ಉದ್ಯಾನಕ್ಕೆ ಸ್ಥಳ ಸೂಚಿಸಿರುವುದು

ಗೋಮಾಳ: ಪರಿಹಾರ ನೀಡಿಲ್ಲ...

ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್‌ನಲ್ಲಿ 'ಪಾರ್ಕ್ 6' ಎಂದು ನಮೂದಿಸಲಾಗಿದೆ. ಉದ್ಯಾನವಾಗಿ ಅಭಿವೃದ್ಧಿಪಡಿಸಲು ಎಂಜಿನಿಯರಿಂಗ್ ವಿಭಾಗದಿಂದ ಬೇಲಿ ಹಾಕಿ, ಗೇಟ್ ಅಳವಡಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ನಿವೇಶನ ಹಂಚಲಾಗಿದೆ. ಇಲ್ಲಿ ಶವಗಳನ್ನು ಹೂಳಲಾಗುತ್ತಿದೆ ಎಂದು ಸುತ್ತಮುತ್ತಲಿನ ನಿವೇಶನಗಳ ಮಾಲೀಕರು ದೂರು ಕೊಟ್ಟಿದ್ದಾರೆ. ಇದರ ಬಗ್ಗೆ ಜಂಟಿ ಸರ್ವೆ ನಡೆಸಲಾಗಿದ್ದು, ಇದರ ಕಡತ ಎಎಲ್‌ಎಒ ಬಳಿ ಬಾಕಿ ಉಳಿದಿದೆ. ಭೂಸ್ವಾಧೀನದ ದಾಖಲೆಗಳ ಪ್ರಕಾರ, ಈ ಭೂಮಿ ಗೋಮಾಳವಾಗಿದ್ದು, ಯಾವುದೇ ಪರಿಹಾರವನ್ನೂ ನೀಡಲಾಗಿಲ್ಲ' ಎಂದು ಬಿಡಿಎ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಉದ್ಯಾನವಾಗಿಯೇ ಅಭಿವೃದ್ಧಿ ಮಾಡಿ...

'ಕೆಲವು ಗ್ರಾಮಸ್ಥರು ಸ್ಮಶಾನ ಎಂದು ಹೇಳಿಕೊಂಡು ಶವಗಳನ್ನು ಹೂಳುತ್ತಿದ್ದಾರೆ. ಬಿಡಿಎ ಒಂದು ಬಾರಿ ಸ್ವಾಧೀನಪಡಿಸಿಕೊಂಡ ಮೇಲೆ ಅದನ್ನು ಉಳಿಸಿಕೊಳ್ಳುವ ಬಗ್ಗೆ ನಕ್ಷೆಯಲ್ಲೇ ತಿಳಿಸಬೇಕು. ಬಿಡಿಎ ಬೇರೆ ಕಡೆ 'ಸ್ಮಶಾನ'ಕ್ಕೆ ಜಾಗ ಮಾಡಿಕೊಡಲಿ. ಬಡಾವಣೆ ಮಧ್ಯೆ ಇದೆಲ್ಲ ಇರಬಾರದು' ಎಂದು ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ ನಿವಾಸಿಗಳ ಸಂಘದ ಅಧ್ಯಕ್ಷ ಡಿ.ಎಸ್.ಗೌಡ ಆಗ್ರಹಿಸಿದರು.

ಸುದ್ದಿ 2 ನಿಮಿಷ

'ಗ್ಯಾರಂಟಿ' ಯೋಜನೆಗೆ ಪರಿಶಿಷ್ಟರ ಅನುದಾನ ಬಳಕೆಗೆ ವಿರೋಧ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗೆ ಮೀಸಲಿರಿಸಿದ್ದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದ ₹ 11 ಸಾವಿರ ಕೋಟಿ ಮೊತ್ತವನ್ನು ಗ್ಯಾರಂಟಿ ಯೋಜನೆಗಳ ಜಾರಿಗೆ ಬಳಸುತ್ತಿರುವುದನ್ನು ಭೀಮ್ ಆರ್ಮಿ ಸಂಘಟನೆ ಖಂಡಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ರಾಜಗೋಪಾಲ್ ಡಿ., 'ಕಾಂಗ್ರೆಸ್ ಸರ್ಕಾರ ಎಸ್‌ಸಿಎಸ್‌ಪಿ-ಟಿಎಸ್‌ಪಿ ಹಣವನ್ನು ಕೂಡಲೇ ಹಿಂದಿರುಗಿಸಬೇಕು' ಎಂದು ಆಗ್ರಹಪಡಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ನ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಜಾರಿಗೆ ಬಳಸುತ್ತೇವೆ ಎಂದು ಹೇಳಿರಲಿಲ್ಲ. ಈಗ ಏಕಾಏಕಿ ಬಳಕೆಗೆ ಮುಂದಾಗಿದೆ. ಈ ತೀರ್ಮಾನ ಕೈಬಿಡಬೇಕು. ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಅನ್ಯ ಕಾರ್ಯಗಳಿಗೆ ಬಳಸಲು ಅವಕಾಶಕಲ್ಪಿಸುವ 7ಡಿ ಕಲಂ ರದ್ದುಪಡಿಸುವ ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತೇವೆ' ಎಂದರು.

'ಚಿತ್ರದುರ್ಗದ ಕವಾಡಿಗರ ಹಟ್ಟಿಯಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟಿರುವ ಐವರ ಕುಟುಂಬಗಳಿಗೆ ತಲಾ ₹ 25 ಲಕ್ಷ ಪರಿಹಾರ ನೀಡಬೇಕು. ಅಸ್ವಸ್ಥಗೊಂಡಿರುವ 150 ಕುಟುಂಬಗಳಿಗೆ ತಲಾ ₹ 5ಲಕ್ಷ ಪರಿಹಾರ ಕೊಡಬೇಕು. ಈ ಪ್ರಕರಣದ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ವಿಧಾನಪರಿಷತ್ತಿಗೆ ನಾಮಕರಣ, ನಿಗಮ ಮತ್ತು ಮಂಡಳಿಗಳಿಗೆ ನೇಮಕಾತಿಯಲ್ಲಿ ಪರಿಶಿಷ್ಟ ಸಮುದಾಯದ ಹೋರಾಟಗಾರರಿಗೆ ಆದ್ಯತೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಪ್ರಾದೇಶಿಕ ಇತಿಹಾಸಕ್ಕೆ ಆದ್ಯತೆ ನೀಡಿ'

ಬೆಂಗಳೂರು: 'ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನದ ಜೊತೆಗೆ ಪ್ರಾದೇಶಿಕ ಇತಿಹಾಸದ ಕಡೆಗೂ ಹೆಚ್ಚಿನ ಗಮನ ನೀಡುವುದು ಇಂದಿನ ಅಗತ್ಯವಾಗಿದೆ' ಎಂದು ಇತಿಹಾಸಕಾರ ಲಕ್ಷ್ಮೀಶ್ ಹೆಗಡೆ ಸೋಂದಾ ತಿಳಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಸಾಮಂತರಾದರೂ ಶ್ರೀಮಂತ ಸಾಧನೆಯ ಸೋದೆಯ ಅರಸರು' ಎಂಬ ವಿಷಯದ ಬಗ್ಗೆ ಮಾತನಾಡಿದರು.

'ಇತಿಹಾಸದ ಅಧ್ಯಯನದಲ್ಲಿ ಭಾರತೀಯ ಚಿಂತನೆಗೆ ಆಸ್ಪದ ಕಡಿಮೆಯಾಗುತ್ತಿದೆ. ಸ್ವತಂತ್ರ ರಾಜರಷ್ಟೆ ಸಾಮಂತರದು ವಿಶಿಷ್ಟ ಕೊಡುಗೆ ಇದೆ. ಇದಕ್ಕೆ ವಿಜಯನಗರ ದೊರೆಗಳ ಸಾಮಂತರಾಗಿ 250ಕ್ಕೂ ಹೆಚ್ಚು ವರ್ಷ ಕಾಲ ಆಡಳಿತ ನಡೆಸಿದ ಸೋದೆ ಅರಸರು ಪ್ರಮುಖ ಉದಾಹರಣೆ. ಶಿರಸಿ ಬಳಿ ಇರುವ ಶಾಲ್ಮಲಾ ನದಿಯ ದಂಡೆಯ ಮೇಲಿರುವ ಸೋದೆ ಅವರ ಆಡಳಿತ ಕೇಂದ್ರವಾಗಿತ್ತು' ಎಂದು ಹೇಳಿದರು.

ದಿ ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ವಿ. ನಾಗರಾಜ್, 'ಇತಿಹಾಸದ ಪುನರ್ ರಚನೆ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ಇತಿಹಾಸ ಕುರಿತು ಗಮನ ನೀಡುವ ಕುರಿತು ಹೆಚ್ಚಿನ ಗಮನಹರಿಸಬೇಕು' ಎಂದು ತಿಳಿಸಿದರು.

'ಕಾನೂನು ಸಂಘರ್ಷಕ್ಕೀಡಾದ ಮಕ್ಕಳ ಪುನಶ್ಚೇತನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳನ್ನು ಗುರುತಿಸುವಲ್ಲಿ ಪೊಲೀಸರ ಪಾತ್ರ ಮುಖ್ಯ. ಆ ಮಕ್ಕಳ ಸಾಮರ್ಥ್ಯ ಅನುಸಾರ ವಾತಾವರಣ ಕಲ್ಪಿಸಿ ಉತ್ತಮ ಪ್ರಜೆಗಳಾಗಿ ರೂಪಿಸಬೇಕು' ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಹೇಳಿದರು.

ಬಾಲ ನ್ಯಾಯ ಮಂಡಳಿ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಭಾನುವಾರ ಆಯೋಜಿಸಿದ್ದ 'ಮಕ್ಕಳ ರಕ್ಷಣೆಯ ಕುರಿತು ಸಮಾಲೋಚನ ಸಭೆ'ಯಲ್ಲಿ ವರ್ಚ್ಯುವಲ್ ಆಗಿ ಅವರು ಮಾತನಾಡಿದರು.

'ರಾಜ್ಯದಲ್ಲಿ 34 ಬಾಲ ನ್ಯಾಯಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. 17 ಪುನಶ್ಚೇತನ ಕೇಂದ್ರಗಳಲ್ಲಿ ಕಾನೂನಿನ ಜೊತೆ ಸಂಘರ್ಷಕ್ಕಿಡಾದವರ ಪುನಶ್ಚೇತನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಕಾನೂನು ಸಂಘರ್ಷಕ್ಕಿಡಾದ 6,366 ಪ್ರಕರಣಗಳು ವಿಚಾರಣಾ ಹಂತದಲ್ಲಿವೆ' ಎಂದು ಮಾಹಿತಿ ನೀಡಿದರು.

ಪ್ರಸನ್ನ ವರಾಳೆ

'ಮಕ್ಕಳು ಕಾನೂನು ಬಾಹಿರ ಚಟುವಟಿಕೆಗಳಿಗೆ ಸಿಲುಕದಂತೆ ಜಾಗ್ರತೆ ವಹಿಸಬೇಕು. ಈ ನಿಟ್ಟಿನಲ್ಲಿ ಕುಟುಂಬ, ಶಿಕ್ಷಣ ಸಂಸ್ಥೆಗಳು, ಕಾನೂನು ಅನುಷ್ಠಾನ ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು' ಎಂದು ತಿಳಿಸಿದರು.

'ಮಕ್ಕಳನ್ನು ಬಂಧನದಲ್ಲಿರಿಸಿದರೆ ಮತ್ತಷ್ಟು ತಪ್ಪುದಾರಿಗೆ ಹೋಗುವ ಸಾಧ್ಯತೆ ಇದೆ. ಅವರನ್ನು ಸಮುದಾಯ ಆಧಾರಿತ ಪರ್ಯಾಯ ಮಾರ್ಗಗಳ ಮೂಲಕ ಅವರಲ್ಲಿ ಧನಾತ್ಮಕತೆ ತರಬೇಕು. ಮಕ್ಕಳ ಸ್ನೇಹಿ ನ್ಯಾಯದಾನಕ್ಕೆ ಪ್ರಯತ್ನ ನಡೆಸೋಣ' ಎಂದರು.

ನ್ಯಾಯಮೂರ್ತಿಗಳಾದ ಜಿ. ನರೇಂದರ್, ದಿನೇಶ್ ಕುಮಾರ್, ಕೆ.ಸೋಮಶೇಖರ್, ಕೆ.ಎಸ್. ಮುದ್ಗಲ್, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ಇದ್ದರು.

ಹೆಸರಘಟ್ಟ ಕೆರೆ ಒಡಲಿಗೆ ಪ್ಲಾಸ್ಟಿಕ್ ತ್ಯಾಜ್ಯ

● ಬೈಲಮೂರ್ತಿ ಜಿ.

ಹೆಸರಘಟ್ಟ: ಬೆಂಗಳೂರಿಗೆ ಕೂಗಳತೆ ದೂರದಲ್ಲಿರುವ ಮತ್ತು ಒಂದು ಕಾಲದಲ್ಲಿ ರಾಜಧಾನಿ ಜನರ ದಾಹ ತಣಿಸಿದ್ದ ಹೆಸರಘಟ್ಟ ಕೆರೆಯ ಸುತ್ತಲಿನ ಪ್ರದೇಶವೀಗ ನಿರ್ವಹಣೆ ಇಲ್ಲದೇ ಸೊರಗಿದೆ.

ಹೆಸರಘಟ್ಟ ಕೆರೆಗೆ ಪ್ರವಾಸಿಗರೂ ನಿತ್ಯ ಭೇಟಿ ನೀಡುತ್ತಾರೆ. ವಾರಾಂತ್ಯದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರುತ್ತಾರೆ. ಇತ್ತೀಚೆಗೆ ಸುರಿದ ಮಳೆಯಿಂದ ಕೆರೆಗೆ ನೀರು ಬಂದಿದ್ದು, ಮತ್ತಷ್ಟು ಪ್ರವಾಸಿಗರನ್ನು ಸೆಳೆಯುತ್ತಿದೆ.

ಆದರೆ, ಕೆರೆಯ ನಿರ್ವಹಣೆಯ ಉಸ್ತುವಾರಿಯನ್ನು ಹೊತ್ತಿರುವ ಜಲ ಮಂಡಳಿಯು ಸ್ವಚ್ಛತೆ ಕಾಪಾಡಲು ಗಮನ ಹರಿಸಿಲ್ಲ. ಹೀಗಾಗಿ, ಕೆರೆ ಬಳ ಕಸದ ರಾಶಿ ದಿನೇ ದಿನೇ ಹೆಚ್ಚುತ್ತಿದೆ. ಪ್ಲಾಸ್ಟಿಕ್ ಚೀಲಗಳೂ ಕೆರೆ ಒಡಲು ಸೇರುತ್ತಿವೆ.

ದಂಡೆಯ ಮೇಲೆ ದುರ್ಗಾಂಭ ದೇವಿಯ ದೇವಸ್ಥಾನವಿದ್ದು, ಅದರ ಪಕ್ಕದಲ್ಲಿಯೇ ಪ್ಲಾಸ್ಟಿಕ್, ಪೂಜಾ ಸಾಮಗ್ರಿಗಳ ತ್ಯಾಜ್ಯದ ರಾಶಿಇದೆ. ಇದರಿಂದ ಪರಿಸರ ಮಾಲಿನ್ಯವಾಗಲಿದ್ದು, ಕೆರೆ ಏರಿಯಲ್ಲಿ ತ್ಯಾಜ್ಯ ಸಂಗ್ರಹಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕೆರೆಯ ದಂಡೆಯಲ್ಲಿ ಗಿಡಗಂಟಿಗಳು ಬೆಳೆದಿವೆ ಹಾವುಗಳ ಆವಾಸ ಸ್ಥಾನವಾಗಿ ಮಾರ್ಪಟ್ಟಿದೆ. ಕೆರೆ ದಂಡೆಯ ಮೇಲಿರುವ ಕುರುಚಲು, ಗಿಡಗಂಟಿಗಳನ್ನು ತೆಗೆದು ಹೂವಿನ ಗಿಡಗಳನ್ನು ನೆಡಲು ಕ್ರಮವಹಿಸಬೇಕು ಎಂದು ಸ್ಥಳೀಯರು ಸಲಹೆ ನೀಡಿದ್ದಾರೆ.

ನಿರ್ವಹಣೆ ಇಲ್ಲ: ಹೆಸರಘಟ್ಟ ಕೆರೆಯು ಮೈಸೂರು ಅರಸರ ಕಾಲದಲ್ಲಿ ನಿರ್ಮಾಣವಾಗಿದ್ದು ತನ್ನದೇ ಐತಿಹ್ಯ ಹೊಂದಿದೆ. ಆದರೆ ನಿರ್ವಹಣೆ ಇಲ್ಲದೇ, ಕಸದ ಸಮಸ್ಯೆಗೆ ಬೇಸರದ ಸಂಗತಿ ಎಂದು ಸ್ಥಳೀಯ ನಿವಾಸಿ ಅಕ್ಷಯ್ ಬೇಸರ ವ್ಯಕ್ತಪಡಿಸಿದರು.

ದೇವಸ್ಥಾನ ಬಳಿಯ ಕೆರೆಯ ದಂಡೆಯ ಮೇಲೆ ಸುರಿದಿರುವ ತ್ಯಾಜ್ಯ.

ಸ್ವಚ್ಛತೆಗೆ ಕ್ರಮ

ದಂಡೆಯ ಮೇಲಿನ ದುರ್ಗಾಂಭ ದೇವಿಗೆ ಮಂಗಳವಾರ, ಶುಕ್ರವಾರ ವಿಶೇಷ ಪೂಜೆ ನಡೆಯಲಿದ್ದು, ಜನತೆ ಪೂಜಾ ಸಾಮಗ್ರಿಗಳ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡುತ್ತಿದ್ದಾರೆ. ಕೂಡಲೇ ಸ್ವಚ್ಛತೆ ಮಾಡಿ ದಂಡೆಯ ಮೇಲಿನ ಗಿಡಗಂಟಿಗಳನ್ನು ತೆಗೆಯಲು ಸೂಕ್ತ ಕ್ರಮವಹಿಸಲಾಗುವುದು.

ರಾಜಶೇಖರ್,
ಮುಖ್ಯ ಎಂಜಿನಿಯರ್,
ಬೆಂಗಳೂರು ಜಲ ಮಂಡಳಿ

'ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ'

ಕೆ.ಆರ್.ಪುರ: 'ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವಲ್ಲಿ ವಿದ್ಯಾಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ. ವಿದ್ಯಾಸಂಸ್ಥೆಗಳು ವಿದ್ಯಾರ್ಥಿಗಳಿಗಾಗಿ ಸೂಕ್ತ ವೇದಿಕೆಗಳನ್ನು ಕಲ್ಪಿಸಬೇಕು' ಎಂದು ವೈಟ್‌ಫೀಲ್ಡ್ ಏರಿಯಾ ಕಾಮೆನ್ಸ್ ಮತ್ತು ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ಕೆ.ರಾಜೇಶ್ ಮಲ್ಯ ಹೇಳಿದರು.

ಹೂಡಿಯ ಗೋಪಾಲನ್ ಕಾಲೇಜು ಆಫ್ ಕಾಮರ್ಸ್ ಏರ್ಪಡಿಸಿದ್ದ 'ಫಿಯೆಸ್ಟಾ' ಕಾರ್ಯಕ್ರಮದಲ್ಲಿ ಮಾತನಾಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು. ಗೋಪಾಲನ್ ಫೌಂಡೇಷನ್ ಜಂಟಿ ಕಾರ್ಯದರ್ಶಿ ಸುನೀತ್ ಪ್ರಭಾಕರ್, ಸಿಇಒ ಸಿ.ಎಂ. ಬಾಸ್ಕರ್ ರೆಡ್ಡಿ, ಡೀನ್ ಆನಂದಪ್ಪ, ಪ್ರಾಂಶುಪಾಲರಾದ ಕೆ.ಸುಜಿ, ರಾಜೇಂದ್ರ ಇದ್ದರು.

₹ 2 ಕೋಟಿ ಪ್ರತಿಫಲ ಕೋರಿ ಮಾವುತ ದಂಪತಿ ನೋಟಿಸ್

ಬೆಂಗಳೂರು (ಪಿಟಿಐ): ಆಸ್ಕರ್ ಪ್ರಶಸ್ತಿ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರದ ನಿರ್ಮಾಪಕ ಕಾರ್ತಿಕಿ ಗೊನ್ಸಾಲ್ವೆಸ್ ಅವರು ತಮಗೆ ಪ್ರತಿಫಲವಾಗಿ ₹2 ಕೋಟಿ ನೀಡಬೇಕೆಂದು ಬೊಮ್ಮನ್-ಬೆಳ್ಳಿ ಮಾವುತ ದಂಪತಿ ನೋಟಿಸ್ ನೀಡಿದ್ದಾರೆ.

ಗೊನ್ಸಾಲ್ವೆಸ್ ಅವರಿಗೆ ನೀಡಿರುವ ಲೀಗಲ್ ನೋಟಿಸ್ ಪ್ರತಿ 'ಪಿಟಿಐ' ಸುದ್ದಿ ಸಂಸ್ಥೆಗೆ ಲಭಿಸಿದೆ.

'ಈ ಪ್ರಾಜೆಕ್ಟ್‌ನಲ್ಲಿ ಬರುವ ಆದಾಯದಲ್ಲಿ ದಂಪತಿಗೆ ಮನೆ ಮತ್ತು ಬಹುಪಯೋಗಿ ವಾಹನ, ಹಣಕಾಸಿನ ನೆರವು (ಮೊತ್ತ ಉಲ್ಲೇಖಿಸಿರಲಿಲ್ಲ) ಕೊಡುವ ಭರವಸೆ ನೀಡಲಾಗಿತ್ತು. ಆದರೆ, ಯಾವುದನ್ನೂ ನೀಡಿಲ್ಲ. ಒಂದು ಕಡೆ, ಈ ದಂಪತಿಯನ್ನು ಗಣ್ಯರು, ರಾಜಕೀಯ ನಾಯಕರಿಗೆ 'ನೈಜ ಹೀರೊಗಳು' ಎಂದು ಪರಿಚಯಿಸಿ, ಪ್ರಚಾರ ಪಡೆಯಲಾಯಿತು. ಮತ್ತೊಂದೆಡೆ, ಚಿತ್ರ ನಿರ್ಮಾಪಕರು ತಮಿಳುನಾಡು ಮುಖ್ಯ ಮಂತ್ರಿ ಮತ್ತು ಪ್ರಧಾನಿಯಿಂದ ಪ್ರಯೋಜನಗಳನ್ನು ಪಡೆದರು ಎಂದು ಉಲ್ಲೇಖಿಸಲಾಗಿದೆ'.

'ಪ್ರಕರಣದ ಬಗ್ಗೆ ಮಾತನಾಡದಂತೆ, ಹೆಚ್ಚಿನ ಮಾಹಿತಿಗೆ ತಮ್ಮ ವಕೀಲರನ್ನು ಸಂಪರ್ಕಿಸಲು ನಮಗೆ ಸಲಹೆ ನೀಡಲಾಗಿದೆ' ಎಂದು ಬೊಮ್ಮನ್ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಪ್ರಕರಣ ನಿರ್ವಹಿಸುತ್ತಿರುವ ವಕೀಲ ಮೊಹಮ್ಮದ್ ಮನ್ಸೂರ್ ಅವರು ನಾಲ್ಕು ದಿನಗಳ ಹಿಂದೆ ಗೊನ್ಸಾಲ್ವಿಸ್ ಪರವಾಗಿ ಸಿಖ್ಯ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನಿಂದ ನೋಟಿಸ್‌ಗೆ ಉತ್ತರ ಬಂದಿದೆ. ಅದರಲ್ಲಿ 'ಈಗಾಗಲೇ ದಂಪತಿಗೆ ಹಣ ನೀಡಲಾಗಿದೆ. ಮತ್ತೆ ಯಾವುದೇ ಸಹಾಯ ನೀಡಲಾಗದು' ಎನ್ನುವ ಉತ್ತರ ಬಂದಿದೆ. ನನ್ನ ಕಕ್ಷಿದಾರರ ಜತೆ ಸಮಾಲೋಚಿಸಿ, ಇದಕ್ಕೆ ಪ್ರತ್ಯುತ್ತರ ಕಳುಹಿಸಲಾಗುವುದು' ಎಂದು ಹೇಳಿದ್ದಾರೆ.

ಮಾವುತ ದಂಪತಿಯನ್ನು ದಶಕದಿಂದ ಬಲ್ಲವರಾದ, ಚೆನ್ನೈನ ಸಾಮಾಜಿಕ ಕಾರ್ಯಕರ್ತ, ವಕೀಲ ಪ್ರವೀಣ್ ರಾಜ್ 'ಬೊಮ್ಮನ್ ಮತ್ತು ಬೆಳ್ಳಿ ಇಬ್ಬರೂ ಗೊನ್ಸಾಲ್ವಿಸ್ ಬಗ್ಗೆ ನಿರಾಶರಾಗಿದ್ದಾರೆ. ಅವರು ಚಿತ್ರ ನಿರ್ಮಿಸುವಾಗ ಹಣದ ನೆರವಿನ ಜತೆಗೆ, ಬೆಳ್ಳಿ ಅವರ ಮೊಮ್ಮಗಳ ಶಿಕ್ಷಣಕ್ಕೂ ನೆರವಾಗುವ ಭರವಸೆ ನೀಡಿ ದ್ದರು. ಆದರೆ, ಅವರು ಚಿತ್ರದಿಂದ ಗಳಿಸಿದ ಲಾಭದಲ್ಲಿ ಪಾಲು ಈ ದಂಪತಿಗೆ ನೀಡಲು ಈಗ ನಿರಾಕರಿಸಿದ್ದಾರೆ' ಎಂದು ಹೇಳಿದರು.

ಉಕ್ರೇನ್: ವಾಯು ನೆಲೆಗಳು ಧ್ವಂಸ

ಮಾಸ್ಕೊ (ಎಎಫ್‌ಪಿ): ಪಶ್ಚಿಮ ಉಕ್ರೇನ್‌ನ ಖ್ಮೆಲ್ನಿಟ್‌ಸ್ಕಿ ಮತ್ತು ರಿವ್ನೆ ಪ್ರದೇಶಗಳಲ್ಲಿನ ಪ್ರಮುಖ ಸೇನಾ ವಾಯು ನೆಲೆಗಳ ಮೇಲೆ ದಾಳಿ ನಡೆಸಿ ನಾಶಪಡಿಸಲಾಗಿದೆ ಎಂದು ರಷ್ಯಾ ಭಾನುವಾರ ಹೇಳಿದೆ.

'ಖ್ಮೆಲ್ನಿಟ್‌ಸ್ಕಿ ಪ್ರದೇಶದ ಸ್ಟಾರೊಕೊಸ್ಟಿಯಾಂಟಿನಿವ್ ಮತ್ತು ರಿವ್ನೆ ಪ್ರದೇಶದ ಡಬ್ನೋ ಸುತ್ತಲಿನ ಉಕ್ರೇನ್‌ನ ವಾಯು ನೆಲೆಗಳ ಮೇಲೆ ದಾಳಿ ನಡೆಸಲಾಗಿದೆ' ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ.

ರಷ್ಯಾ ಸೇನೆ ಪ್ರಯೋಗಿಸಿದ 40 ಕ್ರೂಸ್ ಕ್ಷಿಪಣಿಗಳಲ್ಲಿ 30 ಅನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ಹೇಳಿದೆ.

ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸಭೆ ಲಾಲ್‌ಬಾಗ್ ಆವರಣದಲ್ಲಿ ನಡೆಯಿತು

ಪಿಂಚಣಿದಾರರ ಮುಖಂಡನ ಮೇಲೆ ಹಲ್ಲೆ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ಕಾರ್ಮಿಕ ಹಾಗೂ ಉದ್ಯೋಗ ಸಚಿವರನ್ನು ಭೇಟಿ ಮಾಡಿ ಪಿಂಚಣಿದಾರರ ಅಹವಾಲು ಮಂಡಿಸಲು ತೆರಳಿದ್ದ ರಾಷ್ಟ್ರೀಯ ಸಂಘರ್ಷ ಸಮಿತಿ ಅಧ್ಯಕ್ಷ ಕಮಾಂಡರ್ ಅಶೋಕ್ ರಾವತ್ ಮೇಲೆ ನಡೆಸಿರುವ ಹಲ್ಲೆಯನ್ನು ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆ ಖಂಡಿಸಿದೆ.

ಲಾಲ್‌ಬಾಗ್ ಆವರಣದಲ್ಲಿ ಜರುಗಿದ ಸಂಘಟನೆಯ ಮಾಸಿಕ ಸಭೆಯಲ್ಲಿ ಖಂಡನಾ ನಿರ್ಣಯ ಕೈಗೊಳ್ಳಲಾಯಿತು. ಆ.8ರಂದು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಯಿತು.

ನಿವೃತ್ತರ ಬೇಡಿಕೆಯನ್ನು ಕೇಂದ್ರದ ಮುಂದೆ ಹಲವು ಬಾರಿ ಮಂಡಿಸಿದರೂ ಪ್ರಯೋಜನವಾಗಿಲ್ಲ. ತೀವ್ರ ಹೋರಾಟದ ಅನಿವಾರ್ಯತೆ ಇದೆ ಎಂದು ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ತಿಳಿಸಿದರು.

ಸಭೆಯಲ್ಲಿ ಅಧ್ಯಕ್ಷ ಶಂಕರ್, ಉಪಾಧ್ಯಕ್ಷ ಆರ್. ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಡೋಲಪ್ಪ ಮತ್ತು ಸಂಘಟನಾ ಕಾರ್ಯದರ್ಶಿ ಮನೋಹರ್ ಇದ್ದರು.

ನಗರದಲ್ಲಿ ಇಂದು

'ಸ್ವಾತಂತ್ರ್ಯ ಭಾರತದ ಇಂದಿನ ಸ್ಥಿತಿಗತಿ' ಕುರಿತು ಉಪನ್ಯಾಸ: ಗಣಪತಿ ಹೆಗಡೆ, ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಉಪಸ್ಥಿತಿ: ಎಚ್.ಎಸ್. ಸುರೇಶ್, ಯ.ಚಿ.ದೊಡ್ಡಯ್ಯ, ಆಯೋಜನೆ: ಕರ್ನಾಟಕ ಸರ್ವೋದಯ ಮಂಡಲ, ಶೇಷಾದ್ರಿಪುರ ಶಿಕ್ಷಣ ದತ್ತಿ, ಸ್ಥಳ: ಶೇಷಾದ್ರಿಪುರ ಪ್ರೌಢಶಾಲಾ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

2022–23ನೇ ಶೈಕ್ಷಣಿಕ ಸಾಲಿನ ಸಂಸ್ಕೃತಿ, ಕ್ರೀಡಾ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಕೇಶವ ರೆಡ್ಡಿ ಹಂದ್ರಾಳ, ರಾಮಕೃಷ್ಣ ರೆಡ್ಡಿ, ಉಪಸ್ಥಿತಿ: ನಿರ್ಮಲ್ ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್.ನಂದಿನಿ, ಟಿ.ಆರ್.ವೆಂಕಟರೆಡ್ಡಿ, ಎನ್. ಅಶೋಕ್ ಕುಮಾರ್, ಅಧ್ಯಕ್ಷತೆ: ಬಿ.ಸಿ.ಶಿವಲಿಂಗೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಇ.ಎಸ್. ಕಾಲೇಜು, ಜಯನಗರ, ಬೆಳಿಗ್ಗೆ 11

'ನಗರ ಪೂಜೆ' ಬೀದಿ ನಾಟಕ ಪ್ರದರ್ಶನ: ರಚನೆ, ವಿನ್ಯಾಸ, ನಿರ್ದೇಶನ: ಬೇಲೂರು ರಘುನಂದನ್, ಅತಿಥಿಗಳು: ಎಂ.ಕೃಷ್ಣಪ್ಪ, ವೈ.ವೆಂಕಟೇಶಪ್ಪ, ಆಯೋಜನೆ: ಬಿಬಿಎಂಪಿ, ಸ್ಥಳ: ಮಾರುತಿ ಆಸ್ಪತ್ರೆ ವೃತ್ತ, ವಿಜಯನಗರ, ಮಧ್ಯಾಹ್ನ 12

ಎ. ಅಣ್ಣಾಮಲೈ ಅವರ 'ಗಾಂಧಿ– ದಿ ಲಾಯರ್' ಪುಸ್ತಕ ಬಿಡುಗಡೆ: ಎಚ್.ಎನ್. ನಾಗಮೋಹನ ದಾಸ್, ಅತಿಥಿಗಳು: ವಿವೇಕ್ ಸುಬ್ಬಾರೆಡ್ಡಿ, ಎ. ಅಣ್ಣಾಮಲೈ, ಸುರೇಶ್ ವಿ. ನಾಡಗೌಡರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿಭವನ, ಸಂಜೆ 5

ನಾಗಮೋಹನ ದಾಸ್

ಶ್ರೀಮದ್ಭಾಗವತ ಪ್ರವಚನ: ಜಿ.ಪಿ. ನಾಗರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ಶ್ರೀಪಾದರಾಜ ಮಠ, ರಾಘವೇಂದ್ರ ಕಾಲೊನಿ, ಚಾಮರಾಜಪೇಟೆ, ಸಂಜೆ 5

ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಅತಿಥಿ: ಲಯ ಕೋಕಿಲ, ಅಧ್ಯಕ್ಷತೆ: ಸಿ.ಎ. ವಿಷ್ಣುಭರತ್, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಹಾಗೂ ಪದವಿಪೂರ್ವ ಕಾಲೇಜು, ಎನ್.ಆರ್. ಕಾಲೊನಿ, ಸಂಜೆ 6

'ಕಾಡುವ ಕಿ.ರಂ' ಅಹೋರಾತ್ರಿ ಕಾರ್ಯಕ್ರಮ ಮತ್ತು ಪ್ರಶಸ್ತಿ ಪ್ರದಾನ: ಉದ್ಘಾಟನೆ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಎಚ್.ಎಸ್. ಶಿವಪ್ರಕಾಶ, ಪುಸ್ತಕ ಬಿಡುಗಡೆ: ಎಂ.ಎಸ್. ಮೂರ್ತಿ, ಅತಿಥಿಗಳು: ಬಲವಂತರಾವ್ ಪಾಟೀಲ್, ಎಚ್.ಎಲ್.ಪುಷ್ಪ, 'ಕಿ.ರಂ ನಾಗರಾಜ ಪ್ರಶಸ್ತಿ ಪುರಸ್ಕೃತರು': ನರೇಂದ್ರ ನಾಯಕ್, ಸಿ.ಎಸ್. ನಿರ್ಮಲಕುಮಾರಿ, ಸುಬ್ಬು ಹೊಲೆಯಾರ್, ಆರ್.ಜಿ. ಹಳ್ಳಿ ನಾಗರಾಜ, ನಾಗತಿಹಳ್ಳಿ ರಮೇಶ್, ನಾಗೇಶ್ ದಸೂಡಿ, ಕವಿಗೋಷ್ಠಿ ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಟಿ. ಯಲ್ಲಪ್ಪ, ಗೀತಾ ವಸಂತ, ಎಚ್.ಎಸ್. ಸತ್ಯನಾರಾಯಣ, ಶ್ರೀದೇವಿ ಕೆರೆಮನೆ, 'ಚಮ್ಮಾರನ ಚಾಲೂಕಿ ಹೆಂಡತಿ' ನಾಟಕ ಪ್ರದರ್ಶನ: ನಿರ್ದೇಶನ: ಪ್ರದೀಪ್ ತಿಪಟೂರು, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಷನ್, ಮಿಂಚುಳ್ಳಿ ಸಾಹಿತ್ಯ ಪತ್ರಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6ರಿಂದ

ಕಿ.ರಂ. ನಾಗರಾಜ್

ಪ್ರವಚನ ವಾಹಿನಿ: 'ಶ್ರೀರಾಮ ಕೃಷ್ಣ ವಚನ ವೇದ' ಕುರಿತ ಉಪನ್ಯಾಸ: ಸ್ವಾಮಿ ಯೋಗೇಶ್ವರಾನಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

'ಸಂವಿಧಾನದ ಅರಿವು ಮೂಡಿಸಲು ತಜ್ಞರ ನೇಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರತಿಯೊಂದು ಕಾಲೇಜಿನಲ್ಲಿ ಸಂವಿಧಾನ ಮತ್ತು ಕಾನೂನು ಅರಿವು ಮೂಡಿಸಲು ತರಬೇತಿ ಪಡೆದ ಶಿಕ್ಷಣ ತಜ್ಞರನ್ನು ನೇಮಕ ಮಾಡಿಕೊಳ್ಳಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಭಾನುವಾರ ನಡೆದ 'ಸಂವಿಧಾನ ಓದು ಕಾರ್ಯಾಗಾರದಲ್ಲಿ ಭಾರತದ ಸಂವಿಧಾನದ ಪೀಠಿಕೆ ಬೋಧಿಸಿ ಅವರು ಮಾತನಾಡಿದರು.

'ನಮ್ಮ ದೇಶವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಇಲ್ಲಿನ ಇತಿಹಾಸ, ಧರ್ಮ, ಭಾಷೆ ಮತ್ತು ಸಾಮಾಜಿಕ ಮೌಲ್ಯಗಳನ್ನು ತಿಳಿಯಬೇಕು. ಆಗ ಮಾತ್ರ ಸಂವಿಧಾನ ಅರ್ಥವಾಗುತ್ತದೆ. ದೇಶದಲ್ಲಿ ಸದ್ಯ 4,635 ಜಾತಿ–ಉಪಜಾತಿಗಳಿವೆ' ಎಂದು ಅವರು ತಿಳಿಸಿದರು.

ಕಾರ್ಯಾಗಾರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಶೇಖ್ ಲತೀಫ್, ಹಣಕಾಸು ಅಧಿಕಾರಿ ಅಜಿತ್ ಕುಮಾರ್ ಹೆಗಡೆ, ಸಂಯೋಜನಾಧಿಕಾರಿ ಎಚ್. ಆರ್.ರವೀಶ್ ಹಾಗೂ ಯುವಜನ ಸಬಲೀಕರಣ ಇಲಾಖೆಯ ಮಲ್ಲಿಕಾರ್ಜುನ ಮಾನ್ಪಡೆ ಇದ್ದರು.

ನೈಋತ್ಯ ರೈಲ್ವೆ G20

ಟೆಂಡರ್ ಪ್ರಕಟಣೆ ಸಂ. ಎಲ್7235713 & ಎಲ್7235714
ದಿನಾಂಕ : 31-07-2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಸಂಕ್ಷಿಪ್ತ ವಿವರಣೆ
1	ಹೆವಿ ಡ್ಯೂಟಿ ರಿವರ್ಸಿಬಲ್ ಟೈಪ್ ಎಸ್ಕಲೇಟರ್ (ಟೆಂಡರ್ ಸಂ. ಎಲ್7235713) (ಪ್ರಮಾಣ : 14 ಸಂಖ್ಯೆಗಳು)
2	ಹೆವಿ ಡ್ಯೂಟಿ ಎಲಿವೇಟರ್ (ಟೆಂಡರ್ ಸಂ. ಎಲ್7235714) (ಪ್ರಮಾಣ : 22 ಸಂಖ್ಯೆಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30-08-2023 ರಂದು 10:30 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಹುಬ್ಬಳ್ಳಿ
ಪಿಯುಬಿ/282/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24
S.W.Railways SWRRLY SWRRLY

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

NRI'S INVESTMENT
And Finance Available
On Low Interest
Against
Properties,Land&
Building,Sites,Flats,
Converted&
Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಈಶಾನ್ಯ ರೈಲ್ವೆ

ಇ-ಹರಾಜು ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಹಿರಿಯ ವಿಭಾಗೀಯ ವ್ಯವಸ್ಥಾಪಕರು (ವಾಣಿಜ್ಯ), ಲಕ್ನೋ ಇವರು ಗೋರಖ್‌ಪುರ ಜಂಕ್ಷನ್ ನಿಲ್ದಾಣದಲ್ಲಿನ ಕೆಳಕಂಡ ಸ್ಥಳಗಳಲ್ಲಿ 5 ವರ್ಷ ಅವಧಿಗಾಗಿ ಸ್ಪೆಷಲ್ ಮೈನರ್ ಯೂನಿಟ್ (ಎಸ್‌ಎಂಯು) ಸ್ಟಾಲ್‌ಗಳಿಗಾಗಿ ಇ-ಹರಾಜು ವ್ಯವಸ್ಥೆಯಲ್ಲಿ ಬಹಿರಂಗ ಟೆಂಡರ್ ಆಹ್ವಾನಿಸಿದ್ದು, ಈ ಟೆಂಡರ್‌ನ್ನು 21.08.2023 ರಂದು 13.00 ಗಂಟೆಗೆ ತೆರೆಯಲಾಗು ತ್ತದೆ ಮತ್ತು ಪ್ರತಿ ಲಾಟ್‌ನ ಪ್ರಕಾರ 21.08.2023 ರಂದು ಕ್ಲೋಸಿಂಗ್ ಸಮಯವಾಗಿರುತ್ತದೆ. ಸದರಿ ಟೆಂಡರ್‌ಗಳಿಗೆ ಮ್ಯಾನುಯಲ್ ಆಫರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಇಎಂಡಿ ಮೊತ್ತ ಹಾಗೂ ಟೆಂಡರ್ ಶುಲ್ಕಗಳನ್ನು www.ireps.gov.in (ಇ-ಆಕ್ಷನ್ ಮಾಡ್ಯೂಲ್) ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಪೇಮೆಂಟ್ ವಿಧಾನದಲ್ಲಿ ಪಾವತಿಸುವುದು. ಇನ್ನಿತರ ವಿವರಗಳು www.ireps.gov.in (ಇ-ಆಕ್ಷನ್ ಮಾಡ್ಯೂಲ್) ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಇ-ಹರಾಜು ಸಂಖ್ಯೆ, ನಿಲ್ದಾಣದ ಸ್ಥಳ ವಿವರ ಹೀಗಿರುತ್ತವೆ:-

1. ಇ-ಆಕ್ಷನ್ ನೋಟಿಸ್ ನಂ.: ಕೆಟ-ಎಲ್‌ಜೆಎನ್-ಜಿಕೆಪಿ-ಎಸ್‌ಎಂಯು-26-23-1, ಸ್ಟೇಷನ್/ಸ್ಟಾಲ್ ನಂ.: ಗೋರಖ್‌ಪುರ ಜಂಕ್ಷನ್ (ಎಸ್‌ಎಂಯು ಸ್ಟಾಲ್ ನಂ. 24), ಸ್ಥಳ: ಪ್ಲಾಟ್‌ಫಾರಂ ನಂ. 7/8-19/20). ಕೆಟಗರಿ: ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಪ್ರವರ್ಗಕ್ಕೆ ಮೀಸಲು. ಹರಾಜು ಕ್ಲೋಸಿಂಗ್ ದಿನಾಂಕ ಮತ್ತು ಸಮಯ: ದಿನಾಂಕ 21.08.2023 ರಂದು ಸಮಯ 13.30
2. ಇ-ಹರಾಜು ನೋಟಿಸ್ ನಂ.: ಕೆಟ-ಎಲ್‌ಜೆನ್-ಜಿಕೆಪಿ-ಎಸ್‌ಎಂಯು-27-23-1, ಸ್ಟೇಷನ್/ಸ್ಟಾಲ್ ನಂ.: ಗೋರಖ್‌ಪುರ ಜಂಕ್ಷನ್ (ಎಸ್‌ಎಂಯು ಸ್ಟಾಲ್ ನಂ. 16), ಸ್ಥಳ: ಪ್ಲಾಟ್‌ಫಾರಂ ನಂ. 3/4 (ಪಿಪಿ ಷೆಡ್ ಪೋಲ್ ನಂ. 27 & 28ರ ಮಧ್ಯೆ). ಕೆಟಗರಿ: ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ ಮೀಸಲು. ಹರಾಜು ಕ್ಲೋಸಿಂಗ್ ದಿನಾಂಕ ಮತ್ತು ದಿನಾಂಕ 21.08.2023 ರಂದು ಸಮಯ 13.40

ಡಿಆರ್‌ಎಂ/ಸಿ/ಎಲ್‌ಜೆಎನ್
ಸಿಪಿಆರ್‌ಒ/ಸಿ-84

ಪ್ರಯಾಣಿಕರ ಸೌಲಭ್ಯಕ್ಕೆ ಸಂಬಂಧಿತ ದೂರುಗಳನ್ನು 09794845955 ಸಂಖ್ಯೆಗೆ ಎಸ್‌ಎಂಎಸ್ ಮಾಡಿರಿ
"ಭಾವಣಿ ಮತ್ತು ಫುಟ್‌ಬೋರ್ಡ್‌ಗಳ ಮೇಲೆ ಪ್ರಯಾಣಿಸದಿರಿ"

ವೈದ್ಯಕೀಯ ವೃತ್ತಿಪರ ಮೇಳ

ಪ್ರಜಾವಾಣಿ ವಾರ್ತೆ

ಯಲಹಂಕ: ಇನ್‌ಸ್ಪೈರ್ ಐಎಂಜಿ ಹಾಗೂ ಗೋ ಕ್ಯಾಂಪಸ್ ಸಂಸ್ಥೆಗಳ ಸಹಯೋಗದಲ್ಲಿ ಅಲ್ಲಾಳಸಂದ್ರದಲ್ಲಿ ಯು.ಕೆ ವೈದ್ಯಕೀಯ ವೃತ್ತಿಪರ ಮೇಳ ನಡೆಯಿತು.

ಗೋ ಕ್ಯಾಂಪಸ್ ಸಂಸ್ಥೆಯ ಸಹ ಸಂಸ್ಥಾಪಕಿ ಅಶ್ವಿನಿ ಮಾತನಾಡಿ, 'ಮೇಳದಲ್ಲಿ ಯುವ ವೈದ್ಯಕೀಯ ಪದವೀಧರರಿಗೆ ಭಾರತ, ಇಂಗ್ಲೆಂಡ್, ಅಮೆರಿಕ ಸೇರಿ ವಿವಿಧೆಡೆ ವೃತ್ತಿಜೀವನ ರೂಪಿಸಿಕೊಳ್ಳಲು ಸಲಹೆ, ಮಾರ್ಗದರ್ಶನ ನೀಡಲು ಮೊದಲ ಬಾರಿಗೆ ಈ ಮೇಳವನ್ನು ಆಯೋಜಿಸಲಾಗಿದೆ. ವೃತ್ತಿಪರ ಮತ್ತು ಮಹಾತ್ವಾಕಾಂಕ್ಷಿ ವೈದ್ಯರಿಗೆ ಇದರಿಂದ ಹೆಚ್ಚಿನ ಉಪಯೋಗವಾಗಲಿದೆ' ಎಂದರು.

ಡಾ. ಶ್ಯಾಮ್ ಕಲ್ವೇಕರ್, ಡಾ. ವಿಶ್ವನಾಥ ಆಚಾರ್ಯ, ಡಾ. ಅಬ್ದುಲ್ ಹಾದಿ ಷರೀಫ್ ಮಾಹಿತಿ ನೀಡಿದರು.

ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜನೆ • 67 ಸಾವಿರಕ್ಕೂ ಅಧಿಕ ಜನರ ಭೇಟಿ

ಫಲಪುಷ್ಪ ಪ್ರದರ್ಶನಕ್ಕೆ ಜನಸಾಗರ

ಪ್ರಜಾವಾಣಿ ವಾರ್ತೆ

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ಬಂದ ಜನಸಾಗರ –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಸ್ಮರಣಾರ್ಥ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ಜನ ಸಾಗರವೇ ಹರಿದು ಬಂದಿತ್ತು.

ರಜೆ ದಿನವಾದ್ದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ಲಾಲ್‌ಬಾಗ್‌ಗೆ ಆಗಮಿಸಿದ್ದರು. ಉದ್ಯಾನದ ನಾಲ್ಕು ದ್ವಾರಗಳಲ್ಲಿ ಟಿಕೆಟ್ ಕೌಂಟರ್‌ಗಳನ್ನು ಹೆಚ್ಚಿಸಲಾಗಿತ್ತು. ನರ್ಸರಿಗಳ ಬಳಿ ಸಸಿಗಳನ್ನು ಖರೀದಿಸುವಲ್ಲಿ, ಮಾರಾಟ ಮಳಿಗೆಗಳ ಬಳಿ ಜನಸಂದಣಿ ಹೆಚ್ಚಾಗಿತ್ತು. ಪ್ರದರ್ಶನದ ವೇಳೆ ಅವ್ಯವಸ್ಥೆಗಳಿಗೆ ಆಸ್ಪದವಾಗದಂತೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಲಾಗಿತ್ತು. ತೋಟಗಾರಿಕೆ ಇಲಾಖೆ ಮತ್ತು ಪೊಲೀಸರು ಜನರನ್ನು ನಿಯಂತ್ರಿಸಲು ಹರಸಾಹಸ ಪಟ್ಟರು.

ಖರೀದಿಗೆ ಮುಗಿಬಿದ್ದ ಜನ: ಉದ್ಯಾನದ ಆವರಣದಲ್ಲಿರುವ ಅಧಿಕೃತ ಮಾರಾಟ ಮಳಿಗೆಗಳಲ್ಲಿ ಆಟಿಕೆಗಳು, ಗೃಹ ಉಪಯೋಗಿ, ಅಲಂಕಾರಿಕ ಮತ್ತು ಕರಕುಶಲ ವಸ್ತುಗಳು, ಅಡುಗೆ ಪದಾರ್ಥಗಳು, ಬ್ಯಾಗ್, ಪರ್ಸ್ ಇತ್ಯಾದಿಗಳ ಖರೀದಿಗೆ ಜನ ಮುಗಿಬಿದ್ದಿದ್ದರು. ಗಾಜಿನ ಮನೆಯ ಸುತ್ತಮುತ್ತಲು ಜನಸಂದಣಿ ಹೆಚ್ಚಿತ್ತು.

'ವಾರಾಂತ್ಯದಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು 67 ಸಾವಿರಕ್ಕಿಂತ ಹೆಚ್ಚು ಜನ ಆಗಮಿಸಿದ್ದರು. ಒಟ್ಟು ₹47 ಲಕ್ಷ ಸಂಗ್ರಹವಾಗಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಅವರು ಮಾಹಿತಿ ನೀಡಿದರು.

ಭಾನುವಾರ ಸಸ್ಯಕಾಶಿಗೆ ಭೇಟಿ ನೀಡಿದವರು	
ವಯಸ್ಕರು	55,204
ಪಾಸ್ ಪಡೆದವರು	2,500
ಮಕ್ಕಳು	9,345
ಶಾಲಾ ಮಕ್ಕಳು	500
ಒಟ್ಟು	67,549
ಸಂಗ್ರಹವಾದ ಹಣ	₹47 ಲಕ್ಷ

ಖರ್ಗೆಗೆ ಅವಹೇಳನ: ಆರಗ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಶಾಸಕ ಆರಗ ಜ್ಞಾನೇಂದ್ರ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕೆಪಿಸಿಸಿ ಮಾಜಿ ಕಾರ್ಯದರ್ಶಿ ಆನಂದ್ ಕುಮಾರ್ ಅವರು ಆಗ್ರಹಿಸಿದ್ದಾರೆ.

'ಇದು ಜನಾಂಗೀಯ ನಿಂದನೆಯಾಗಿದೆ. ಆರಗ ಜ್ಞಾನೇಂದ್ರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಲಾಗಿದೆ' ಎಂದು ತಿಳಿಸಿದ್ದಾರೆ.

'ಇದು ಮಲ್ಲಿಕಾರ್ಜುನ ಖರ್ಗೆ ಅವರೊಬ್ಬರ ಮೇಲಿನ ಟೀಕಾ ಪ್ರಹಾರವಲ್ಲ. ಇಡೀ ದಲಿತ ಸಮುದಾಯಕ್ಕೆ ಮಾಡಿದ ಅಪಮಾನ. ದಲಿತ ವಿರೋಧಿ ನೀತಿ ಅನುಸರಿಸುವ ಬಿಜೆಪಿಗೆ ಈ ಬಾರಿಯ ಚುನಾವಣೆಯಲ್ಲಿ ಶೋಷಿತ ಸಮುದಾಯ ತಕ್ಕ ಪಾಠ ಕಲಿಸಿದೆ. ಆರಗ ಜ್ಞಾನೇಂದ್ರ ಅವರ ಹೇಳಿಕೆಗೆ ಬಿಜೆಪಿ ಕ್ಷಮೆ ಕೇಳಿದರೆ ಸಾಲದು, ಅವರನ್ನು ಪಕ್ಷದಿಂದಲೇ ಉಚ್ಚಾಟನೆ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಗಮನ ಸೆಳೆದ ಚಿನಕುರಳಿ ಚಿಣ್ಣರ ಸಂತೆ

ಪ್ರಜಾವಾಣಿ ವಾರ್ತೆ

ರಾಜಗೋಪಾಲನಗರದ ಸನ್ ರೈಸ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ಚಿಣ್ಣರ ಸಂತೆ.

ಪೀಣ್ಯ ದಾಸರಹಳ್ಳಿ: ರಾಜಗೋಪಾಲನಗರದ ಸನ್‌ರೈಸ್ ಪಬ್ಲಿಕ್ ಶಾಲೆಯಲ್ಲಿ ಮಕ್ಕಳಿಗೆ ಅರಿವು ಮೂಡಿಸಲು ಚಿನಕುರಳಿ ಚಿಣ್ಣರ ಸಂತೆ ಏರ್ಪಡಿಸಲಾಗಿತ್ತು.

ಶಾಲಾ ಆವರಣ, ಅಕ್ಷರಶಃ ಸಂತೆಯ ವಾತಾವರಣವಾಗಿ ಪರಿವರ್ತನೆಯಾಗಿತ್ತು. ಶಾಲೆಯ 100ಕ್ಕೂ ಹೆಚ್ಚು ಮಕ್ಕಳು ತರಕಾರಿ ಮಾರಾಟ ಮಾಡುವ ರೈತರು ಹಾಗೂ ವ್ಯಾಪಾರಸ್ಥರಾಗಿದ್ದರು. ಪೋಷಕರು ಹಾಗೂ ಶಾಲೆಯ ಅಕ್ಕಪಕ್ಕದ ನಿವಾಸಿಗಳು ಗ್ರಾಹಕರಾಗಿದ್ದರು. ಶಾಲಾ ಮಕ್ಕಳು ಸೊಗಸಾದ ಜಾನಪದ ಗೀತೆ ಹಾಡಿ ಚಿಣ್ಣರ ಸಂತೆಗೆ ಹೆಚ್ಚು ಮೆರುಗು ತಂದರು.

ವ್ಯವಸ್ಥಾಪಕ ಮಹೇಶ್ ಮಾತನಾಡಿ, 'ಇಂದು ಮಾಲ್ ಸಂಸ್ಕೃತಿ, ಆನ್‌ಲೈನ್ ಶಾಪ್‌ಗೆ ಹೊಂದಿಕೊಂಡಿರುವ ಮಕ್ಕಳಿಗೆ ಈ ಸಂತೆ ಮಾರುವ, ಕೊಳ್ಳುವ ವ್ಯವಹಾರದ ಜ್ಞಾನ ಬೆಳೆಸಲು ಅವಕಾಶ ಒದಗಿಸಿಕೊಟ್ಟಿದೆ. ಶಾಲಾ ಆಡಳಿತ ಮಂಡಳಿ, ಶಿಕ್ಷಕರು ಮತ್ತು ಪೋಷಕರ ಪ್ರಯತ್ನ ಶ್ಲಾಘನೀಯ' ಎಂದು ಹೇಳಿದರು.

'ಶಾಲೆಗಳಲ್ಲಿ ಏರ್ಪಡಿಸುವ ಇಂತಹ ಚಿಣ್ಣರ ಸಂತೆ ಸಂಭ್ರಮದಲ್ಲಿ ಪೋಷಕರ ಮಾರ್ಗದರ್ಶನದಲ್ಲಿ ಮಕ್ಕಳು ಭಾಗವಹಿಸುವುದರಿಂದ ವಸ್ತುಗಳ ಪರಿಚಯ, ದರ ನಿರ್ಧಾರ ಹಾಗೂ ಕೊಂಡುಕೊಳ್ಳುವ ವ್ಯವಹಾರಗಳ ಮೂಲಕ ಪಾಠಗಳು ಸಹ ಪ್ರಾಯೋಗಿಕವಾಗಿ ಮಕ್ಕಳಿಗೆ ಸಿಗುತ್ತದೆ' ಎಂದು ಸಾಯಿ ಇಂಟರ್‌ನ್ಯಾಷನಲ್ ಶಾಲೆಯ ವ್ಯವಸ್ಥಾಪಕ ಜಯಪ್ರಕಾಶ್ ಹೇಳಿದರು.

'ಮನೆ ಮನೆ ಮೇಲೆ ಕನ್ನಡ ಬಾವುಟ' ಕಾರ್ಯಕ್ರಮ ಆ. 9ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಹಾಗೂ ಕನ್ನಡ ಮೊದಲು ಸ್ನೇಹಿತರು ಬಳಗದಿಂದ ಆಗಸ್ಟ್ 9ರಂದು ಮನೆ ಮನೆ ಮೇಲೆ ಕನ್ನಡ ಬಾವುಟ ಕಾರ್ಯಕ್ರಮ ಆಯೋಜಿಸಲಾಗಿದೆ.

'ಮೈಸೂರು ಸಾಮ್ರಾಜ್ಯವನ್ನು ಭಾರತೀಯ ಒಕ್ಕೂಟಕ್ಕೆ ತ್ಯಾಗ ಮಾಡಿದ ನೆನಪಿನ ದಿನ ಅಂದು. ಕನ್ನಡಿಗರು ಸಾರ್ವಭೌಮರಾಗಿದ್ದ ಪ್ರದೇಶವನ್ನು ಒಕ್ಕೂಟ ವಿಲೀನಕ್ಕೆ ಜಯಚಾಮರಾಜೇಂದ್ರ ಒಡೆಯರ್ ಅವರು ಸಹಿ ಹಾಕಿ ಅರ್ಪಿಸಿದ ದಿನದ ಅಂಗವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ' ಸಮಿತಿಯ ಅಧ್ಯಕ್ಷ ಗುರುದೇವ್ ನಾರಾಯಣ ಕುಮಾರ್ ಹೇಳಿದರು.

'ಕಳೆದ ವರ್ಷ 3 ಲಕ್ಷ ಮನೆಗಳ ಮೇಲೆ ಕನ್ನಡ ಬಾವುಟ ಹಾರಾಡಿದ್ದವು. ಪ್ರಾದೇಶಿಕ ಅಸ್ಮಿತೆ ಉಳಿಸಿಕೊಳ್ಳಲು ಈ ವರ್ಷವೂ ಈ ಕಾರ್ಯಕ್ರಮ ಮುಂದುವರಿಸಲಾಗಿದೆ. ಗಣ್ಯರು ಬೆಂಬಲ ನೀಡಿದ್ದಾರೆ. ಅಂದು ಬೆಂಗಳೂರಿನಿಂದ ಮೈಸೂರಿಗೆ ಬೈಕ್ ರ‍್ಯಾಲಿ ನಡೆಯಲಿದೆ. ಕನ್ನಡ, ಕನ್ನಡ ನಾಡಿನ ಬಗ್ಗೆ ಎಲ್ಲ ಗ್ರಾಮಗಳಲ್ಲಿ ಜಾಗೃತಿ ಮೂಡಿಸಲಾಗುವುದು. ಅಲ್ಲದೇ ಅಮೆರಿಕ, ದುಬೈ, ಆಸ್ಟ್ರೇಲಿಯದಲ್ಲಿ ನೆಲೆಸಿರುವ ಕನ್ನಡಿಗರು ಈ ಕಾರ್ಯಕ್ರಮಕ್ಕೆ ಬೆಂಬಲ ನೀಡಿದ್ದಾರೆ' ಎಂದು ತಿಳಿಸಿದರು.

'ರೈತರು, ಕಾರ್ಮಿಕರು ಸೇರಿದಂತೆ ಎಲ್ಲ ಸಂಘಟನೆಗಳು ಈ ಆಚರಣೆಯಲ್ಲಿ ಪಾಲ್ಗೊಂಡು ಕರ್ನಾಟಕದ ಅಸ್ಮಿತೆಯನ್ನು ಕಾಪಾಡಬೇಕಿದೆ. ಅಂದು ಎಲ್ಲ ಧರ್ಮದ ಜನರೂ ತಮ್ಮ ಮನೆಯ ಮೇಲೆ ಕನ್ನಡ ಬಾವುಟ ಹಾರಿಸಬೇಕು' ಎಂದು ಅವರು ಮನವಿ ಮಾಡಿದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಬೇಸರ

'ವಿಕಾರಗೊಳ್ಳುತ್ತಿದೆ ಸಾಮಾಜಿಕ ಮನೋಭಾವ'

ಪ್ರಜಾವಾಣಿ ವಾರ್ತೆ

ಸಭೆಯಲ್ಲಿ (ಎಡದಿಂದ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಉಪಾಧ್ಯಕ್ಷ ಕೊಂಡಜ್ಜಿ ಬ.ಷಣ್ಮುಖಪ್ಪ, ರಾಷ್ಟ್ರೀಯ ಹೆಚ್ಚುವರಿ ಮುಖ್ಯ ಆಯುಕ್ತ ಎಂ.ಎ. ಖಾಲಿದ್, ರಾಜ್ಯ ಉಪಾಧ್ಯಕ್ಷೆ ಆಶಾ ಪ್ರಸನ್ನ ಕುಮಾರ್ ಹಾಗೂ ಗೈಡ್ಸ್‌ನ ರಾಜ್ಯ ಆಯುಕ್ತೆ ಗೀತಾ ನಟರಾಜ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಮನೋಭಾವ ದಿನದಿಂದ ದಿನಕ್ಕೆ ವಿಕಾರಗೊಳ್ಳುತ್ತಿದೆ. ಆದ್ದರಿಂದ ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳಿಗೆ ಹುಚ್ಚು ಹಿಡಿದಂತಾಗಿದೆ' ಎಂದು ಜಾನಪದ ವಿದ್ವಾಂಸ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ಸಹಾಯಕ ರಾಜ್ಯ ಆಯುಕ್ತ ಗೊ.ರು.ಚನ್ನಬಸಪ್ಪ ವಿಷಾದಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ವಿಶೇಷ ರಾಜ್ಯ ಪರಿಷತ್ ಸಭೆ ಉದ್ಘಾಟಿಸಿದ ಅವರು, 'ಈಗಿನ ದುರ್ಭರ ಸನ್ನಿವೇಶದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್, ರೋಟರಿ, ಲಯನ್ಸ್‌ನಂತಹ ಸ್ವಯಂ ಸೇವಾಸಂಸ್ಥೆಗಳು ನಮಗಿರುವ ಪರಿಹಾರದ ಭರವಸೆಯ ಬೆಳಕಾಗಿವೆ. ಇಂತಹ ಸೇವಾ ಸಂಸ್ಥೆಗಳಲ್ಲಿ ಇರುವವರು ಬಾಹ್ಯ ಒತ್ತಡಗಳಿಗೆ ಮಣಿಯುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಸಂಸ್ಥೆ, ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳ ಬೈ-ಲಾ ತಿದ್ದುಪಡಿಗೆ ಅನುಮೋದನೆ ಪಡೆಯಲಾಯಿತು. ಸದಸ್ಯತ್ವ, ರಾಜ್ಯ ಪರಿಷತ್ತಿನ ಸಭೆ, ಚುನಾವಣೆ ಸೇರಿ ವಿವಿಧ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಣ್ಣ ಪುಟ್ಟ ಬದಲಾವಣೆಗಳನ್ನು ತರಲಾಗಿದೆ.

ಬೈ-ಲಾ ತಿದ್ದುಪಡಿ ಬಗ್ಗೆ ವಿವರಿಸಿದ ರಾಜ್ಯ ಕಾರ್ಯದರ್ಶಿ ಕೆ.ಗಂಗಪ್ಪಗೌಡ ಅವರು, 'ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಆದೇಶದ ಅನ್ವಯ ಬೈ-ಲಾ ಅನ್ನು ಪರಿಷ್ಕರಿಸಲಾಗಿದೆ. ನಮ್ಮ ರಾಷ್ಟ್ರೀಯ ಸಂಸ್ಥೆಯ ಹೊಸ ನಿಯಮಗಳ ಅನ್ವಯ ತುರ್ತು ಸಂದರ್ಭದಲ್ಲಿ ವರ್ಚುವಲ್ ಸಭೆ ಸೇರಿ ಕೆಲವೊಂದು ಸಣ್ಣ ಪುಟ್ಟ ತಿದ್ದುಪಡಿ ತರಲಾಗಿದೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಪದಾಧಿಕಾರಿಗಳ ಆಯ್ಕೆ

ಎನ್‌.ವಿ. ರಘುರಾಮ್

ಬೆಂಗಳೂರು: ಕರ್ನಾಟಕ ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ (ಎನ್‌ಫೋರ್ಸ್‌ಮೆಂಟ್) ಅಧಿಕಾರಿಗಳ ಸಂಘದ ಅಧ್ಯಕ್ಷರಾಗಿ ಎನ್‌.ವಿ. ರಘುರಾಮ್ ಆಯ್ಕೆಯಾಗಿದ್ದಾರೆ.

2023–25ನೇ ಸಾಲಿನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ನಾಗಜ್ಯೋತಿ, ಕಾರ್ಯದರ್ಶಿಯಾಗಿ ಬಿ.ಆರ್. ವೆಂಕಟೇಶ್, ಜಂಟಿ ಕಾರ್ಯದರ್ಶಿಯಾಗಿ ಡಾ.ಎಂ. ಸುರೇಶ, ಖಜಾಂಜಿಯಾಗಿ ಡಾ. ವಿನೋದ್ ಎಸ್. ಕಾಂಬ್ಳೆ ಆಯ್ಕೆಯಾಗಿದ್ದಾರೆ.

ಮುದಗಲ್ ಅಜಯ್ ಕೃಷ್ಣಪ್ಪ, ಭಾಗ್ಯಜ್ಯೋತಿ ಬಿ.ಜಿ, ತೇಜಸ್ವಿ ಸಿ, ಡಾ. ವೀರೇಶ್ ಬಾಬು ಎಸ್‌.ವಿ, ಗಿರೀಶ ಸಿ.ಎಚ್, ಕೆ. ಸುರೇಶ, ಎ.ಆರ್. ಹರೀಶ್, ನಂದಿನಿ ಎನ್ ಕಾರ್ಯಕಾರಿ ಸದಸ್ಯರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಸಿತಾರ್ ಬೈಠಕ್ ಇದೇ 13ಕ್ಕೆ'

ಬೆಂಗಳೂರು: ಸ್ವರ ಸುರಭಿ ಪ್ರಸ್ತುತಪಡಿಸುವ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ 'ಸಿತಾರ್ ಬೈಠಕ್' ಕಾರ್ಯಕ್ರಮ ಆ.13ರಂದು ನಡೆಯಲಿದೆ.

ದೊಮ್ಮಲೂರು 2ನೇ ಹಂತ 4ನೇ ಮುಖ್ಯರಸ್ತೆಯಲ್ಲಿ ಶಕ್ತಿ ಮತ್ತು ಸಂಪನ್ಮೂಲಗಳ ಸಂಸ್ಥೆ ಸಭಾಂಗಣದಲ್ಲಿ ವಿದುಷಿ ಜ್ಯೋತಿ ಶ್ಯಾಮ್, ವಿದ್ಯಾರ್ಥಿಗಳು ಕಛೇರಿ ನಡೆಸಿಕೊಡಲಿದ್ದಾರೆ. ಗುರುನಂದನ್ ಗೋಪಿನಾಥ್ ಸಾಥ್ ನೀಡಲಿದ್ದಾರೆ

ಚಿತ್ರಕಲೆ ಸಂಗೀತ ನೃತ್ಯ ಸ್ಪರ್ಧೆಗಳು

ಬೆಂಗಳೂರು: ಕಲಾದರ್ಪಣ ಆರ್ಟ್ ರೆಫ್ಲೆಕ್ಸ್ ಸಂಸ್ಥೆಯು ಸ್ವಾತಂತ್ರ್ಯೋತ್ಸವದ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದೆ. ವಿಜೇತರಿಗೆ ವಿಶೇಷ ಬಹುಮಾನಗಳಿವೆ. ಆ.17ರಂದು ಬಹುಮಾನ ವಿತರಣಾ ಸಮಾರಂಭವನ್ನು ನಗರದ ನಯನ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಆಸಕ್ತರು ಮೊಬೈಲ್ ಸಂಖ್ಯೆ: 9380671947 ಸಂಪರ್ಕಿಸಬಹುದು.

ಇಂದು ಅಂಚೆ ಚೀಟಿ ಸಂಗ್ರಹಣಾ ಬ್ಯೂರೊಗಳ ಬಿಡುಗಡೆ

ಬೆಂಗಳೂರು: ದೇಶದ ಕೈಮಗ್ಗ ನೇಕಾರರನ್ನು ಗೌರವಿಸಲು ಮತ್ತು ಕೈಮಗ್ಗ ಉದ್ಯಮವನ್ನು ಎತ್ತಿ ಹಿಡಿಯಲು ಪ್ರತಿ ವರ್ಷ ಆ.7ರಂದು ರಾಷ್ಟ್ರೀಯ ಕೈಮಗ್ಗ ದಿನ ಆಚರಿಸಲಾಗುತ್ತದೆ. ಇದರ ಅಂಗವಾಗಿ ಕರ್ನಾಟಕ ಅಂಚೆ ವೃತ್ತದ ಬೆಂಗಳೂರು, ಮಂಗಳೂರು, ಮೈಸೂರು ಮತ್ತು ಬೆಳಗಾವಿಯಲ್ಲಿ ಅಂಚೆ ಚೀಟಿಗಳ ಸಂಗ್ರಹಣಾ ಬ್ಯೂರೊಗಳ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ದೇಶಿ ವಸ್ತುಗಳನ್ನು ಅವಲಂಬಿಸಲು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲು ಬಂಗಾಳದಲ್ಲಿ ಪ್ರಾರಂಭವಾದ ಸ್ವದೇಶಿ ಚಳವಳಿಯ ಸ್ಮರಣೆಯಲ್ಲಿ ಈ ದಿನಾಚರಣೆ ನಡೆಸಲಾಗುತ್ತದೆ ಎಂದು ಬೆಂಗಳೂರು ಜಿಪಿಒ ಮುಖ್ಯ ಪೋಸ್ಟ್ ಮಾಸ್ಟರ್ ತಿಳಿಸಿದ್ದಾರೆ.

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಕುಂದು ಕೊರತೆ

ಜನದನಿ

ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು



'ಬೆಳಗದ ಬೀದಿ ದೀಪ'

ಗಾಂಧಿನಗರ ಕ್ಷೇತ್ರದ ವಾರ್ಡ್ ನಂ. 94 ಮತ್ತು ಚಿಕ್ಕಪೇಟೆ ಕ್ಷೇತ್ರದ ವಾರ್ಡ್ ನಂ. 109ರ ಮುಖ್ಯರಸ್ತೆಯ ಆಸುಪಾಸಿನ ಪ್ರದೇಶಗಳ ಬೀದಿದೀಪಗಳು ಬೆಳಗುತ್ತಿಲ್ಲ. ನಾಲ್ಕೈದು ತಿಂಗಳಿಂದ ಸಮಸ್ಯೆ ಇದೆ. ಇದರಿಂದ ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಭಯದಲ್ಲಿ ಸಾಗಬೇಕಾದ ಸ್ಥಿತಿ ಇದೆ. ಶಾಸಕರಾದ ದಿನೇಶ್ ಗುಂಡೂರಾವ್, ಉದಯ್ ಬಿ. ಗರುಡಾಚಾರ್ ಅವರ ಗಮನಕ್ಕೂ ಇದನ್ನು ತರಲಾಗಿತ್ತು. ಸಂಬಂಧಿಸಿದ ಅಧಿಕಾರಿಗಳು ಶೀಘ್ರ ಈ ಸಮಸ್ಯೆ ನಿವಾರಿಸಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗದಲ್ಲಿ ತಗಡಿನ ಶೀಟ್'

ಮಹಾತ್ಮಗಾಂಧಿ ರಸ್ತೆ ಮತ್ತು ಮ್ಯೂಸಿಯಂ ರಸ್ತೆ ಸಂಪರ್ಕಿಸುವ ಸ್ಥಳದ ಬಳಿ ನಿರ್ಮಿಸುತ್ತಿರುವ ಕಟ್ಟಡದಲ್ಲಿ ಪಾದಚಾರಿಗಳ ಓಡಾಟಕ್ಕೆ ಜಾಗ ಇಲ್ಲದಂತೆ ಶೀಟ್‌ಗಳು ಮತ್ತು ಸಾಮಗ್ರಿಗಳನ್ನು ಹಾಕಲಾಗಿದೆ. ಇದರಿಂದ ಪಾದಚಾರಿಗಳ ಸಂಚಾರಕ್ಕೆ ತೊಂದರೆಯಾಗಿದೆ.

ರಾಜು, ಪಾದಚಾರಿ

'ರಸ್ತೆ ದುರಸ್ತಿಗೊಳಿಸಿ'

ಜೆ.ಪಿ.ನಗರ ಮೆಟ್ರೊ ನಿಲ್ದಾಣದಿಂದ ಕೆಂಗೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಗುಂಡಿಗಳಿಂದ ಕೂಡಿದೆ. ಮೈಸೂರು ರಸ್ತೆಯವರೆಗೂ ಪರಿಸ್ಥಿತಿ ಇದೇ ರೀತಿಯಾಗಿದೆ. ವಿಷ್ಣುವರ್ಧನ್ ರಸ್ತೆಯೂ ಸಂಪೂರ್ಣ ಹಾಳಾಗಿದ್ದು, ವಾಹನ ಸವಾರರು ಜೀವಭಯದಲ್ಲಿ ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ. ಬಹುತೇಕ ರಸ್ತೆ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಅಲ್ಲಲ್ಲಿ ಜಲ್ಲಿಕಲ್ಲು ಹಾಕಲಾಗಿದೆ. ಇದರಿಂದ, ಅಪಘಾತಗಳು ಸಂಭವಿಸುತ್ತಿವೆ. ಸಂಬಂಧಿಸಿದ ಅಧಿಕಾರಿಗಳು ಸಮಸ್ಯೆಯನ್ನು ಪರಿಹರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಲಿ.

ರಾಘವೇಂದ್ರ ಎನ್., ಸ್ಥಳೀಯ

ನಗರದ ಟೆಲಿಕಾಂ ಬಡಾವಣೆಯ 1ನೇ ಮುಖ್ಯರಸ್ತೆಯ ಗಾಳಿ ಆಂಜನೇಯಸ್ವಾಮಿ ವಾರ್ಡ್‌ನ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಟ್ಟಡ ತ್ಯಾಜ್ಯ, ಹೂಳು ತೆರವುಗೊಳಿಸಬೇಕು. ಇದರಿಂದ, ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ವಾಹನ ಸಂಚಾರದ ನಡುವೆ ಹಾದು ಹೋಗಬೇಕಾಗಿದೆ. ಬಿಬಿಎಂಪಿ ಅಧಿಕಾರಿಗಳು ಇತ್ತ ಗಮನಹರಿಸಿ ಕೂಡಲೇ ತ್ಯಾಜ್ಯ ತೆರವುಗೊಳಿಸಿ ಸಮಸ್ಯೆಯನ್ನು ಪರಿಹರಿಸಲಿ.

ಸುರೇಶ್, ಸ್ಥಳೀಯ ನಿವಾಸಿ

ಪಾದಚಾರಿ ಮಾರ್ಗದ ಮರ ಸ್ಥಳಾಂತರಿಸಿ

ಹಲಸೂರು ಕೆರೆ ಪಕ್ಕದ ಆರ್‌ಬಿಎಎಂಎನ್‌ಎಸ್ ಕಾಲೇಜಿನಿಂದ ಗುರುದ್ವಾರಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗದಲ್ಲಿರುವ ಮರವನ್ನು ವೈಜ್ಞಾನಿಕವಾಗಿ ಸ್ಥಳಾಂತರಿಸಲು ಕ್ರಮಕೈಗೊಳ್ಳಬೇಕು. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಅನುಕೂಲವಾಗಲಿದೆ. ಈಗ ಮುಖ್ಯರಸ್ತೆಯಲ್ಲಿ ಹಾದು ಹೋಗುವ ಸ್ಥಿತಿ ಇದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ.

ಕೃಷ್ಣ, ಸ್ಥಳೀಯ ನಿವಾಸಿ

'ಲಗ್ಗೆರೆ: ಕೆಸರು ಗದ್ದೆಯಾದ ರಸ್ತೆ'

ಲಗ್ಗೆರೆಯಲ್ಲಿ 15ನೇ ಅಡ್ಡರಸ್ತೆಯು ಸಂಪೂರ್ಣ ಹಾಳಾಗಿದೆ. ಮೂರು ತಿಂಗಳ ಹಿಂದೆ ರಸ್ತೆ ದುರಸ್ತಿಯ ನೆಪದಲ್ಲಿ ಕಾಂಕ್ರೀಟ್ ರಸ್ತೆಯನ್ನು ಕಿತ್ತು ಹಾಕಲಾಗಿದೆ. ಇದರಿಂದ ಇಲ್ಲಿನ ನಿವಾಸಿಗಳ ಸಂಚಾರಕ್ಕೆ ತೊಡಕಾಗಿದೆ. ರಸ್ತೆಯಲ್ಲಿ ಪ್ರತಿನಿತ್ಯ ಒಂದು ಅಪಘಾತವಾಗುತ್ತದೆ. ರಸ್ತೆ ದುರಸ್ತಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗುತ್ತಿಲ್ಲ.

ರಘು ಕುಮಾರ್ ಎಚ್‌.ಎಸ್., ಸ್ಥಳೀಯ ನಿವಾಸಿ

ಚಿರನಿದ್ರೆಗೆ ಗದ್ದರ್; ಸ್ತಬ್ಧವಾದ ಬಂಡಾಯದ ಹಾಡು

ನುಡಿ ನಮನ

• ಅಂಬಣ್ಣ ಅರೋಲಿಕರ್



ರಾಯಚೂರು: ತೆಲಂಗಾಣ ರಾಜ್ಯದ ಮೆದಕ್ ಜಿಲ್ಲೆಯ ತೂಫ್ರಾನ್ ಹಳ್ಳಿಯಲ್ಲಿ ಜನಿಸಿದ ಗುಮ್ಮಡಿ ವಿಠ್ಠಲ್ ರಾವ್ ಎಂಬ ದಲಿತ ವ್ಯಕ್ತಿ 'ಗದ್ದರ್' ಹೆಸರಿನಲ್ಲಿ ಪ್ರಸಿದ್ಧಿ ಪಡೆಯಲು ಅವರ ಎಡಪಂಥೀಯ ಧೋರಣೆ ಹಾಗೂ ಭೂಮಾಲೀಕರ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟವೇ ಕಾರಣ.

ಪಶ್ಚಿಮ ಬಂಗಾಳದ ನಕ್ಸಲ್ ಹೋರಾಟದ ತ್ಯಾಗಪೂರಿತ, ರಾಜಿರಹಿತ ಹೋರಾಟಕ್ಕೆ ಪೂರಕವಾಗಿ ನಡೆದ ಅವರ ಜನಜಾಗೃತಿ ಸಾಂಸ್ಕೃತಿಕ ಪ್ರತಿರೋಧದ ಪಯಣವೇ ಅವರು ನಡೆದು ಬಂದ ವಿರೋಚಿತ ಹೋರಾಟದ ಇತಿಹಾಸ.

76 ವರ್ಷಗಳ ಅವರ ಜೀವಿತಾವಧಿಯ ಸಂಘರ್ಷದಲ್ಲಿ ಜನತೆಯೊಂದಿಗಿನ ನಿಕಟ ಸಂಪರ್ಕವು ಈ ದೇಶದ ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಸಂಪರ್ಕ ಸೇತುವೆಯಾಗಿತ್ತು. ಅಸಂಖ್ಯಾತ ಜನತೆಯ ಆಕ್ರೋಶದ ಪ್ರತಿನಿಧಿಯಾಗಿದ್ದರು. ಅವರು ಇದುವರೆಗೂ ಬರೆದಿರುವ ಸಾವಿರಾರು ಹಾಡುಗಳು ಅವಿಭಜಿತ ಆಂಧ್ರಪ್ರದೇಶಕ್ಕೆ ಅಷ್ಟೇ ಅಲ್ಲ; ಈ ದೇಶದ ಪ್ರತಿಯೊಬ್ಬರ ಮನಮುಟ್ಟುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ.

ಗದ್ದರ್ ಅವರು ಶೋಷಿತ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆಯ ಮೇರು ಪರ್ವತ ಆಗಿದ್ದರು. ಯಾವುದೇ ಕಾರ್ಯಕ್ರಮಕ್ಕೆ ಬರಲು ಒಪ್ಪಿಕೊಂಡರೆ ತಪ್ಪಿಸುತ್ತಿರಲಿಲ್ಲ. ಸಮಯಕ್ಕೆ ಸರಿಯಾಗಿ ಹಾಜರಾಗಿ ಕ್ರಾಂತಿಕಾರಿ ಗೀತೆಗಳ ಮೂಲಕವೇ ಶೋಷಿತ ಸಮುದಾಯವನ್ನು ಜಾಗೃತಗೊಳಿಸಲು ಪ್ರಯತ್ನಿಸುತ್ತಿದ್ದರು.

ಸಾಮಾಜಿಕವಾಗಿ ತುಳಿತಕ್ಕೊಳಗಾದವರನ್ನು ಪೊಲೀಸರು, ಭೂಮಾಲೀಕರು ಕೊಂದು ಹಾಕಿದಾಗ ಅವರನ್ನು ಎದೆಗೆ ಹಚ್ಚಿಕೊಂಡು ಹಾಡುತ್ತಿದ್ದರು. ತಾಯಿ ಕರುಣೆಯಿಂದ ಮಗನ ಶವ ಕೇಳುವ ಹಾಡನ್ನು ಕಲ್ಲಿನಂಥವರ ಮನಸ್ಸನ್ನೂ ಕರಗಿಸುವಂತೆ ಹಾಡುತ್ತಿದ್ದರು. ರಾಯಚೂರಿಗೆ ಐದು ಬಾರಿ ಬಂದು ಹೋಗಿದ್ದ ಅವರು, ಭೂಮಾಲೀಕರ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸಾಯುವವರೆಗೂ ಹಾಡು ಹಾಡಿದರು. ಅವರೊಬ್ಬ ಅಪ್ರತಿಮ ಕ್ರಾಂತಿಕಾರಿ ಕಲಾವಿದ.

ಆಡು ಮುಟ್ಟದ ಸೊಪ್ಪಿಲ್ಲ, ಗದ್ದರ್ ಬರೆಯದ ಸಾಹಿತ್ಯವಿಲ್ಲ. ಇಷ್ಟರ ಮಟ್ಟಿಗೆ ಹೆಸರುವಾಸಿಯಾಗಿದ್ದ ಅವರು, ಭಾರತದ ಶ್ರಮಿಕ ವರ್ಗದ ಸಾಂಸ್ಕೃತಿಕ ಕ್ರಾಂತಿಗೆ ಒಬ್ಬ ಸೇನಾಧಿಪತಿ ಎನಿಸಿಕೊಂಡಿದ್ದರು. 'ನನ್ನ ಸಾಹಿತ್ಯ ಜನರ ಅನುಭವದಿಂದ ಉಗಮವಾದ ಸಾಹಿತ್ಯ. ದುಡಿಯುವ ಜನತೆಯ ಶೇಕಡ 25ರಷ್ಟು ಸಾಹಿತ್ಯವನ್ನು ಮೈಗೂಡಿಸಿಕೊಂಡಿದೆ. ಇಂತಹ ಪರಿಣಾಮಕಾರಿ ಸಾಹಿತ್ಯವಾಗಿ ಪ್ರಚುರವಾಗಿರುವಾಗ ಇನ್ನೂ ಶೇಕಡ 75ರಷ್ಟು ಸಾಹಿತ್ಯವನ್ನು ಅಧ್ಯಯನ ಮಾಡಿದ್ದರೆ ಅದರ ವ್ಯಾಪ್ತಿಯು ಆಳುವ ಸರ್ಕಾರಗಳ ಹಗಲು ದರೋಡೆಗೆ ಅಂಕುಶ ವಾಗುತ್ತಿತ್ತು. ದುಡಿಯುವ ಜನತೆಯೇ ಈ ದೇಶದ ಜನಾಧಿಕಾರವನ್ನು ಕೈವಶ ಮಾಡಿಕೊಂಡು, ಈ ದೇಶದ ಅಧಿಕಾರಹೀನತೆ, ಅಸ್ಪೃಶ್ಯತೆ, ಅಸಮಾನತೆ ನಶಿಸಿ, ನೈಜ ಪ್ರಜಾತಾಂತ್ರಿಕ ವ್ಯವಸ್ಥೆಯ ಪುನರ್ ಪ್ರಸ್ಥಾನ ನಿರ್ಮಾಣ ಆಗುವುದರಲ್ಲಿ ಯಾವುದೇ ಸಂದೇಹ ಇರುತ್ತಿರಲಿಲ್ಲ' ಎನ್ನುವುದು ಕಾಮ್ರೇಡ್ ಗದ್ದರ್ ಅವರ ದೃಢ ಸಂಕಲ್ಪವಾಗಿತ್ತು. ಇಂತಹ ಸೃಜನಶೀಲ ಸಾಹಿತಿಯ ಅಗಲಿಕೆ ದೇಶದ ದಮನಿತ ಜನತೆಗೆ ದಿಗ್ಭ್ರಮೆಯಾಗಿದೆ.

ಇಳಿವಯಸ್ಸಿನಲ್ಲೂ ಸಾಹಿತ್ಯಿಕ ಕೃಷಿಯಿಂದ ಅವರು ವಿರಮಿಸಿರಲಿಲ್ಲ. 'ವಾಟ್ಸ್ಆ್ಯಪ್, ವಿಶ್ವವಿದ್ಯಾಲಯಗಳಲ್ಲಿ ನಿರತವಾಗಿರುವ ಯುವ ಸಮುದಾಯವು ಒಂದು ಕ್ಷಣವಾದರೂ ದೇಶದ ದುರಾಡಳಿತದ ಬಗ್ಗೆ ಸಹನೆಯಿಂದ ಪ್ರತಿರೋಧಿಸಿದರೆ ಈ ದೇಶದ ದುಷ್ಟರ ರಾಜಕಾರಣ ಧ್ವಂಸವಾಗಿ, ಬಾಬಾಸಾಹೇಬ ಅಂಬೇಡ್ಕರ್ ಅವರು ಕಂಡ ಭವಿಷ್ಯದ ಭಾರತ ನಿಮ್ಮ ಅಂಗೈಯಲ್ಲಿರುತ್ತದೆ' ಎಂಬ ಎಚ್ಚರಿಕೆಯ ಬಂಡಾಯದ ಹಾಡುಗಳು ಗದ್ದರ್ ಅವರ ಚಿರನಿದ್ರೆಯಿಂದ ಸ್ತಬ್ಧವಾಗಿವೆ.

ದ್ವೇಷವಿಲ್ಲದ, ಮೋಸವಿಲ್ಲದ ನಾಡಿನ ನಿರ್ಮಾಣದ ಆಶಯ ಹೊತ್ತು ಹುತಾತ್ಮರಾದ ಅಸಂಖ್ಯಾತ ಹೋರಾಟಗಾರರ ತ್ಯಾಗಪೂರಿತ ಬಲುವಳಿಯ ಬಂಡಾಯದ ಧ್ವನಿಯಿಲ್ಲವಾಗಿದೆ.

ಸಾವಿನ ಜೊತೆ ಸಂಗೀತ ಹಾಡುವೆನು ಕ್ರಾಂತಿಯ ತಾಯಿಗೆ ಲಾಲ್ ಸಲಾಮ್ ಎಂಬ ಅವರ ವಾಣಿ ಕ್ರಾಂತಿಕಾರಿ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ದಾಖಲಾಗಿದೆ.

ಲೇಖಕರು: ಸಾಹಿತಿ

ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿಗೆ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವಿರೋಧ

ಒಳಮೀಸಲಾತಿ ಶಿಫಾರಸು ವಾಪಸ್‌ಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿ ಕುರಿತ ಚರ್ಚೆಯನ್ನು ಸಚಿವರು ಹಾಗೂ ವರದಿ ಪರ ಹೋರಾಟಗಾರರು ತಕ್ಷಣವೇ ನಿಲ್ಲಿಸಬೇಕು. ಅಲ್ಲದೇ, ಒಳಮೀಸಲಾತಿಗೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರ ಮಾಡಿದ್ದ ಶಿಫಾರಸುಗಳನ್ನೂ ವಾಪಸ್ ಪಡೆಯಬೇಕು' ಎನ್ನುವ ನಿರ್ಣಯವನ್ನು ನಗರದಲ್ಲಿ ಭಾನುವಾರ ನಡೆದ ಮೀಸಲಾತಿ ಸಂರಕ್ಷಣಾ ರಾಜ್ಯ ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಬೋವಿ, ಕೊರಚ, ಕೊರಮ, ಲಂಬಾಣಿ ಸಮುದಾಯಕ್ಕೆ ತೊಂದರೆ ಎದುರಾದರೆ ಒಗ್ಗಟ್ಟಿನ ಹೋರಾಟ ರೂಪಿಸಬೇಕು ಎಂದು ಮುಖಂಡರು ಕರೆ ನೀಡಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ರಾಜ್ಯ ಸಮಿತಿ ನೇತೃತ್ವದಲ್ಲಿ ನಡೆದ ಸಮಾವೇಶದಲ್ಲಿ ಒಕ್ಕೂಟದ ಗೌರವ ಅಧ್ಯಕ್ಷ ಅರವಿಂದ ಲಿಂಬಾವಳಿ ಮಾತನಾಡಿ, 'ಪರಿಶಿಷ್ಟ ಜಾತಿ ಪಟ್ಟಿಯಿಂದ ನಮ್ಮ ಸಮುದಾಯವನ್ನು ತೆಗೆದು ಹಾಕುವ ಹುನ್ನಾರ ನಡೆಯುತ್ತಿದೆ. ಷಡ್ಯಂತ್ರ ನಡೆಸಿದ್ದವರಿಗೆ ವಿಧಾನಸಭೆ ಚುನಾವಣೆಯಲ್ಲಿ ಸಮುದಾಯದ ಜನರೇ ಪಾಠ ಕಲಿಸಿದ್ದಾರೆ. ಈ ಸರ್ಕಾರವೂ ಅದೇ ನಿಟ್ಟಿನಲ್ಲಿ ಸಾಗುತ್ತಿದೆ. ಅದರ ಪ್ರತಿಫಲ ಅನುಭವಿಸಬೇಕಾದೀತು' ಎಂದು ಎಚ್ಚರಿಸಿದರು.

'ಬೋವಿ ಸಮಾಜದ ಜನರು ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಸದಾ ಎಚ್ಚರವಾಗಿರುವ ಸಮಾಜ ಎಂಬುದನ್ನು ಸರ್ಕಾರವು ಮರೆಯಬಾರದು' ಎಂದು ಹೇಳಿದರು. 'ಆಯೋಗದ ವರದಿ ಜಾರಿಗೆ ಈಗಿನ ಸರ್ಕಾರವೂ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಸಮಾಜಕ್ಕೆ ಪೆಟ್ಟು ಬಿದ್ದರೆ ಮತ್ತೆ ಹೋರಾಟ ನಡೆಸಲಾಗುವುದು. ಮೀಸಲಾತಿ ಪಟ್ಟಿಯಿಂದ ತೆಗೆದು ಹಾಕಲು ಬಿಡುವುದಿಲ್ಲ. ಕೇಂದ್ರದ ಎಸ್‌.ಸಿ, ಎಸ್‌.ಟಿ ಆಯೋಗಕ್ಕೂ ಸಮಾಜಕ್ಕೆ ಆಗಿರುವ ತೊಂದರೆಯನ್ನು ತಿಳಿಸಲಾಗಿದೆ' ಎಂದು ಹೇಳಿದರು.

'ಆಂಧ್ರಪ್ರದೇಶದಲ್ಲಿ ಒಳಮೀಸಲಾತಿ ಪ್ರಶ್ನಿಸಿದಾಗ ಸುಪ್ರೀಂ ಕೋರ್ಟ್ ಇದಕ್ಕೆ ಅವಕಾಶ ಕಲ್ಪಿಸಿಲ್ಲ. ಈ ಪ್ರಕರಣದ ಬಗ್ಗೆಯೂ ಉನ್ನತ ಸಮಿತಿ ರಚಿಸಿ ವಿಚಾರಣೆ ನಡೆಸಬೇಕಿದೆ. ಅಗತ್ಯ ಬಿದ್ದರೆ ಕೇಂದ್ರಕ್ಕೆ ನಿಯೋಗ ತೆರಳಲು ಸಿದ್ಧ' ಎಂದು ಘೋಷಿಸಿದರು.

ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಮಾತನಾಡಿ, 'ಪರಿಶಿಷ್ಟರ ಪಟ್ಟಿಯಲ್ಲಿ 101 ಉಪ ಜಾತಿಗಳಿವೆ. ಶೋಷಿತ ಸಮುದಾಯವನ್ನು ಮೀಸಲಾತಿಯಿಂದ ಹೊರಗೆ ತೆಗೆಯುವ ಹುನ್ನಾರ ನಡೆಯುತ್ತಿದೆ' ಎಂದು ದೂರಿದರು. 'ಆಯೋಗದ ವರದಿ ಅವೈಜ್ಞಾನಿಕವಾಗಿದೆ. ಕಾಂಗ್ರೆಸ್ ಸರ್ಕಾರವು ವರದಿ ಜಾರಿಗೆ ಮುಂದಾದರೂ ಹೋರಾಟ ನಡೆಸುತ್ತೇವೆ. ಲಂಬಾಣಿ ಸಮುದಾಯಕ್ಕೆ ಸಚಿವ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ' ಎಂದರು. ಒಕ್ಕೂಟದ ರಾಜ್ಯ ಅಧ್ಯಕ್ಷ ಡಾ.ರವಿ ಮಾಕಳಿ ಮಾತನಾಡಿ, 'ಯಾವುದೇ ಸಮಸ್ಯೆ ಎದುರಾದರೂ ಒಗ್ಗಟ್ಟಿನಿಂದ ಹೋರಾಡೋಣ. ಒಗ್ಗಟ್ಟಿದ್ದರೆ ಸೌಲಭ್ಯ ಪಡೆಯಲು ಸಾಧ್ಯವಾಗಲಿದೆ' ಎಂದರು.

ಬೆಂಗಳೂರಿನಲ್ಲಿ ಭಾನುವಾರ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಆಯೋಜಿಸಿದ್ದ ಮೀಸಲಾತಿ ಸಂರಕ್ಷಣಾ ರಾಜ್ಯ ಸಮಾವೇಶದಲ್ಲಿ (ಎಡದಿಂದ) ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್‌.ಅನಂತ ನಾಯ್ಕ, ಶಾಸಕ ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಗೌರವ ಅಧ್ಯಕ್ಷ ಅರವಿಂದ ಲಿಂಬಾವಳಿ, ಒಕ್ಕೂಟದ ಅಧ್ಯಕ್ಷ ರವಿ ಮಾಕಳಿ, ಕಾರ್ಯಾಧ್ಯಕ್ಷ ರಾಘವೇಂದ್ರ ನಾಯ್ಕ ಸೇರಿದಂತೆ ವೇದಿಕೆ ಮೇಲಿದ್ದವರು ಮೀಸಲಾತಿ ರಕ್ಷಣೆಗಾಗಿ ಒಗ್ಗಟ್ಟಿನಿಂದ ಹೋರಾಟ ನಡೆಸುವುದಾಗಿ ಪ್ರತಿಜ್ಞೆ ಮಾಡಿದರು. – ಪ್ರಜಾವಾಣಿ ಚಿತ್ರ

ಮದ್ಯ ಮಾರುವವರ ಮನೆಗೆ ಬೆಂಕಿ: ಶಾಸಕ ವೀರೇಂದ್ರ

ಪ್ರಜಾವಾಣಿ ವಾರ್ತೆ

ಕೆ.ಸಿ.ವೀರೇಂದ್ರ

ಚಿತ್ರದುರ್ಗ: 'ಗ್ರಾಮದಲ್ಲಿ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುವವರ ಮನೆಗಳಿಗೆ ಬೆಂಕಿ ಹಚ್ಚುತ್ತೇವೆ' ಎಂದು ಹೇಳಿದ ಮಹಿಳೆಯರಿಗೆ, 'ಆಯ್ತು ಬೆಂಕಿ ಹಚ್ಚಿ. ಏಕೆ ಯೋಚನೆ ಮಾಡುತ್ತೀರಿ' ಎಂದು ಶಾಸಕ ಕೆ.ಸಿ. ವೀರೇಂದ್ರ ಸಲಹೆ ನೀಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ತಾಲ್ಲೂಕಿನ ಹಿರೇಗುಂಟನೂರು ಗ್ರಾಮದಲ್ಲಿ ಈಚೆಗೆ ತಮ್ಮನ್ನು ಭೇಟಿಯಾಗಿ, ಮದ್ಯ ಅಕ್ರಮ ಮಾರಾಟ ತಡೆಯುವಂತೆ ಮನವಿ ಮಾಡಿಕೊಂಡ ಮಹಿಳೆಯರಿಗೆ ಈ ರೀತಿ ಹೇಳಿದ್ದಾರೆ.

'ಗ್ರಾಮದಲ್ಲಿ ಮದ್ಯವನ್ನು ಎಗ್ಗಿಲ್ಲದೇ ಮಾರಾಟ ಮಾಡುತ್ತಿರುವುದರಿಂದ ತೊಂದರೆ ಉಂಟಾಗಿದೆ. ಗಂಡಂದಿರು ಕುಡಿದು ಬಂದು ನಿತ್ಯ ಮನೆಗಳಲ್ಲಿ ಗಲಾಟೆ ಮಾಡುತ್ತಿದ್ದಾರೆ. ಮದ್ಯ ಮಾರಾಟ ತಡೆಯಲು ಈವರೆಗೆ ಯಾರೂ ಕ್ರಮ ಕೈಗೊಂಡಿಲ್ಲ. ಕೈ ಮುಗಿಯುತ್ತೇವೆ, ಈ ಬಗ್ಗೆ ಕ್ರಮ ಕೈಗೊಳ್ಳಿ' ಎಂದು ಮಹಿಳೆಯರು ಶಾಸಕರಲ್ಲಿ ಮನವಿ ಮಾಡಿದ್ದರು.

ಇದೇ ವೇಳೆ ಮಹಿಳೆಯೊಬ್ಬರು, 'ಇಷ್ಟು ಹೇಳಿದ್ದೇವೆ, ಮುಂದೆ ಮದ್ಯ ಮಾರುವವರ ಮನೆಗಳಿಗೆ ಬೆಂಕಿ ಇಡುತ್ತೇವೆ' ಎಂದು ಹೇಳಿದಾಗ, ಶಾಸಕ ವೀರೇಂದ್ರ, 'ನೀನು ಬೆಂಕಿ ಇಡಮ್ಮ ನಾನಿದ್ದೇನೆ, ಯಾಕೆ ಯೋಚನೆ ಮಾಡ್ತೀಯಾ' ಎಂದು ಹೇಳಿದ್ದಾರೆ. 'ಹುಳು ಇರುವ ಅನ್ನ ನೀಡುವ ಹಾಸ್ಟೆಲ್ ವಾರ್ಡನ್‌ನನ್ನು ರೂಮಿನಲ್ಲಿ ಕೂಡಿಹಾಕಿ, ಹುಳ ತಿನ್ನಿಸಿ ಹೊಡೆಯಿರಿ' ಎಂದು ವೀರೇಂದ್ರ ಶನಿವಾರವಷ್ಟೇ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಹೇಳಿದ್ದರು.

ಕ್ರಾಂತಿಕಾರಿ ಗೀತೆಗಳ ಗಾಯಕ ಗದ್ದರ್ ನಿಧನ

ಒಂದನೇ ಪುಟದಿಂದ...

ಕೆಲ ಕಾಲ ನಕ್ಸಲ್ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದ ಅವರು ನಂತರ ಅದರಿಂದ ಹೊರಬಂದಿದ್ದರು. 2018ರಲ್ಲಿ ತೆಲಂಗಾಣ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮೊದಲ ಬಾರಿಗೆ ಮತದಾನ ಮಾಡಿದ್ದರು. ಜುಲೈ 2ರಂದು ತೆಲಂಗಾಣದ ಖಮ್ಮಂನಲ್ಲಿ ನಡೆದ ಕಾಂಗ್ರೆಸ್‌ನ ಸಾರ್ವಜನಿಕ ಸಭೆಯಲ್ಲಿ ಅವರು ಭಾಗವಹಿಸಿದ್ದರು.

ದಂಪತಿ ಸಾವು

ಬೆಳಗಾವಿ: ತಾಲ್ಲೂಕಿನ ಬಿಜಗರ್ಣಿಯ ಕೃಷಿಭೂಮಿಯಲ್ಲಿ ಭಾನುವಾರ ಕೆಲಸ ಮಾಡುತ್ತಿದ್ದ ವೇಳೆ ಹೊಲದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ದಂಪತಿ ಮೃತಪಟ್ಟಿದ್ದಾರೆ. 'ಅಮಿತ್ ದೇಸಾಯಿ(27), ಲತಾ ದೇಸಾಯಿ(26) ಬೆಳೆಗೆ ಕ್ರಿಮಿನಾಶಕ ಸಿಂಪಡಿಸುತ್ತಿದ್ದ ಈ ವೇಳೆ, ಹೊಲದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮರು ತನಿಖೆಗೆ ಒತ್ತಾಯ

ಸೌಜನ್ಯಾ ಪ್ರಕರಣ; ಪುತ್ತೂರಿನಲ್ಲಿ ಗೌಡ ಸಮುದಾಯದ ಸಭೆ

ಪ್ರಜಾವಾಣಿ ವಾರ್ತೆ

ಪುತ್ತೂರು: ಸೌಜನ್ಯಾ ಅತ್ಯಾಚಾರ, ಕೊಲೆ ಪ್ರಕರಣದ ಮರು ತನಿಖೆ ನಡೆಸಿ, ನೈಜ ಅಪರಾಧಿಗಳನ್ನು ಪತ್ತೆ ಮಾಡಿ ಶಿಕ್ಷೆಗೆ ಒಳಪಡಿಸುವಂತೆ ಆಗ್ರಹಿಸಿ ವಿವಿಧ ರೀತಿಯಲ್ಲಿ ಹೋರಾಟ ಆರಂಭಿಸಲು ಪುತ್ತೂರಿನಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಗೌಡ ಸಮುದಾಯದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಮುಂದಿನ ಹೋರಾಟಕ್ಕಾಗಿ ಜಿಲ್ಲಾ ಮಟ್ಟದ ಹೋರಾಟ ಸಮಿತಿ ರಚಿಸಲಾಯಿತು.

ಪುತ್ತೂರಿನ ತೆಂಕಿಲ ಒಕ್ಕಲಿಗ ಗೌಡ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ ಮಂಗಳೂರು, ಸುಳ್ಯ, ಬೆಳ್ತಂಗಡಿ, ಕಡಬ, ಬಂಟ್ವಾಳ, ವಿಟ್ಲ ಹಾಗೂ ಪುತ್ತೂರು ತಾಲ್ಲೂಕಿನ ಒಕ್ಕಲಿಗ ಗೌಡ ಸಮಾಜದದವರು, ಸೌಜನ್ಯಾ ತಾಯಿ ಕುಸುಮಾವತಿ ಮತ್ತು ಸಂಬಂಧಿಕರು ಭಾಗವಹಿಸಿದ್ದರು. ಸೌಜನ್ಯಾ ಸಂಬಂಧಿಕರಾದ ವಿಠಲ ಗೌಡ ಮತ್ತು ಜಗದೀಶ್ ಮಾತನಾಡಿ, ಸೌಜನ್ಯಾ ಕೊಲೆ ಪ್ರಕರಣ ಹಾಗೂ ಆ ಬಳಿಕ ನಡೆದ ತನಿಖೆ, ಬೆದರಿಕೆ ವಿದ್ಯಮಾನಗಳ ಕುರಿತು ಮಾಹಿತಿ ನೀಡಿದರು. ಸೌಜನ್ಯಾ ತಾಯಿ ಕುಸುಮಾವತಿ ಅವರು 'ನಮಗೆ ನ್ಯಾಯ ಕೊಡಿಸಿ' ಎಂದು ಸಭೆಯ ಮುಂದೆ ಅವಲತ್ತುಗೊಂಡರು.

ವಕೀಲರ ಪ್ರತ್ಯೇಕ ಸಮಿತಿಯ ಮೂಲಕ ಕಾನೂನಾತ್ಮಕ ರೀತಿಯಲ್ಲಿ ಹೋರಾಟ ನಡೆಸುವುದರ ಕುರಿತೂ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಹೋರಾಟ ಸಮಿತಿ ರಚನೆ

ಮಂಗಳೂರು ಒಕ್ಕಲಿಗರ ಗೌಡ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಬಿ ಬಾಲಕೃಷ್ಣ ಗೌಡ ಅವರನ್ನು ಹೋರಾಟ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು. ವಿದ್ಯುನ್ಮಾನ ಬಳಕೆಯ ಮೂಲಕ ಜಿಲ್ಲಾ ಸದಸ್ಯರ ಸಂಪರ್ಕಕ್ಕಾಗಿ ಸುಳ್ಯದ ರಕ್ಷಿತ್ ಅವರನ್ನು ಹೋರಾಟ ಸಮಿತಿಯ ಸಹ ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು. ಎಲ್ಲಾ ತಾಲ್ಲೂಕಿನ ಒಕ್ಕಲಿಗ ಗೌಡ ಸೇವಾ ಸಂಘ, ಯುವ ಒಕ್ಕಲಿಗರ ಸಂಘ, ಒಕ್ಕಲಿಗ ಮಹಿಳಾ ಸಂಘದ ಅಧ್ಯಕ್ಷರುಗಳು ಹೋರಾಟ ಸಮಿತಿಯ ಸಹ ಸಂಚಾಲಕರಾಗಿರುತ್ತಾರೆ ಎಂದು ಸಭೆಯಲ್ಲಿ ಘೋಷಿಸಲಾಯಿತು.

ಮುಖ್ಯಾಂಶಗಳು

- ಸೌಜನ್ಯಾ ತಾಯಿ ಕುಸುಮಾವತಿ ಭಾಗಿ
- ಹೋರಾಟ ಆರಂಭಿಸಲು ನಿರ್ಧಾರ

ಬೊಮ್ಮಾಯಿಗೆ ಶಾ ಬುಲಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕರೆಯ ಮೇರೆಗೆ ಶಾಸಕ ಬಸವರಾಜ ಬೊಮ್ಮಾಯಿ ಭಾನುವಾರ ರಾತ್ರಿ ದೆಹಲಿಗೆ ತೆರಳಿದರು.

ವಿರೋಧಪಕ್ಷದ ನಾಯಕ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಗೆ ಆಯ್ಕೆ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸರ್ಕಾರದ ವಿರುದ್ಧದ ಬಿಜೆಪಿ ಹಮ್ಮಿಕೊಂಡ ಹಲವು ಹೋರಾಟಗಳಲ್ಲಿ ಬೊಮ್ಮಾಯಿ ಮುಂಚೂಣಿಯಲ್ಲಿದ್ದರು.

ವಿರೋಧಪಕ್ಷದ ನಾಯಕನ ಹುದ್ದೆಯ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲು ಬೊಮ್ಮಾಯಿ ಅವರನ್ನು ಶಾ ಕರೆಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.34	4,635	5,354
ಹಾರಂಗಿ	2,859	2,858.65	2,830	2,800
ಕಬಿನಿ	2,284	2,282.74	5,243	5,000
ಹೇಮಾವತಿ	2,922	2,915.50	4,677	200
ಲಿಂಗನಮಕ್ಕಿ	1,819	1,790.15	17,395	2,867
ಸೂಪಾ (ಮೀ)	564	546.30	15,703	3,429
ಮಾಣಿ	595	581.46	2,620	-
ತುಂಗಭದ್ರಾ	1,633	1,627.56	10,550	5,941
ಮಲಪ್ರಭಾ	2079.50	2,065.60	3,458	194
ಘಟಪ್ರಭಾ	2,175	2,161.63	12,228	1,766
ಭದ್ರಾ	186	165	6,882	192
ಆಲಮಟ್ಟಿ (ಮೀ)	519.60	519.52	75,913	66,064
ನಾರಾಯಣಪುರ (ಮೀ)	492.25	491.75	70,000	63,100

* ನೆಲಮಟ್ಟದಿಂದ

ಕರಾವಳಿ, ಉತ್ತರ ಒಳನಾಡಿನಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲವು ಭಾಗದಲ್ಲಿ ಸೋಮವಾರ ಮತ್ತು ಮಂಗಳವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ಕೆಲವು ಭಾಗದಲ್ಲಿ ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಬೆಂಗಳೂರು ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ಕೆಲವೊಮ್ಮೆ ಮೇಲ್ಮೈ ಸುಳಿಗಾಳಿ ಬೀಸಲಿದೆ ಎಂದು ಸೂಚನೆ ನೀಡಿದೆ.

ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಸಂಬಂಧಿಸಿದ ಮೂರು ಲಕ್ಷ ಎಂಟ್ರಿ

30 ಸಾವಿರ ವಿದ್ಯಾರ್ಥಿಗಳಿಂದ 5 ಲಕ್ಷ ಆಪ್ಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ, ಎಂಜಿನಿಯರಿಂಗ್ ಮತ್ತಿತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಆದ್ಯತಾ ಕ್ರಮದಲ್ಲಿ ಐಚ್ಛಿಕಗಳನ್ನು (ಆಪ್ಷನ್) ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅವಕಾಶ ಮಾಡಿಕೊಟ್ಟ ಮೊದಲ ದಿನ (ಆಗಸ್ಟ್ 6) 30 ಸಾವಿರ ವಿದ್ಯಾರ್ಥಿಗಳು ತಮ್ಮ ಆದ್ಯತೆಯ ಕೋರ್ಸ್‌ಗಳಿಗಾಗಿ ಐದು ಲಕ್ಷ ಆಪ್ಷನ್‌ಗಳನ್ನು ದಾಖಲಿಸಿದ್ದಾರೆ.

'ಭಾನುವಾರ ಬೆಳಿಗ್ಗೆ 7ಕ್ಕೆ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗಿತ್ತು. ಮೊದಲ ಎರಡು ಗಂಟೆ ಸರ್ವರ್ ಸ್ವಲ್ಪ ನಿಧಾನ ಇದ್ದ ಕಾರಣ ಸ್ವಲ್ಪ ಸಮಸ್ಯೆಯಾಗಿತ್ತು. ನಂತರ ಸಂಬಂಧಪಟ್ಟ ಕಂಪ್ಯೂಟರ್ ಎಂಜಿನಿಯರ್‌ಗಳು ಅದಕ್ಕೆ ಪರಿಹಾರ ಕಂಡುಕೊಂಡಿದ್ದರಿಂದ ತಮ್ಮ ಇಚ್ಛೆಯನುಸಾರ ಕೋರ್ಸ್‌ಗಳನ್ನು ದಾಖಲಿಸುವ ಕೆಲಸವನ್ನು ವಿದ್ಯಾರ್ಥಿಗಳು ಸರಾಗವಾಗಿ ಮಾಡಿದ್ದಾರೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

'ಐದು ಲಕ್ಷ ಆಪ್ಷನ್ ಎಂಟ್ರಿಗಳಲ್ಲಿ ಮೂರು ಲಕ್ಷ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಸಂಬಂಧಿಸಿದ ಎಂಟ್ರಿಗಳೇ ಇವೆ. ವೈದ್ಯಕೀಯ ಕೋರ್ಸ್‌ಗೆ ಸಂಬಂಧಿಸಿದಂತೆ 1.25 ಲಕ್ಷ ಎಂಟ್ರಿಗಳು ಇವೆ. ಉಳಿದ 75 ಸಾವಿರ ಆಪ್ಷನ್ ಎಂಟ್ರಿಗಳು ಕೃಷಿ, ಪಶುವೈದ್ಯಕೀಯ ಸೇರಿದಂತೆ ಇತರ ಕೋರ್ಸ್‌ಗಳಿಗೆ ಸಂಬಂಧಿಸಿದ್ದಾಗಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಇದೇ ಮೊದಲ ಬಾರಿಗೆ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಕೋರ್ಸ್‌ಗಳಿಗೂ ಏಕಕಾಲದಲ್ಲಿ ಆದ್ಯತೆಯನುಸಾರ ಆಪ್ಷನ್ ಎಂಟ್ರಿ ಮಾಡಲು ಅವಕಾಶ ನೀಡಲಾಗಿದೆ. ಇದರಿಂದ ಸಮಯ ಉಳಿತಾಯವಾಗುತ್ತಿದ್ದು, ಎಲ್ಲವೂ ಒಮ್ಮೆಗೇ ಮುಗಿಯಲಿದೆ' ಎಂದು ಅವರು ಹೇಳಿದ್ದಾರೆ. 'ಆಪ್ಷನ್ ಎಂಟ್ರಿಗೆ ಇದೇ 9 ರವರೆಗೆ ಅವಕಾಶ ಇದ್ದು, 10 ರಂದು ಅಣಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ. ಹೀಗಾಗಿ ಅಭ್ಯರ್ಥಿಗಳು ಸಾಧ್ಯವಾದಷ್ಟು 9ರ ಮೊದಲೇ ತಮ್ಮ ಇಚ್ಛೆಯನುಸಾರ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು' ಎಂದಿದ್ದಾರೆ.

ಕಾಂಗ್ರೆಸ್ ಮುಸ್ಲಿಂ ಮುಖಂಡರ ಸಭೆ

ಪರಿಷತ್ ಸ್ಥಾನ, ಲೋಕಸಭೆ ಟಿಕೆಟ್‌ಗೆ ಹಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ಗೆ ನಾಮನಿರ್ದೇಶನ ಆಗುವ ಮೂರು ಸ್ಥಾನಗಳ ಪೈಕಿ ಒಂದು ಸ್ಥಾನ ಮುಸ್ಲಿಮರಿಗೆ ಕೊಡಬೇಕು. ಅಲ್ಲದೇ, ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ ಎರಡರಿಂದ ಮೂರು ಟಿಕೆಟ್‌ಗಳನ್ನು ಸಮುದಾಯಕ್ಕೇ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕರು ಆಗ್ರಹಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಪಕ್ಷದ ಮುಸ್ಲಿಂ ನಾಯಕರ ಸಭೆಯಲ್ಲಿ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬೆನ್ನಿಗೆ ನಿಂತ ಮುಸ್ಲಿಂ ಸಮುದಾಯಕ್ಕೆ ಪಕ್ಷ ಸೂಕ್ತ ಮಾನ್ಯತೆ ನೀಡಲೇಬೇಕು ಎಂದು ಒತ್ತಾಯಿಸಲಾಯಿತು.

ವಿಧಾನ ಪರಿಷತ್‌ನಲ್ಲಿ ಮೂರು ಸ್ಥಾನಗಳ ಪೈಕಿ, ಒಂದು ಸ್ಥಾನಕ್ಕೆ ಮನ್ಸೂರ್ ಅಲಿ ಖಾನ್ ಹೆಸರು ಮುಂಚೂಣಿಯಲ್ಲಿದ್ದರೂ, ನಟಿ ಉಮಾಶ್ರೀ ಅವರನ್ನು ಪರಿಗಣಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಲವು ತೋರಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಸಭೆ ಸೇರಿದ ನಾಯಕರು, ಮೂರು ಸ್ಥಾನಗಳಲ್ಲಿ ಒಂದನ್ನು ಸಮುದಾಯದವರಿಗೆ ನೀಡಲೇಬೇಕು. ಸಮುದಾಯವನ್ನು ನಿರ್ಲಕ್ಷಿಸಬಾರದು ಎಂದು ಪರೋಕ್ಷವಾಗಿ ಎಚ್ಚರಿಸಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಹಾವೇರಿ, ಬೆಂಗಳೂರು ಕೇಂದ್ರ, ಬೀದರ್ ಅಥವಾ ಹುಬ್ಬಳ್ಳಿ– ಧಾರವಾಡ ಕ್ಷೇತ್ರಗಳ ಪೈಕಿ ಯಾವುದಾದರು ಎರಡು ಅಥವಾ ಮೂರು ಕ್ಷೇತ್ರಗಳನ್ನು ಮುಸ್ಲಿಂ ಸಮುದಾಯಕ್ಕೆ ಕೊಡಬೇಕು. ನಿಗಮ– ಮಂಡಳಿ ನೇಮಕದಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು, ಸಮುದಾಯದ ನಾಯಕರ ಜೊತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಸಭೆ ನಡೆಸಿ, ಅಹವಾಲು ಆಲಿಸಬೇಕು, ರಾಜ್ಯಸಭೆಗೆ ಆಯ್ಕೆ ಸಂದರ್ಭದಲ್ಲೂ ಮುಸ್ಲಿಮರನ್ನು ಪರಿಗಣಿಸಲು ಆಗ್ರಹಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಬಿಬಿಎಂಪಿ ಚುನಾವಣೆಯಲ್ಲಿ ಆದ್ಯತೆ ನೀಡುವಂತೆ ಆಗ್ರಹಿಸಿದ್ದಾರೆ. ಈ ವಿಚಾರವನ್ನು ಪಾಲಿಕೆ ಚುನಾವಣೆ ಸಮಿತಿ ಮುಂದೆ ಇಡಲಾಗುವುದು. ಮುಸ್ಲಿಮರ ಜನಸಂಖ್ಯೆ ಆಧರಿಸಿ ಸ್ಥಾನಮಾನ ನೀಡಲಾಗುವುದು' ಎಂದರು.

'ಬಿಜೆಪಿ ಸರ್ಕಾರ ವಾರ್ಡ್ ಮರುವಿಂಗಡಣೆ ಹೆಸರಲ್ಲಿ ಮುಸ್ಲಿಂ ಬಾಹುಳ್ಯದ ಕ್ಷೇತ್ರಗಳನ್ನು ವಿಭಜಿಸಿ, ಆ ಸಮುದಾಯದವರು ಸ್ಪರ್ಧಿಸಲು ಸಾಧ್ಯವಾಗದಂತೆ ಮಾಡಿ, ಮತ ಒಡೆಯುವ ಕೆಲಸ ಮಾಡಿತ್ತು' ಎಂದು ದೂರಿದರು.

'ಲೋಕಸಭೆ ಚುನಾವಣೆಯಲ್ಲಿಯೂ ಅವರ ಬೇಡಿಕೆಯಂತೆ ಸ್ಥಾನ ನೀಡಬೇಕು. ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ನೀಡಬೇಕು. ಗೆಲ್ಲುವ ಅವಕಾಶ ಇದ್ದಲ್ಲೆಲ್ಲ ಟಿಕೆಟ್ ನೀಡಲಾಗುವುದು' ಎಂದರು.

ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಸಚಿವ ರಹೀಂ ಖಾನ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್, ಶಾಸಕರಾದ ತನ್ವೀರ್ ಸೇಠ್, ಎನ್‌.ಎ. ಹ್ಯಾರೀಸ್, ಪಕ್ಷದ ನಾಯಕರಾದ ರೆಹಮಾನ್ ಖಾನ್, ಎ.ಎಂ. ಹಿಂಡಸಗೇರಿ, ಮನ್ಸೂರ್ ಅಲಿ ಖಾನ್, ಅಬ್ದುಲ್ ಜಬ್ಬಾರ್ ಮತ್ತಿತರರು ಇದ್ದರು.

ಸಭೆಯಲ್ಲಿ ರೆಹಮಾನ್ ಖಾನ್, ಡಿ.ಕೆ. ಶಿವಕುಮಾರ್, ಸಲೀಂ ಅಹ್ಮದ್, ತನ್ವೀರ್ ಸೇಠ್ ಇದ್ದರು

ಸಾಹಿತ್ಯ ಸಮ್ಮೇಳನ: ಪೂರ್ವಭಾವಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರದಲ್ಲಿ ಆಯೋಜಿಸಲು ನಿಗದಿಯಾಗಿರುವ 86ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯು ಆ.7ರಂದು ಸಂಜೆ 4ಕ್ಕೆ ಜಿಲ್ಲಾ ಪಂಚಾಯಿತಿ ಆವರಣದ ಕಾವೇರಿ ಸಭಾಂಗಣದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ, ಕಸಾಪ ಘಟಕದ ಅಧ್ಯಕ್ಷ ಮಹೇಶ್ ಜೋಶಿ, ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸುವರು. ಸ್ಥಳ ನಿಗದಿಯ ಬಗ್ಗೆ ಚರ್ಚೆ ನಡೆಯಲಿದೆ. ಹಾವೇರಿ ಸಮ್ಮೇಳನದ ವಿಶೇಷತೆ ಹಾಗೂ ಮುಂದಿನ ಸಮ್ಮೇಳನದಲ್ಲಿ ಆಯೋಜಿಸ ಲು ಉದ್ದೇಶಿಸಿರುವ ವಿಶೇಷತೆಗಳ ಬಗ್ಗೆ ತಿಳಿಸಲಾಗುವುದು ಎಂದು ಪ್ರಕಟಣೆ ಹೇಳಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002.
ದೂರವಾಣಿ: 080–22213530/22241325 ಫ್ಯಾಕ್ಸ್: 080–22214379
ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in / www.kanaja.in

ಸಂಖ್ಯೆ: ಡಿಕೆಸಿ.17015/78/2023/3ನೇ ಕರೆ ದಿನಾಂಕ: 07.08.2023

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳ ಅಧಿಕೃತ ಕಚೇರಿ ಕೆಲಸಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಸೇವೆ ಪಡೆಯಲು ಮರು ಇ–ಟೆಂಡರ್.

ಅಲ್ಪಾವಧಿ ಮರು ಟೆಂಡರ್ ವೇಳಾ ಪಟ್ಟಿ: 1) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ ಹಾಗೂ ದಿನಾಂಕ: https://kppp.karnataka.gov.in **ದಿನಾಂಕ: 07.08.2023**. 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : **ರೂ. 35,00,000/–** 3) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ. 87,500/–**. 4) ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ: **16.08.2023 ಸಂಜೆ 5:30 ಗಂಟೆಯವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **17.08.2023 ಬೆಳಿಗ್ಗೆ 11:00 ಗಂಟೆಗೆ.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **21.08.2023 ಬೆಳಿಗ್ಗೆ 11:00 ಗಂಟೆಗೆ.**

ಯಾವುದೇ ವಿಚಾರಣೆ ಸ್ಪಷ್ಟೀಕರಣಕ್ಕಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರ ಪರವಾಗಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವಾಸಾಸಂಇ/ವಾಪ್ರ/806/ಎಂಎಎ/23–24

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
(CIN) - L13100TG1958GOI001674

CONTRACTS DEPARTMENT

Tender Enquiry No: HO(Contracts)/SBPTD/SP-II/Pkg-I/944 Dated: 07.08.2023

NMDC Limited, A "NAVARATNA" Public Sector Company under Ministry of Steel, Govt. of India, invites online bids through **MSTC Portal** from experienced, reputed and competent domestic bidders for the work of **"Design, Engineering, Manufacture, Supply, Erection, Testing and Commissioning of new 7 MTPA Iron ore Screening & Beneficiation Plant - II (SP-II) along with Design, Engineering & Construction of Tailing Dam at Donimalai Complex, Bellary, Karnataka on Turnkey basis"**

The detailed NIT and Bid documents can be viewed and / or downloaded from 07.08.2023 to 04.09.2023 from following website links:

1. NMDC website - **https://nmdcportals.nmdc.co.in/nmdctender**
2. Central Public Procurement Portal (CPP PORTAL) **http://www.eprocure.gov.in /epublish/app** and
3. MSTC portal - **https://www.mstcecommerce.com/eprochome/nmdc/buyer_login.jsp** and search NMDC **Tender Event No. NMDC/HO/35/23-24/ET/343**. For further help refer to 'vendor guide' given in MSTC website.

The bidders are requested to submit their bids online through MSTC portal only. The details of submission of bid through online are given in NIT. The Bidders on regular basis are required to visit the NMDC's website / CPP Portal / MSTC website for corrigendum, if any, at a future date.

For further clarification, the following can be contacted:
1) CGM (Project, Contract & Steel), NMDC Limited, Hyderabad Tel No. +91-040-23533536, email: **contracts@nmdc.co.in**
2) Sr. General Manager & Head – Contract, M. N. Dastur & Company (P) Ltd., KolKata Ph: +91– 033– 2225 0500/ 5420, email: **Souvik.G@dastur.com**

Executive Director (Works)

हर एक काम देश के नाम

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39

ಸಂಖ್ಯೆ. ADM1-004/HSKP/2023-24 ದಿನಾಂಕ: 01.08.2023

ಹೌಸ್‌ಕೀಪಿಂಗ್ ಮತ್ತು ಚಾಲಕರ ಸೇವೆಯನ್ನು ಒದಗಿಸಲು ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿಗಮದ ಕೇಂದ್ರ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಹೌಸ್‌ಕೀಪಿಂಗ್ ಸೇವೆ ಒದಗಿಸಲು, ಕರ್ನಾಟಕ ರಾಜ್ಯದಲ್ಲಿ ಸೊಂದಾಯಿಸಲ್ಪಟ್ಟ, ಸಾಕಷ್ಟು ಅನುಭವವುಳ್ಳ ಮತ್ತು ಮಾನವ ಸಂಪನ್ಮೂಲ ಹೊಂದಿರುವ, ಅರ್ಹ ಏಜೆನ್ಸಿಗಳಿಂದ, ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಈ ಕೆಳಗಿನಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕೇಂದ್ರ ಕಛೇರಿ/ಮದ್ಯ ಮಳಿಗೆಗಳಿಗೆ ಹೌಸ್ ಕೀಪಿಂಗ್ ಮತ್ತು ಚಾಲಕರ ಸೇವೆ ಒದಗಿಸಲು ಕುರಿತು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ) (ಟೆಂಡರ್ ಮೊತ್ತದ ಶೇ. 1.5 ರಂತೆ)
1	2	3	4
1	ಪ್ರಧಾನ ಕಛೇರಿ / ಮದ್ಯ ಮಳಿಗೆ	350.30	5.25

ಟೆಂಡರ್‌ನಲ್ಲಿ ಭಾಗವಹಿಸಲಿಚ್ಛಿಸುವ ಏಜೆನ್ಸಿಗಳು ಮೇಲಿನ ಕಾಲಂ ಸಂಖ್ಯೆ (4)ರಲ್ಲಿ ತಿಳಿಸಿರುವಂತೆ ಟೆಂಡರಿಗಿಟ್ಟ ಮೊತ್ತದ ಇಎಂಡಿಯನ್ನು ನಿಯಮಾನುಸಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಂದಾಯ ಮಾಡಬೇಕು. ಟೆಂಡರ್ ಪ್ರಕ್ರಿಯೆಯ ಕಾಲಕ್ರಮ ಈ ಕೆಳಗಿಂತಿರುತ್ತದೆ.

1) ಪ್ರೀ–ಬಿಡ್ ಮೀಟಿಂಗ್ **ದಿನಾಂಕ: 16.08.2023 ರಂದು ಬೆಳಿಗ್ಗೆ 11:30 ಗಂಟೆಗೆ.** 2) ಬಿಡ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ ಮತ್ತು ಸಮಯ: 05.09.2023ರ ಸಂಜೆ 5:30 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 07.09.2023ರ ಬೆಳಿಗ್ಗೆ 11:30 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 12.09.2023ರ 11:30 ಗಂಟೆಯ ನಂತರ.**

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ : www.kppp.karnataka.gov.in or www.ksbcl.com ಭೇಟಿ ನೀಡಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ವಾಸಾಸಂಇ/ವಾಪ್ರ/ಜಿಎ/796/2023–24

ಬೆಂಗಳೂರಿನ ಆಯುರ್ವೇದ ವೈದ್ಯ ಗಿರೀಶ ಅವರು ಔಷಧೀಯ ಗಿಡಗಳ ಮಹತ್ವವನ್ನು ಮಕ್ಕಳಿಗೆ ವಿವರಿಸುತ್ತಿರುವ ದೃಶ್ಯ.

‘ಪರಿಸರ ಪಯಣ’ದಲ್ಲಿ ಜೀವವೈವಿಧ್ಯದ ಪಾಠ

ರವಿ ಸೋ. ದೇವರಡ್ಡಿ

ಕಾಡಿನಲಿ ಕಾಲಿಟ್ಟ ಗಳಿಗೆ
ಖುಷಿ ಪಡುವ ರಸಗಳಿಗೆ
ದಾರಿಯ ಆಯಾಸ ಮಾಯ
ಅದುವೇ ನಿಸರ್ಗದ ಅದ್ಭುತ
ಕಾಣುವ ಸೊಗಸದು ಸುಂದರ
ದಿನವಿಡಿ ನೋಡುತ ಕಳೆದೆವು
ತೆಂಗು ಭತ್ತ ತುಂಗಭದ್ರೆ ನೋಟ
ಕಾಣಬೇಕು ವಸುಂಧರೆಯ ಮೈಮಾಟ

ಒಂಬತ್ತನೇ ತರಗತಿಯ ವಿದ್ಯಾರ್ಥಿನಿ ಯಲ್ಲಮ್ಮ ಈ ತಳವಾರ್ ಬರೆದ ಪದ್ಯದ ಸಾಲುಗಳಿವು. ನಾನು ಶಾಲಾ ಮಕ್ಕಳೊಂದಿಗೆ ಕೈಗೊಂಡ ‘ಪರಿಸರ ಪಯಣ’ದ ಪರಿಣಾಮವಿದು.

ಎರಡೂವರೆ ದಶಕಗಳಿಂದ ಶಾಲೆಯ ಮಕ್ಕಳೊಂದಿಗೆ ‘ಪರಿಸರ ಪಯಣ’ ಕೈಗೊಳ್ಳುತ್ತಿದ್ದೇನೆ. ಪ್ರತಿ ಬಾರಿ ಬರುವ ಮಕ್ಕಳು ಒಂದೊಂದು ರೀತಿಯಲ್ಲಿ ಪರಿಸರದ ಪಾಠಗಳನ್ನು ಕಲಿಯುತ್ತಾರೆ. ಮತ್ತು ಅದನ್ನು ಬೇರೆ ಬೇರೆ ರೀತಿಯಲ್ಲಿ ಪ್ರಸ್ತುತಪಡಿಸುತ್ತಾರೆ.

ಒಮ್ಮೆ ನಮ್ಮ ಶಾಲೆಯ(ಹಿಂದೆ ಕೆಲಸ ಮಾಡುತ್ತಿದ್ದ ಶಿಂಗಟಾಲೂರು ಶಾಲೆ) ಮಕ್ಕಳೊಂದಿಗೆ ಕಪ್ಪತ್ತಗುಡ್ಡದತ್ತ ಪಯಣ ಹೊರಟೆ. ಹೋಗುವಾಗ ಮಕ್ಕಳು ನವಿಲಿನ ಕೂಗಿಗೆ ಕಿವಿಗೊಟ್ಟರು. ಕಿಂಗ್‌ಫಿಶರ್ ಹಕ್ಕಿ ಹಾರಿದ್ದು, ಸರ ಸರ ಎಂದು ಹಾವ್ರಾಣಿ ಓಡಿದ್ದು, ಮೊಲದ ಜಿಗತ, ತೇಲಿದ ಕೈಟ್.. ನಿಸರ್ಗದಲ್ಲಿನ ಇಂಥ ಜೀವ ಸಂಕುಲವನ್ನು ನೋಡಿ ಮಕ್ಕಳು ಸಂಭ್ರಮಿಸಿದರು.

ಹೊರಡುವ ಮುನ್ನವೇ ‘ಪಯಣದಲ್ಲಿ ಕಂಡಿದ್ದನ್ನು ನೆನಪಿಟ್ಟುಕೊಳ್ಳಬೇಕು. ಶಾಲೆಗೆ ಹೋದ ಮೇಲೆ ಆ ನೆನಪನ್ನು ದಾಖಲಿಸಬೇಕು’ ಎಂಬ ಸೂಚನೆ ನೀಡಿದ್ದೆ. ಅದನ್ನು ಪಾಲಿಸುತ್ತಿದ್ದ ಮಕ್ಕಳು, ಖುಷಿಪಡುತ್ತಲೇ, ನೋಡಿದ್ದನ್ನೆಲ್ಲ ಅವರವರ ವಿಧಾನದಲ್ಲೇ ನೆನಪಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದ್ದರು.

ಹೀಗ ಸಾಗುತ್ತಿರುವಾಗ ಕಾಡ ಹಂದಿಯೊಂದು ಗೆಡ್ಡೆ ಗೆಣಸು ತಿನ್ನಲು ನೆಲ ಗೆಬರಿದ್ದನ್ನು ಮಕ್ಕಳಿಗೆ ತೋರಿಸಿದೆ. ಯಾವುದೋ ಸತ್ತ ಪ್ರಾಣಿಯೊಂದರ ದವಡೆ ಹಲ್ಲು ಕಂಡಿತು. ಆ ಹಲ್ಲುಗಳ ರಚನೆಯ ಆಧಾರದ ಮೇಲೆ ಅದು ಮಾಂಸಾಹಾರಿಯೋ ಸಸ್ಯಾಹಾರಿಯೋ ಎಂಬ ವ್ಯತ್ಯಾಸವನ್ನು ಅವರೊಂದಿಗೆ ಚರ್ಚಿಸುತ್ತಾ ಮುನ್ನಡೆದೆ.

ದಾರಿಯಲ್ಲಿ ಕುರಿಗಾಹಿಯೊಬ್ಬರು ಸಿಕ್ಕಿದರು. ಅವನು ‘ಹುದೆದ ಮರಕ್ಕ ಹುಳ ಹತ್ತಲ್ಲ, ಅದಕ್ಕ ಮಾಳಗಿ ಮನಿಗೆ ಮೆಲ್ಮುದ್ದಿ ಹಾಕಲು ತೊಲಿ ಕಂಬಕ್ಕ ಇದನ್ನ ಬಳಸ್ತಿವಿ’ ಎನ್ನುತ್ತಾ ಮರ ಬಳಕೆಯ ಹಿಂದಿನ ದೇಸಿ ಜ್ಞಾನ ಬಿಚ್ಚಿಟ್ಟ. ಹುದದೆ ಮರಕ್ಕೆ ಸ್ಥಳೀಯವಾಗಿ ಕೋಣನಕೊಂಬಿನ ಮರ ಎಂದು ಹೆಸರು (ಸಸ್ಯ ಶಾಸ್ತ್ರೀಯ ಹೆಸರು – Stereospermum chelonoides).

ಹೀಗೆ ಸಾಗುವಾಗ ಆಚೀಚೆಯಲ್ಲಿ ಮಧುನಾಶಿನಿಯಂತಹ ಔಷಧೀಯ ಸಸ್ಯಗಳು ಕಂಡವು. ಇಂಥ ಔಷಧೀಯ ಸಸ್ಯಗಳ ಜೊತೆಗೆ, ಕಾರೆಹಣ್ಣು(ಕಾರಿ), ಕಾಡು ಬಿಕ್ಕೆ ಹಣ್ಣು(ಬಿಕ್ಕಿ), ಕವಳಿ ಕಾಯಿಯೂ ಸಿಕ್ಕಿತು. ಇವೆಲ್ಲವುಗಳ ರುಚಿ ತೋರಿಸಿ, ಅವುಗಳ ಉಪಯೋಗದ ಪರಿಚಯ ಮಾಡಿಸಿದ್ದಾಯಿತು. ಎಲ್ಲವನ್ನೂ ನೋಡುತ್ತಾ, ಕೇಳುತ್ತಾ ಹೆಜ್ಜೆ ಹಾಕುತ್ತಿರುವಾಗ ಬಾದಿ ಹುಲ್ಲು ಗಾಳಿಗೆ ತೊನೆದಾಡುತ್ತಾ, ಮಕ್ಕಳ ಮನಸಿಗೆ ಮುದ ನೀಡುತ್ತಿತ್ತು.

ಪರಿಸರ ಪಯಣದಿಂದ ಹಿಂದಿರುಗಿದ ಮಕ್ಕಳು, ಕಾಡಿನಲ್ಲಿ ಕಂಡು, ಕೇಳಿದ ಔಷಧೀಯ ಸಸ್ಯಗಳು, ಕೀಟ ಪ್ರಪಂಚದ ಬಗ್ಗೆ ಗ್ರಂಥಾಲಯದ ಪುಸ್ತಕಗಳಲ್ಲಿ, ಅಂತರ್ಜಾಲದಲ್ಲಿ ಹೆಚ್ಚಿನ ಮಾಹಿತಿ ಹುಡುಕಿದರು. ಕೆಲವು ಮಕ್ಕಳು ಆ ಮಾಹಿತಿಯೊಂದಿಗೆ ಪ್ರಬಂಧಗಳನ್ನು ಬರೆದರು. ಪ್ರಬಂಧಗಳಲ್ಲಿ ಕಪ್ಪತ್ತಗಿರಿಯನ್ನು ವನ್ಯ ಜೀವಿಧಾಮ ವಾಗಿಸಲು ಖ್ಯಾತ ಕ್ರಿಕೆಟಿಗ ಅನಿಲ್ ಕುಂಬ್ಳೆ ರೈತರೊಂದಿಗೆ ನಡೆಸಿದ ಸಂವಾದದ ವಿವರ, ಬ್ರಿಟಿಷ್ ಸರ್ಕಾರ ‘ಕಪ್ಪತ್ತಗುಡ್ಡವನ್ನು ಸರ್ಕಾರದ ಅಧೀನಕ್ಕೆ ಒಳಪಟ್ಟ ಆಸ್ತಿ’ ಎಂದು ಘೋಷಿಸಿದ ಉಲ್ಲೇಖ, ವಿಧಾನಸಭೆಯಲ್ಲಿ ಕಪ್ಪತ್ತಗಿರಿಯ ಕುರಿತು ನಡೆದ ಚರ್ಚೆ.. ಇಂಥ ಹಲವು ಅಂಶಗಳಿದ್ದವು. ಅಷ್ಟೇ ಅಲ್ಲ.. ಗೆದ್ದಲು ಗೂಡಿನ ವೃತ್ತಾಂತ, ಹಾವುಗಳ ಚರಿತೆ, ಇರುವೆಗಳ ಸಾಮಾಜಿಕ ವ್ಯವಸ್ಥೆಯ ಬಗ್ಗೆಯೂ ಮಕ್ಕಳು ಸಾಕಷ್ಟು ಅಧ್ಯಯನ ಮಾಡಿ, ಅಗತ್ಯ ವಿಷಯಗಳನ್ನು ಪ್ರಬಂಧದಲ್ಲಿ ದಾಖಲಿಸಿದ್ದರು. ಇವುಗಳನ್ನು ಓದುತ್ತಾ ಹೋದಂತೆ, ಪರಿಸರ ಪಯಣದ ಸಾರ್ಥಕತೆ ಮನದಟ್ಟಾಯಿತು.

(ಲೇಖಕರು: ವಿಜ್ಞಾನ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಹೆಸರೂರು, ಮುಂಡರಗಿ) ❖

ಹೀಗಿರಲಿ ‘ಪಯಣ’

ಮಕ್ಕಳನ್ನು ‘ಪರಿಸರ ಪಯಣ’ಕ್ಕೆ ಕರೆದೊಯ್ಯುವ ವರಿಗೆ ಪಯಣದಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳ ಸ್ಪಷ್ಟ ಚಿತ್ರಣವಿರಬೇಕು. ಈ ಪರಿಸರ ಪಯಣಕ್ಕೆ ಪಶ್ಚಿಮ ಘಟ್ಟದ ಕಾನನವೇ ಆಗಬೇಕೆಂದೇನಿಲ್ಲ. ನಮ್ಮ ಸುತ್ತಲಿರುವ ಕುರುಚಲು ಕಾಡು ಆಗಬಹುದು. ಊರ ಹತ್ತಿರದ ಗೋಮಾಳವೂ ಆಗಬಹುದು !

ಪೂರ್ವ ತಯಾರಿ ಹೇಗಿರಬೇಕು ?

- ಪಯಣದ ಸ್ಥಳದ ಪರಿಚಯ ಸಂಪೂರ್ಣವಾಗಿ ಮಾರ್ಗದರ್ಶಿ ಶಿಕ್ಷಕರಿಗಿರಬೇಕು. ಅಲ್ಲಿನ ಸಸ್ಯ ಸಂಪತ್ತು, ವಾಸಿಸುವ ಜೀವಿಗಳ ಕುರಿತು ಮಾಹಿತಿ ಇರಬೇಕು.
- ಪ್ರಥಮ ಚಿಕಿತ್ಸೆಯ ಸಾಮಾನ್ಯ ಜ್ಞಾನ ಕಡ್ಡಾಯ.
- ಕುಡಿಯಲು ನೀರು, ಅಗತ್ಯ ಆಹಾರ , ನೋಟ್ ಬುಕ್, ಪೆನ್ಸಿಲ್, ರಬ್ಬರ್ ಕೊಂಡೊಯ್ಯಲು ಮಕ್ಕಳಿಗೆ ಸೂಚಿಸಬೇಕು.
- ಸ್ಥಳೀಯರ ಸಂಪರ್ಕ ಅಗತ್ಯ. ಕಾಡಿನ ಪಯಣವಾದರೆ ಸಂಬಂಧಿಸಿದ ಇಲಾಖೆಯ ಅನುಮತಿ ಪಡೆದಿರುವುದು ಒಳ್ಳೆಯದು.
- ಮಕ್ಕಳು ಎಷ್ಟು ಸಮಯ ಆ ಪರಿಸರದಲ್ಲಿರುತ್ತಾರೆ? ಯಾವ ಯಾವ ಸಮಯದಲ್ಲಿ ಮಕ್ಕಳು ಎಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ– ಇಂಥ ವೇಳಾ ಪಟ್ಟಿಯೂ ಜೊತೆಯಲ್ಲಿರಬೇಕು. ಆ ಸ್ಥಳದ ಮಾಹಿತಿ ಇರುವ ಸ್ಥಳೀಯರು ಅಥವಾ ಅರಣ್ಯಪಾಲಕರ ಸಹಾಯ ಪಡೆಯಲೂಬಹುದು.

ಹೊರಡುವ ಮೊದಲು ಮಕ್ಕಳಿಗೆ ಪಯಣದಲ್ಲಿ ಏನನ್ನು ಗಮನಿಸಬೇಕು ? ಏನನ್ನು ದಾಖಲಿಸಿ ಕೊಳ್ಳಬೇಕು?– ಇಂಥ ಕೆಲವು ವಿಚಾರಗಳನ್ನು ತಿಳಿಸಿರಬೇಕು. ಉದಾಹರಣೆ/ಮಾದರಿಯಾಗಿ ಈ ಕೆಳಗೆ ನೀಡಿರುವ ಸಲಹೆಗಳನ್ನು ಗಮನಿಸಬಹುದು.

- ವೈವಿಧ್ಯಮಯ ಎಲೆಗಳ ರಚನೆ ಮತ್ತು ಜೋಡಣೆಯ ವಿನ್ಯಾಸ, ಹೂವು ಮತ್ತು ಹೂವಿನ ಗೊಂಚಲಿನ ವಿನ್ಯಾಸಗಳನ್ನು ಗಮನಿಸಲು ತಿಳಿಸಬಹುದು.
- ಕಲಿಕಾ ತರಗತಿ ಆಧರಿಸಿ ಏಕಲಿಂಗಿ ಅಥವಾ ದ್ವಿಲಿಂಗಿ ಪುಷ್ಪಗಳನ್ನು ಗುರುತಿಸಲು ಮಕ್ಕಳಿಗೆ ತಿಳಿಸಬಹುದು.
  ಹುಲ್ಲು, ಸಸ್ಯ, ಪೊದೆ, ಬಳ್ಳಿ ಮತ್ತು ಗಿಡಗಳನ್ನು ಗುರುತಿಸಲು ಹೇಳಬಹುದು.
- ಪ್ರಾಣಿ, ಪಕ್ಷಿ, ಕೀಟಗಳ ಅವಶೇಷಗಳು ಸಿಕ್ಕಲ್ಲಿ ಅವುಗಳನ್ನು ಸಂಗ್ರಹಿಸಲು ತಿಳಿಸುವುದು.
- ಪಯಣದ ವೇಳೆ ನಿಶ್ಯಬ್ದ ಕಾಯ್ದುಕೊಳ್ಳಬೇಕು. ಆಗ ಪ್ರಾಣಿ ಪಕ್ಷಿಗಳ ಚಲನವಲನ ಗಮನಿಸಲು ಅನುಕೂಲ. ತೀರಾ ಅಗತ್ಯವೆನಿಸಿದಾಗ ಪಿಸುಮಾತುಗಳಲ್ಲಿ ಸಂವಹನ ನಡೆಸುವಂತೆ ಸಲಹೆ ನೀಡಬೇಕು.
- ಪಕ್ಷಿ, ಚಿಟ್ಟೆ, ಕೀಟಗಳನ್ನು ನೋಡಿದಾಗ ಅವುಗಳ ಕಚ್ಚಾ ಚಿತ್ರ ಬರೆದು (Rough Drawing) ಬಣ್ಣಗಳನ್ನು ಗುರುತಿಸುವುದು.
- ಮಕ್ಕಳಿಗೆ ವೀಕ್ಷಣೆಗೆ ಮುಕ್ತ ಅವಕಾಶ ಕಲ್ಪಿಸಬೇಕು. ಪ್ರಶ್ನೆಗಳಿದ್ದಲ್ಲಿ ಅವುಗಳಿಗೆ ಸಮರ್ಪಕ ಉತ್ತರ ನೀಡಬೇಕು. ಅದಕ್ಕಾಗಿ ಸಂಪನ್ಮೂಲ ವ್ಯಕ್ತಿಗಳು ಇಲ್ಲವೇ ಗೂಗಲ್ ಕ್ಯಾಮರಾದ ಸಹಾಯ ಪಡೆಯಬಹುದು.
- ಕೀಟ–ಸಸ್ಯಗಳ ಹೆಸರು ಬರೆದುಕೊಳ್ಳುವಾಗ ಅವುಗಳ ಸ್ಥಳೀಯ ಹೆಸರು, ವೈಜ್ಞಾನಿಕ ಅಥವಾ ಇಂಗ್ಲಿಷ್ ಹೆಸರನ್ನು ಬರೆದುಕೊಳ್ಳಬೇಕು.
- ಪಯಣದಲ್ಲಿ ಅನೇಕ ಬಾರಿ ನಮಗೆ ಜೀವಂತ ಪ್ರಾಣಿಗಳು ಕಾಣದಿರಬಹುದು. ಆದರೆ, ದಾರಿಯಲ್ಲಿ ಪ್ರಾಣಿಗಳ ಹೆಜ್ಜೆ ಗುರುತುಗಳು ಸಿಗುತ್ತವೆ. ಹಿಕ್ಕೆ(ಮಲ)ಗಳು ಕಾಣುತ್ತವೆ/ ದೂರದಲ್ಲೆಲ್ಲೋ ಪ್ರಾಣಿ–ಪಕ್ಷಿಗಳ ಧ್ವನಿ ಕೇಳಿಸುತ್ತಿರುತ್ತದೆ. ಇವೆಲ್ಲವುಗಳಿಂದ ಆ ಪರಿಸರದಲ್ಲಿ ಯಾವ ಪ್ರಾಣಿಗಳಿವೆ ಎಂದು ಅಂದಾಜಿಸಿ, ಮಕ್ಕಳಿಗೆ ತಿಳಿಸಬಹುದು.
- ಕಾಡಿನ ಕಥೆಗಳನ್ನು ಹೇಳುತ್ತಾ ಹೇಳುತ್ತಾ, ಅವುಗಳಿಗೆ ಸಂಬಂಧಿಸಿದ ಲೇಖನಗಳು, ಪುಸ್ತಕಗಳು, ಕವಿತೆಗಳನ್ನೂ ಓದಿ ಹೇಳಬಹುದು.
- ಕಾಡಿನ ಜೊತೆಗೆ ಬಾಂಧವ್ಯವಿಟ್ಟುಕೊಂಡಿರುವ ಸ್ಥಳೀಯರನ್ನು ಪರಿಚಯಿಸಿಕೊಂಡು, ಕಾಡು ಮರಗಳ ಸ್ಥಳೀಯ ಹೆಸರು ಮತ್ತು ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು.

ಪಯಣದ ನಂತರ..

ಪಯಣದಲ್ಲಿ ದೊರೆತ ಅನುಭವಗಳನ್ನು, ಲೇಖನ, ಕತೆ, ಕವಿತೆ ಬರೆಯಲು ಮಕ್ಕಳನ್ನು ಉತ್ತೇಜಿಸಬಹುದು. ಉದಾಹರಣೆಗೆ ಮಕ್ಕಳು ಗೆದ್ದಲು ಗೂಡು ನೋಡಿರುತ್ತಾರೆ. ಅದರ ಸಮಗ್ರ ಮಾಹಿತಿ ಸಂಗ್ರಹಿಸಿ ಲೇಖನ, ಪ್ರಬಂಧಗಳನ್ನು ಬರೆಯಲು ತಿಳಿಸಬಹುದು. ರಸಪ್ರಶ್ನೆಯಂತಹ ಕಾರ್ಯಕ್ರಮಗಳನ್ನು ಮಾಡಬಹುದು. ಪತ್ರಿಕೆಗಳಿಗೆ ಲೇಖನಗಳನ್ನು ಬರೆಯಲು ಪ್ರೇರೇಪಿಸಬಹುದು. ಇಂಥ ಚಟುವಟಿಕೆಗಳು ಕಲಿತ ಮಾಹಿತಿ ನೆನಪಿನಲ್ಲಿ ಉಳಿಯಲು ಪೂರಕವಾಗುತ್ತದೆ.

ಪಠ್ಯ ಪುಸ್ತಕದಾಚೆ ಪಠ್ಯಕ್ರಮದ ಆಶಯಗಳನ್ನು ಈಡೇರಿಸುವಂತಹ ಚಟುವಟಿಕೆಗಳಿಗೆ ಮಿತಿಯಿಲ್ಲ. ಬಳಸಿಕೊಳ್ಳುವ ಚಾಕಚಕ್ಯತೆ ಬೇಕಷ್ಟೇ. ಹೀಗೆ ಕಲಿಕೆ ಮತ್ತು ಬದುಕು ಸಮ್ಮಿಳಿತಗೊಂಡಾಗ ಸಂತಸದ ಕಲಿಕೆ ಸಾಧ್ಯವಾಗುತ್ತದೆ.

ಜೀವಾನ್ವೇಷಣೆ

ಸಹಜೀವನ ಪ್ರಕೃತಿಯ ಮೂಲಮಂತ್ರ

ಡಾ. ಎಸ್. ಶಿಶುಪಾಲ

ಭೂಮಿ ಜೀವ ವೈವಿಧ್ಯದ ತವರು. ಅಸಂಖ್ಯಾತ ಜೀವಿಗಳು ಇಲ್ಲಿನ ಪರಿಸರದ ಮೂಸೆಯಲ್ಲಿ ವಿಕಾಸ ಹೊಂದಿವೆ. ಸಾವಿರಾರು ಜೀವಿಗಳು ಕಾಲಚಕ್ರದಡಿಯಲ್ಲಿ ನಶಿಸಿಯೂ ಇವೆ. ಏಕಕೋಶಜೀವಿಗಳಾದ ದಂಡಾಣು (Bacteria) ವಿನಿಂದ ಹಿಡಿದು ಸಂಕೀರ್ಣ ಜೀವಿಗಳಾದ ಮಾನವನವರೆಗೆ ಜೀವವಿಕಾಸ ಸುಲಭದ್ದಲ್ಲ. ಕೋಟಿ ವರ್ಷಗಳ ಪ್ರಕೃತಿ ಪಾಠದಲ್ಲಿ ಮಿಂದ ಜೀವಿಗಳಿಂದ ಹೊರಹೊಮ್ಮಿದ ಗುಟ್ಟು ಎಂದರೆ ಸಹಜೀವನ (Symbiosis).

ಒಂದನ್ನೊಂದು ಆಧರಿಸಿ ಬದುಕುವ ಕಲೆಯನ್ನು ಪ್ರಕೃತಿ ಜೀವಿಗಳಿಗೆ ಕಲಿಸಿದೆ. ಪರಿಸರದಲ್ಲಿನ ಆಹಾರ ಸರಪಳಿ ಸೂಕ್ಷ್ಮವಾಗಿದ್ದು ಜೀವಿಗಳ ಉಳಿವು ಒಂದು ಸೋಜಿಗವೇ ಸರಿ.

ಜಗತ್ತಿನ ಜೀವಿಗಳ ಪರಸ್ಪರ ಅವಲಂಬನೆಯ ನಿದರ್ಶನಗಳನ್ನು ಅಧ್ಯಯನ ಮಾಡಿದರೆ ಇದು ಹೇಗೆ ಸಾಧ್ಯ? ಎಂಬ ಪ್ರಶ್ನೆ ಮೂಡುವುದು ಸಹಜ. ಅಂತಹ ಒಂದು ವಿಸ್ಮಯ ಉದಾಹರಣೆ ಎಂದರೆ ಜೇನು ಬ್ಯಾಜರ್ (Honey badger), ಜೇನು ಮಾರ್ಗದರ್ಶಕ (Honey guide) ಹಾಗೂ ಸೂಕ್ಷ್ಮಜೀವಿಗಳ ಪರಸ್ಪರಾವಲಂಬನೆ.

ಜೀವಜಗತ್ತಿನಲ್ಲಿ ಹನಿ ಬ್ಯಾಜರ್ ಅತ್ಯಂತ ಧೈರ್ಯವಂತ ಎಂದು ಗಿನ್ನೆಸ್ ಪುಸ್ತಕದಲ್ಲಿ ದಾಖಲಾಗಿರುವ ಸ್ತನಿ ಜಾತಿಗೆ ಸೇರಿದ ಪ್ರಾಣಿ. ಆಫ್ರಿಕಾ ಮತ್ತು ಏಷ್ಯಾ ಖಂಡಗಳಲ್ಲಿ ವಾಸಿಸುವ ಈ ಪ್ರಾಣಿಗಳು ದಕ್ಷಿಣ ಭಾರತದಲ್ಲೂ ಇವೆ. ಮುಂಗುಸಿಯಂತೆ ಕಾಣುವ ಇದು ತನ್ನ ಆಹಾರಕ್ಕಾಗಿ ಕೀಟಗಳು, ಹಾವು, ಚೇಳು, ಕಪ್ಪೆ, ಮೀನು ಮುಂತಾದವುಗಳನ್ನು ತಿನ್ನುತ್ತದೆ. ಜೊತೆಗೆ ಅದಕ್ಕೆ ಜೇನು ಗೂಡಿನಲ್ಲಿರುವ ಜೇನುಹುಳುಗಳ ಮೊಟ್ಟೆ, ಲಾರ್ವಗಳನ್ನು ಜೇನಿನೊಂದಿಗೆ ಚಪ್ಪರಿಸುವುದು ಬಹು ಇಷ್ಟ.

ಹನಿಗೈಡ್ ಹಕ್ಕಿ (ಒಳಚಿತ್ರ) ಸಹ ಕೀಟಗಳನ್ನು ತಿಂದು ಬದುಕುವ ಸಾಧಾರಣ ಗಾತ್ರದ ಹಕ್ಕಿ. ಆದರೆ ಇವೆರಡರ ಸಹಜೀವನ ನಿಜಕ್ಕೂ ಆಶ್ಚರ್ಯ ತರುವ ವಿಷಯ. ಹನಿಗೈಡ್ ಕಾಡಿನಲ್ಲಿ ಅತ್ತಿತ್ತ ಹಾರಾಡುತ್ತಾ ಜೇನುಗೂಡು ಇರುವ ಸ್ಥಳವನ್ನು ಪತ್ತೆಹಚ್ಚುತ್ತಾ, ಆನಂತರ ಹನಿ ಬ್ಯಾಜರ್ ಇರುವ ಜಾಗಕ್ಕೆ ಬಂದು ತನ್ನ ವಿಶೇಷ ಸ್ವರ ಹೊರಡಿಸುತ್ತಾ ಬಾಲದ ರೆಕ್ಕೆಗಳನ್ನು ಕುಣಿಸುತ್ತದೆ. ಪ್ರಾಕೃತಿಕವಾಗಿ ಇದನ್ನು ತಿಳಿದುಕೊಂಡಿರುವ ಹನಿ ಬ್ಯಾಜರ್ ಈ ಹಕ್ಕಿಯನ್ನು ನೋಡಿ ಅದನ್ನು ಹಿಂಬಾಲಿಸುತ್ತದೆ. ಸ್ವಲ್ಪ ದೂರ ಹಾರುತ್ತಾ ಹಕ್ಕಿಯು ಹನಿ ಬ್ಯಾಜರ್ ಅನ್ನು ಜೇನುಗೂಡಿರುವೆಡೆಗೆ ಮಾರ್ಗದರ್ಶನ ಮಾಡುತ್ತದೆ. ಜೇನುಗೂಡನ್ನು ನೋಡಿದ ಕೂಡಲೇ ಹನಿ ಬ್ಯಾಜರ್ ಅದರತ್ತ ಧಾವಿಸಿ ಗೂಡನ್ನು ಕಿತ್ತು ಅದರಲ್ಲಿರುವ ಜೇನು, ಮೊಟ್ಟೆ ಮತ್ತು ಲಾರ್ವಗಳನ್ನು ತಿನ್ನುತ್ತದೆ. ಜೇನುಹುಳುಗಳು ಇದಕ್ಕೆ ಕಚ್ಚಲಾರದಷ್ಟು ದಪ್ಪ ಚರ್ಮ ಮತ್ತು ತುಪ್ಪಳವನ್ನು ಹೊಂದಿರುವುದರಿಂದ ಇದಕ್ಕೇನೂ ತೊಂದರೆಯಿಲ್ಲ. ತಾನು ತಿಂದ ಮೇಲೆ ಜೇನುಗೂಡಿನ ಉಳಿದ ಭಾಗವನ್ನು ಬಿಸಾಡುತ್ತದೆ. ಜೇನುಗೂಡಿನಲ್ಲಿರುವ ಮೇಣ ಹನಿಗೈಡ್ ಹಕ್ಕಿಗೆ ಆಹಾರವಾಗುತ್ತದೆ.

ಒಂದು ಪ್ರಾಣಿ ಮತ್ತು ಹಕ್ಕಿಯ ಪ್ರೇಮಕಥನ ಇಲ್ಲಿಗೆ ಮುಗಿಯುವುದಿಲ್ಲ. ಹನಿಗೈಡ್ ಹಕ್ಕಿಯ ಕರುಳಿನಲ್ಲಿರುವ ವಿಶೇಷ ಸೂಕ್ಷಜೀವಿಗಳು ಜೇನುಮೇಣವನ್ನು ಜೀರ್ಣಿಸುವ ಕೆಲಸ ಮಾಡುತ್ತವೆ. ಈ ಸೂಕ್ಷ್ಮಜೀವಿಗಳು ಸ್ರವಿಸುವ ಲೈಪೇಸ್ (Lipase) ಎಂಬ ಕಿಣ್ವವು ಜೇನುಮೇಣದಲ್ಲಿರುವ ಕೊಬ್ಬನ್ನು ಕರಗಿಸುತ್ತವೆ. ಅದರಲ್ಲಿನ ಪೋಷಕಾಂಶಗಳನ್ನು ತಾವು ಉಪಯೋಗಿಸುವುದಲ್ಲದೆ ಹಕ್ಕಿಗೂ ಒದಗಿಸುತ್ತವೆ. ಹೇಗಿದೆ ಸ್ತನಿ, ಹಕ್ಕಿ ಮತ್ತು ಸೂಕ್ಷ್ಮಜೀವಿಗಳ ಸಹಜೀವನದ ಮರ್ಮ?

ಪರಸ್ಪರ ಅವಲಂಬನೆಯೇ ಜೀವವಿಕಾಸದ ತಳಹದಿ. ಎಲ್ಲಾ ಜೀವಿಗಳ ಅಸ್ತಿತ್ವ ಸಹಜೀವನದ ಆಧಾರದ ಮೇಲೆ ನಿಂತಿರು ವುದು ಜೀವಿಗಳಿಗೆ ಪ್ರಕೃತಿ ಕಲಿಸಿರುವ ಪಾಠ. ಇದನ್ನು ಅರಿತು ನಡೆದರೆ ಪ್ರಕೃತಿಮಾತೆ ಮೆಚ್ಚುವಳು. ಸಕಲ ಜೀವಿಗಳೂ ಅವಳ ಮಕ್ಕಳಲ್ಲವೇ? ಆಫ್ರಿಕಾದ ಬುಡಕಟ್ಟು ಜನಾಂಗದವರು ಸಹ ಹನಿಗೈಡ್ ಹಕ್ಕಿಯನ್ನು ಅನುಸರಿಸಿ ಜೇನುಗೂಡನ್ನು ಪತ್ತೆಹಚ್ಚಿ, ಜೇನು ತುಪ್ಪವನ್ನು ಸಂಗ್ರಹಿಸುತ್ತಾರೆ.

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು) ❖



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ
ಪ್ರದೀಪ್ ಕುಮಾರ್
ಪ್ರಶ್ನೋತ್ತರಕ್ಕಾಗಿ ಕೋಡ್ ಸ್ಕ್ಯಾನ್ ಮಾಡಿ

❦ ಸುಭಾಷಿತ ❦

ಮುಳ್ಳು ಎಲ್ಲಿದೆ ಎಂಬುದು ನಿಮಗೆ ತಿಳಿದಾಗಷ್ಟೇ ನೀವು ಅದನ್ನು ಕಿತ್ತೊಗೆಯಲು ಸಾಧ್ಯ.

-ರವೀಂದ್ರನಾಥ ಟ್ಯಾಗೋರ್

ಮಾನನಷ್ಟ ಪ್ರಕರಣ: 'ಸುಪ್ರೀಂ' ತಡೆ ರಾಹುಲ್ ಗಾಂಧಿ ಸದ್ಯಕ್ಕೆ ನಿರಾಳ

ಮಾನನಷ್ಟ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರು ಅಪರಾಧಿ ಎಂದು ಸೂರತ್‌ನ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರು ಘೋಷಿಸಿದ್ದಕ್ಕೆ ತಡೆ ನೀಡುವ ಮೂಲಕ ಸುಪ್ರೀಂ ಕೋರ್ಟ್ ತಪ್ಪೊಂದನ್ನು ಸರಿಪಡಿಸಿದೆ. ಇದು ರಾಹುಲ್, ಕಾಂಗ್ರೆಸ್ ಪಕ್ಷ ಮತ್ತು ಐಎನ್‌ಡಿಐಎ ಮೈತ್ರಿಕೂಟಕ್ಕೆ ಮೇಲುಗೈ ತಂದುಕೊಟ್ಟಿದೆ. ಗುಜರಾತ್ ಹೈಕೋರ್ಟ್ ಸೇರಿದಂತೆ ಕೆಳ ಹಂತದ ನ್ಯಾಯಾಲಯಗಳು ಶಿಕ್ಷೆಗೆ ತಡೆ ನೀಡಲು ನಿರಾಕರಿಸಿ ನೀಡಿರುವ ಆದೇಶಗಳಲ್ಲಿದ್ದ ಲೋಪಗಳನ್ನು ಸರಿಯಾಗಿ ಗ್ರಹಿಸಲು ಸುಪ್ರೀಂ ಕೋರ್ಟ್‌ನ ಆದೇಶವು ನೆರವಾಗಿದೆ. ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಮೂವರು ಸದಸ್ಯರ ಪೀಠವು ಪ್ರಕರಣದ ಸತ್ಯಾಸತ್ಯತೆಯನ್ನು ವಿಶ್ಲೇಷಿಸಲು ಹೋಗಿಲ್ಲ. ಮೋದಿ ಉಪನಾಮದ ಕುರಿತಂತೆ ರಾಹುಲ್ ಅವರು ನೀಡಿರುವ ಹೇಳಿಕೆಗೆ ಸಂಬಂಧಿಸಿ ದಾಖಲಾದ ಪ್ರಕರಣದಲ್ಲಿ ನಿಜವಾಗಿಯೂ ಹುರುಳಿದೆಯೇ ಎಂಬುದನ್ನು ಪರಿಶೀಲಿಸುವ ಅಗತ್ಯವು ಜಾಮೀನು ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ಇಲ್ಲ. ಪ್ರಕರಣ ಎಷ್ಟು ದುರ್ಬಲವಾಗಿದೆ ಮತ್ತು ಕೆಳ ಹಂತದ ನ್ಯಾಯಾಲಯಗಳ ಆದೇಶಗಳು ಎಷ್ಟು ಅತಾರ್ಕಿಕವಾಗಿದ್ದವು ಎಂಬುದರತ್ತ ಸುಪ್ರೀಂ ಕೋರ್ಟ್‌ನ ಆದೇಶವು ಬೊಟ್ಟು ಮಾಡಿದೆ. ಮಾನನಷ್ಟ ಮೊಕದ್ದಮೆಗೆ ಕಾರಣವಾದ ರಾಹುಲ್ ಅವರ ಹೇಳಿಕೆಯು ಉತ್ತಮ ಅಭಿರುಚಿಯದ್ದಾಗಿರಲಿಲ್ಲ; ಸಾರ್ವಜನಿಕ ಜೀವನದಲ್ಲಿ ಇರುವ ವ್ಯಕ್ತಿಯು ಬಹಿರಂಗ ಭಾಷಣಗಳಲ್ಲಿ ಹೆಚ್ಚು ಸಂಯಮ ತೋರಿಸಬೇಕು ಎಂದೂ ಸುಪ್ರೀಂ ಕೋರ್ಟ್ ಹೇಳಿದೆ. ರಾಜಕಾರಣಿಗಳು ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವಾಗ ಔಚಿತ್ಯ ಮೀರುತ್ತಿದ್ದಾರೆ ಎಂಬುದನ್ನೂ ಕೋರ್ಟ್ ಗುರುತಿಸಿದೆ. ಕೆಳ ಹಂತದ ನ್ಯಾಯಾಲಯಗಳು ಈ ಪ್ರಕರಣವನ್ನು ನಿರ್ವಹಿಸಿದ ರೀತಿಯು ಲೋಪದಿಂದ ಕೂಡಿದೆ ಎಂದೂ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣ ಎಷ್ಟು ದುರ್ಬಲವಾಗಿದೆ ಮತ್ತು ಕೆಳ ಹಂತದ ನ್ಯಾಯಾಲಯಗಳ ಆದೇಶಗಳು ಎಷ್ಟು ಅತಾರ್ಕಿಕವಾಗಿದ್ದವು ಎಂಬುದರತ್ತ ಸುಪ್ರೀಂ ಕೋರ್ಟ್‌ನ ಆದೇಶವು ಬೊಟ್ಟು ಮಾಡಿದೆ

ಕೆಳ ಹಂತದ ನ್ಯಾಯಾಲಯಗಳು ನೀಡಿರುವ ಆದೇಶಗಳಲ್ಲಿ ಎರಡು ನಿರ್ದಿಷ್ಟ ವಿಚಾರಗಳು ಆಕ್ಷೇಪಾರ್ಹ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅದರಲ್ಲಿ ಒಂದು, ರಾಹುಲ್ ಅವರಿಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಗರಿಷ್ಠ ಎರಡು ವರ್ಷಗಳ ಶಿಕ್ಷೆ ನೀಡಿರುವ ವಿಚಾರ. ಇದರಿಂದಾಗಿ ರಾಹುಲ್ ಅವರು ಜನಪ್ರಾತಿನಿಧ್ಯ ಕಾಯ್ದೆ ಪ್ರಕಾರ ಸಂಸದ ಸ್ಥಾನದಿಂದ ಅನರ್ಹಗೊಳ್ಳಬೇಕಾಯಿತು. ಶಿಕ್ಷೆಯು ಒಂದು ದಿನ ಕಡಿಮೆ ಇದ್ದರೂ ಅನರ್ಹತೆಯು ಅನ್ವಯ ಆಗುತ್ತಿರಲಿಲ್ಲ ಎಂಬ ವಿಚಾರಕ್ಕೆ ನ್ಯಾಯಾಲಯವು ವಿಶೇಷ ಗಮನ ನೀಡಿದೆ. ಕೆಳಗಿನ ಯಾವುದೇ ನ್ಯಾಯಾಲಯವು ಗರಿಷ್ಠ ಶಿಕ್ಷೆ ನೀಡುವುದಕ್ಕೆ ಏನು ಕಾರಣ ಎಂಬುದನ್ನು ಸ್ಪಷ್ಟಪಡಿಸಿಲ್ಲ ಎಂಬುದು ಸುಪ್ರೀಂ ಕೋರ್ಟ್ ಗಮನಿಸಿದ ಮತ್ತೊಂದು ಅಂಶ. ರಾಜಿಗೆ ಅವಕಾಶ ಇರುವ, ಜಾಮೀನು ನೀಡಬಹುದಾದ ಹಾಗೂ ಗಂಭೀರ ಸ್ವರೂಪದ್ದಲ್ಲದ ಪ್ರಕರಣವೊಂದರಲ್ಲಿ ಗರಿಷ್ಠ ಶಿಕ್ಷೆ ನೀಡಬೇಕಾದರೆ ಅದಕ್ಕೆ ಕಾರಣವೇನು ಎಂಬ ವಿವರಣೆಯನ್ನು ನ್ಯಾಯಾಲಯ ನೀಡಬೇಕು. ರಾಹುಲ್ ವಿರುದ್ಧದ ಮಾನನಷ್ಟ ಪ್ರಕರಣದಲ್ಲಿ ತಪ್ಪಿನ ತೀವ್ರತೆಗಿಂತ ಹೆಚ್ಚಿನ ಪ್ರಮಾಣದ ಶಿಕ್ಷೆಯನ್ನು ಯಾವುದೇ ವಿವರಣೆ ಇಲ್ಲದೆ ನೀಡಲಾಗಿದೆ.

ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ನೀಡಿದ ಆದೇಶದ ಪರಿಣಾಮವು ಒಬ್ಬ ವ್ಯಕ್ತಿಯನ್ನು ಮಾತ್ರ ಬಾಧಿಸದೆ ಒಂದಿಡೀ ಲೋಕಸಭಾ ಕ್ಷೇತ್ರಕ್ಕೆ ಅನ್ವಯ ಆಗುತ್ತದೆ ಎಂಬುದು ಸುಪ್ರೀಂ ಕೋರ್ಟ್ ಗಮನಿಸಿದ ಮತ್ತೊಂದು ಮಹತ್ವದ ಅಂಶ. ರಾಹುಲ್ ಅವರ ಅನರ್ಹತೆಯಿಂದಾಗಿ, ಅವರು ಪ್ರತಿನಿಧಿಸುತ್ತಿದ್ದ ವಯನಾಡು ಕ್ಷೇತ್ರದ ಜನರಿಗೆ ಸಂಸತ್ತಿನಲ್ಲಿ ಪ್ರತಿನಿಧಿಯೇ ಇಲ್ಲದಂತಾಯಿತು. 'ಪರಿಣಾಮಗಳು ವ್ಯಾಪಕ' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪ್ರಕರಣದ ಅಗತ್ಯ ಮತ್ತು ನ್ಯಾಯಬದ್ಧ ವಿಚಾರಗಳನ್ನು ಕೆಳ ನ್ಯಾಯಾಲಯಗಳು ಪರಿಗಣಿಸಿಲ್ಲ ಎಂಬುದರತ್ತಲೂ ಸುಪ್ರೀಂ ಕೋರ್ಟ್‌ನ ಅಭಿಮತವು ಬೊಟ್ಟು ಮಾಡಿದೆ. ಕೆಳ ನ್ಯಾಯಾಲಯಗಳ ಆದೇಶಗಳ ಕುರಿತು ಕೇಳಿಬಂದ ಟೀಕೆಗಳಿಗೆ ಸುಪ್ರೀಂ ಕೋರ್ಟ್‌ನ ಆದೇಶವು ಸಮರ್ಥನೆ ಒದಗಿಸಿದೆ. ರಾಹುಲ್ ಅವರು ಅನರ್ಹತೆಯಿಂದ ಹೊರಬರುವುದರಿಂದ ಅವರ ಪಕ್ಷಕ್ಕೆ ಒಳಿತಾಗಬಹುದು. ಲೋಕಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯನ್ನು ಒಂದಾಗಿ ಎದುರಿಸುವ ಬಿಜೆಪಿ ವಿರೋಧಿ ಪಕ್ಷಗಳ ಕೂಟಕ್ಕೂ ಇದು ಅನುಕೂಲಕರ ಆಗಬಹುದು.

ದಿನದ ಟ್ವೀಟ್

ಮರಳಲಿ ರಾಜ್ಯದ ಸ್ಥಾನಮಾನ

ಸಂವಿಧಾನದ 370ನೇ ವಿಧಿಯ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನವನ್ನು 4 ವರ್ಷಗಳ ಹಿಂದೆ ವಾಪಸ್ ಪಡೆದ ನಂತರದ ಸ್ಥಿತಿಗತಿಯ ವಾಸ್ತವಾಂಶ ಇಲ್ಲಿದೆ: 5.8.2016ರಿಂದ 5.8.2019ರ ಅವಧಿಯಲ್ಲಿ ಅಲ್ಲಿ ನಡೆದ ಪ್ರತಿಭಟನೆಗಳು ಮತ್ತು ಕಲ್ಲು ತೂರಾಟದ ಪ್ರಕರಣಗಳಲ್ಲಿ ಪೊಲೀಸರು ಹಾಗೂ ಭದ್ರತಾ ಪಡೆಗಳಿಂದ 124 ನಾಗರಿಕರು ಸಾವಿಗೀಡಾಗಿದ್ದರು. ಆದರೆ ಈ ನಾಲ್ಕು ವರ್ಷಗಳಲ್ಲಿ ಅಂತಹ ಒಂದೇ ಒಂದು ಪ್ರಕರಣವೂ ವರದಿಯಾಗಿಲ್ಲ ಎಂದು ಅಧಿಕೃತ ಅಂಕಿಅಂಶಗಳು ಹೊರಗೆಡಹಿವೆ. ಹೀಗಾಗಿ, ರಾಜ್ಯದ ಸ್ಥಾನಮಾನವನ್ನು ಮರಳಿಸಬೇಕು ಮತ್ತು ಶೀಘ್ರದಲ್ಲೇ ಚುನಾವಣೆಗಳನ್ನು ನಡೆಸಬೇಕು. ಈಗ ಆಶಾಭಾವ ಮೂಡಿದೆ ಮತ್ತು ಅದು ಉತ್ತಮ ಆರಂಭವೂ ಹೌದು.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಯು ಆರ್‌ಟಿಐ ಕಾಯ್ದೆಗೆ ತರಲು ಉದ್ದೇಶಿಸಿರುವ ತಿದ್ದುಪಡಿಯು ಭ್ರಷ್ಟಾಚಾರ ವಿರುದ್ಧದ ಹೋರಾಟವನ್ನು ದುರ್ಬಲ-ಗೊಳಿಸುತ್ತದೆ ಮತ್ತು ನಾಗರಿಕರು ಸರ್ಕಾರಿ ಅಧಿಕಾರಿಗಳ ಮೇಲೆ ಕಣ್ಗಾವಲಿರಿಸುವುದಕ್ಕೆ ಹಾಗೂ ಅವರಿಂದ ಹೊಣೆಗಾರಿಕೆ ಆಗ್ರಹಿಸುವುದಕ್ಕೆ ತೊಡಕಾಗುತ್ತದೆ. ತಿದ್ದುಪಡಿಗಳನ್ನು ವಿರೋಧಿಸುವ ಮೂಲಕ ಆರ್‌ಟಿಐ ಅನ್ನು ಉಳಿಸಬೇಕಾಗಿದೆ.

ರೋಲಿ ಶಿವ್‌ಹರೆ, ಸಾಮಾಜಿಕ ಕಾರ್ಯಕರ್ತೆ

25 ವರ್ಷಗಳ ಹಿಂದೆ

ಶುಕ್ರವಾರ, 7-8-1998

• ಶ್ರೀಕೃಷ್ಣ ವರದಿಗೆ ಮಹಾರಾಷ್ಟ್ರ ಸರ್ಕಾರ ತಿರಸ್ಕಾರ

ಮುಂಬೈ, ಆ. 6 (ಯುಎನ್‌ಐ)- ಮುಂಬೈಯಲ್ಲಿ 1992-93ರಲ್ಲಿ ಸಂಭವಿಸಿದ ಗಲಭೆ ಮತ್ತು ಸರಣಿ ಬಾಂಬ್ ಸ್ಫೋಟ ಪ್ರಕರಣಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗದ ತೀರ್ಮಾನವನ್ನು ಮಹಾರಾಷ್ಟ್ರ ಸರ್ಕಾರ ಇಂದು ತಿರಸ್ಕರಿಸಿತು. ಈ ತೀರ್ಮಾನಗಳು ಪಕ್ಷಪಾತದ್ದಾಗಿವೆ ಎಂದು ಅದು ವರದಿ ತಿರಸ್ಕಾರಕ್ಕೆ ಕಾರಣ ನೀಡಿತು.

ಮುಖ್ಯಮಂತ್ರಿ ಮನೋಹರ್ ಜೋಶಿ ಅವರು ರಾಜ್ಯ ವಿಧಾನಸಭೆಯಲ್ಲಿ ಈ ವರದಿಯನ್ನು ಮಂಡಿಸಿ, ಅದು ಹಿಂದೂಗಳ ವಿರುದ್ಧ ಸಂಪೂರ್ಣವಾಗಿ ಪೂರ್ವಗ್ರಹ ಪೀಡಿತವಾಗಿದೆ. ಹಿಂದೂಗಳ ವಿರುದ್ಧ ದೇಶದಾದ್ಯಂತ ಸುಳ್ಳು ಪ್ರಚಾರ ನಡೆಯಲು ಇದು ಕಾರಣವಾಗುತ್ತದೆ. ಆದ್ದರಿಂದ ಸರ್ಕಾರ ಈ ವರದಿಯನ್ನು ಅಂಗೀಕರಿಸುವುದಿಲ್ಲ ಎಂದು ಹೇಳಿದರು.

• ಬಂಗಾರಪ್ಪ ಪುನಃ ಕಾಂಗ್ರೆಸ್ ಪಕ್ಷಕ್ಕೆ

ನವದೆಹಲಿ, ಆ. 6 (ಪಿಟಿಐ)- ಕರ್ನಾಟಕ ವಿಕಾಸ ಪಕ್ಷದ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ಇಂದು ಪುನಃ ಕಾಂಗ್ರೆಸ್ ಸೇರಿದರು. ಕೇಂದ್ರದ ಮಾಜಿ ಸಚಿವ ಅಬ್ರಾರ್ ಅಹಮದ್ ಇದೇ ಸಂದರ್ಭದಲ್ಲಿ ಕಾಂಗ್ರೆಸ್ಸಿಗೆ ಸೇರಿಕೊಂಡರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ತಾರೀಕ್ ಅನ್ವರ್ ಅವರು ಈ ವಿಷಯವನ್ನು ಪತ್ರಕರ್ತ-ರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 7-8-1973

• ಧಾನ್ಯ ಬೆಲೆ ಏರಿಕೆ ವಿರುದ್ಧ ಆಕ್ರೋಶ- ಚಳವಳಿ

ವಿಜಯವಾಡ, ಆ. 6- ವಿಜಯವಾಡದಲ್ಲಿ ಸೂಪರ್ ಬಜಾರ್ ಮೇಲೆ ದಾಳಿ ಮಾಡಿದ ಪ್ರದರ್ಶನಕಾರರಿಂದ ಸಹಸ್ರಾರು ರೂ. ಬೆಲೆಯ ವಸ್ತುಗಳ ಲೂಟಿ ಇಲ್ಲವೆ ನಷ್ಟ; ಪಟನಾದಲ್ಲಿ ಬಿಹಾರದ ಆಹಾರ ಸಚಿವ ಮುಂಗೇರಿ ಲಾಲ್ ಅವರಿಗೆ ಘೇರಾವೊ; ಮಧ್ಯಪ್ರದೇಶದ ಭೋಪಾಲಿನಲ್ಲಿ ಬೆಲೆ ಏರಿಕೆ ವಿರುದ್ಧ ಪ್ರದರ್ಶನ ನಡೆಸಿದ ನೂರಾರು ಮಂದಿ ಕಮ್ಯುನಿಸ್ಟರ ಬಂಧನ- ಇವು ಬೆಲೆ ಏರಿಕೆ ವಿರುದ್ಧ ರಾಷ್ಟ್ರದಾದ್ಯಂತ ನಡೆಯುತ್ತಿರುವ ಚಳವಳಿಯಲ್ಲಿ ಸೋಮವಾರ ನಡೆದ ಮುಖ್ಯ ಘಟನೆಗಳು.

ಇಂದೋರಿನಲ್ಲಿ ಬೆಲೆ ಏರಿಕೆ ವಿರುದ್ಧ ನಡೆದಿರುವ ಚಳವಳಿಯು ತೀವ್ರ ಸ್ವರೂಪ ತಳೆದಿದ್ದು, ಪೊಲೀಸರಿಗೆ ನೆರವಾಗಲು ಗಡಿ ಭದ್ರತಾ ಪಡೆಯ ನಾಲ್ಕು ತುಕಡಿಗಳನ್ನು ಕರೆಸಲಾಗಿದೆ.

• ನಿದ್ರಿಸುತ್ತಿದ್ದ ಪಟ್ಟಣದ ಮೇಲೆ ಅಮೆರಿಕ ಆಕಸ್ಮಿಕ ಬಾಂಬ್ ದಾಳಿ ನೂರಾರು ಜನರ ಸಾವು-ನೋವು

ನಾಮ್‌ಪೆನ್ಹ್, ಆ. 6- ಮಕಾಂಗ್ ನದಿ ದಂಡೆಯ ಪಟ್ಟಣ ನೀಕ್‌ಲ್ಯುವಾಂಗ್ ಮೇಲೆ ಅಮೆರಿಕದ ಬಾಂಬರುಗಳು ಪ್ರಮಾದವಶಾತ್ ಇಂದು ಬಾಂಬ್ ಹಾಕಿದ ಪರಿಣಾಮ ಕೊನೆಯ ಪಕ್ಷ ನೂರು ಜನ ಹತರಾಗಿ, ಮುನ್ನೂರು ಜನ ಗಾಯಗೊಂಡಿರುವರೆಂದು ಪ್ರಥಮ ವರದಿಗಳು ತಿಳಿಸಿವೆ.

ಬಾಂಬ್ ಬಿದ್ದಾಗ ಬೆಳಕು ಹರಿದಿರಲಿಲ್ಲ. ಜನ ನಿದ್ರಿಸುತ್ತಿದ್ದರು ಎಂದು ಈ ವರದಿಗಳು ಹೇಳಿವೆ.

ಕೃತಕ ಬುದ್ಧಿಮತ್ತೆಯ ವ್ಯವಸ್ಥೆಗೇ ಪೇಟೆಂಟ್: ತೊಡಕು, ಅನಿವಾರ್ಯದ ನಡುವೆ ತೊಳಲಾಟ

ಎ.ಐ. ಪೇಟೆಂಟ್: ಕಾನೂನಿಗೆ ಸವಾಲು

ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

'ದಿ ರೀಸನಬಲ್ ರೊಬಾಟ್: ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆ್ಯಂಡ್ ದಿ ಲಾ'. ಇದು, ಇಂಗ್ಲೆಂಡ್‌ನ ಸರ್ರೇ ವಿಶ್ವವಿದ್ಯಾಲಯದ ಕಾನೂನು ಪ್ರಾಧ್ಯಾಪಕ ಡಾ. ರ‍್ಯಾನ್ ಅಬಾಟ್ ಅವರು 2020ರಲ್ಲಿ ಪ್ರಕಟಿಸಿದ ಕೃತಿ. ಪ್ರಪಂಚದ ಅನೇಕ ದೇಶಗಳಲ್ಲಿ ವೈದ್ಯಕೀಯ, ಔಷಧಿ ಸಂಶೋಧನೆ, ಜೈವಿಕ ತಂತ್ರಜ್ಞಾನ, ಕೈಗಾರಿಕಾ ಉತ್ಪಾದನೆ ಯಂತಹ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ.) ತರುತ್ತಿರುವ ತ್ವರಿತಗತಿಯ ಬದಲಾವಣೆಗಳು ಮತ್ತು ಅವುಗಳ ಸಾಮಾಜಿಕ ಪರಿಣಾಮಗಳ ಸಂದರ್ಭದಲ್ಲಿ ಕಾನೂನುಗಳಲ್ಲಿ ಆಗಬೇಕಾದ ಪರಿವರ್ತನೆಗಳನ್ನು ವಿಮರ್ಶಾತ್ಮಕವಾಗಿಪರಿಶೀಲಿಸುವ ಈ ಕೃತಿಯಲ್ಲಿ, ಪೇಟೆಂಟ್‌ಗಳಿಗೆ ಸಂಬಂಧಿಸಿದ ಅಧ್ಯಾಯವೊಂದಿದೆ.

ಸ್ವತಂತ್ರವಾಗಿ, ಸೃಜನಾತ್ಮಕವಾಗಿ ಯೋಚಿಸಿ, ಮಾನವನ ಮಧ್ಯಪ್ರವೇಶವಿಲ್ಲದೇ ಆವಿಷ್ಕಾರ ಮಾಡಬಲ್ಲ ಸಾಮರ್ಥ್ಯ ಇರುವ ಕೃತಕ ಬುದ್ಧಿಮತ್ತೆಯ ವ್ಯವಸ್ಥೆಗೇ ಪೇಟೆಂಟ್ ದೊರೆಯಬೇಕೆಂಬ ವಿನೂತನ ವಾದವು ಎಲ್ಲ ದೇಶಗಳಲ್ಲಿ ಗಂಭೀರವಾದ ಚಿಂತನೆ, ಚರ್ಚೆಗಳಿಗೆ ದಾರಿ-ಮಾಡಿಕೊಟ್ಟಿದೆ. ಯಾವುದೇ ಸಂಶೋಧನೆಗೆ ಪೇಟೆಂಟ್ ದೊರೆಯಬೇಕಾದರೆ ಅದು ಮುಖ್ಯವಾಗಿ ಮೂರು ಷರತ್ತುಗಳನ್ನು ಪೂರೈಸಬೇಕು. ಮೊದಲನೆಯದಾಗಿ, ಸಂಶೋಧನೆ ಹೊಸದಾಗಿದ್ದು ಸ್ವಂತಿಕೆಯಿರಬೇಕು. ಎರಡನೆಯದಾಗಿ, ಹೊಸ ಸೃಷ್ಟಿಯಲ್ಲಿ ಆವಿಷ್ಕಾರದ 'ಹೊಸ ಹೆಜ್ಜೆ' (ಇನ್ವೆಂಟಿವ್ ಸ್ಟೆಪ್) ಇರಬೇಕು. ಕಡೆಯದಾಗಿ, ಆ ಸಂಶೋಧನೆಯು ಕೃಷಿ, ಕೈಗಾರಿಕೆ, ವೈದ್ಯಕೀಯದಂತಹ ಕ್ಷೇತ್ರಗಳಲ್ಲಿ ಬಳಕೆಯಾಗುವಂತೆ ಇರಬೇಕು. ಇವುಗಳನ್ನು ನಾವೆಲ್ಲ, ಇನ್ವೆಂಟಿವ್ ಸ್ಟೆಪ್ ಮತ್ತು ಯುಟಿಲಿಟಿ ಎಂದು ಕರೆಯುವುದು ವಾಡಿಕೆ.

ಹೊಸತನ್ನು ಆವಿಷ್ಕರಿಸುವ ಪ್ರತಿಭಾವಂತರಲ್ಲಿ ಎದ್ದು ಕಾಣುವ ಗುಣಗಳೆಂದರೆ ಅದಮ್ಯ ಕುತೂಹಲ, ಸುಲಭಕ್ಕೆ ಕೈಚೆಲ್ಲಿ ಕೂರದ ಸತತ ಪ್ರಯತ್ನಶೀಲತೆ, ಸೃಜನಾತ್ಮಕ ಚಿಂತನೆ, ಸಮಸ್ಯೆಗಳನ್ನು ಬಗೆಹರಿಸುವ ಕೌಶಲದಂತಹವು. ಪೇಟೆಂಟ್‌ಗಳಿಗೆ ಸಂಬಂಧಿಸಿದ ಹಿಂದಿನ ಎಲ್ಲ ಕಾನೂನುಗಳೂ ರೂಪುಗೊಂಡಿರುವುದು ಈ ಎಲ್ಲ ಗುಣ, ಯೋಗ್ಯತೆ, ಸಾಮರ್ಥ್ಯಗಳಿರುವುದು ಮನುಷ್ಯರಲ್ಲಿ ಮಾತ್ರ ಎಂಬ ಗ್ರಹಿಕೆಯ ಮೇಲೆ. ಆದರೆ ಕಳೆದೊಂದು ದಶಕದಲ್ಲಿ ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಬೆಳವಣಿಗೆಗಳು ಈ ಮೂಲ ಗ್ರಹಿಕೆಯನ್ನೇ ಪ್ರಶ್ನಿಸುತ್ತಿವೆ.

ಅಮೆರಿಕದ ಕಂಪ್ಯೂಟರ್ ವಿಜ್ಞಾನಿ ಮತ್ತು ಇಮ್ಯಾಜಿನೇಷನ್ ಎಂಜಿನ್ಸ್ ಎಂಬ ಕೃತಕ ಬುದ್ಧಿಮತ್ತೆ ಸಂಸ್ಥೆಯ ಸಂಸ್ಥಾಪಕ ಸ್ಟೀಫನ್ ಥೇಲರ್, 2019ರಲ್ಲಿ 'ಡೇಬಸ್' (Device for the Autonomous Bootstrapping of Unified Sentience) ಹೆಸರಿನ ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ರೂಪಿಸಿದರು. ಮನುಷ್ಯನ ಮಿದುಳಿನ ಮುಖ್ಯ ಭಾಗಗಳಾದ ಲಿಂಬಿಕ್, ಥಾಲಮಸ್, ಕಾರ್ಟೆಕ್ಸ್‌ನಂತೆಯೇ ಭಾಗಗಳಿರುವ ಡೇಬಸ್, ಸಂಯೋಜಿತ ಮಿದುಳಿನಂತೆ (ಸಿಂಥೆಟಿಕ್ ಬ್ರೈನ್) ಕೆಲಸ ಮಾಡುತ್ತದೆ. ಇದರ ಚಟುವಟಿಕೆಗಳನ್ನು, ಆಲೋಚನೆಗಳು ರೂಪುಗೊಳ್ಳುವುದನ್ನು ಎಮ್‌ಆರ್‌ಐ ಬಳಸಿ ಗುರುತಿಸಿ, ಅಧ್ಯಯನ ಮಾಡಬಹುದು. ಸಂವೇದನೆ, ಭಾವನೆಗಳನ್ನು ಗುರುತಿಸಿ, ಅನುಭವಿಸಿ, ಪ್ರತಿಕ್ರಿಯಿಸುವ ಸಾಮರ್ಥ್ಯವೂ ಡೇಬಸ್‌ಗೆ ಇದೆ. ಹೊಸ ವಿಧಾನ, ಪ್ರಕ್ರಿಯೆ, ಉತ್ಪನ್ನಗಳನ್ನು ಆವಿಷ್ಕರಿಸುವುದೇ ಡೇಬಸ್ ವ್ಯವಸ್ಥೆಯ ಮುಖ್ಯ ಉದ್ದೇಶವೆಂದು ಪ್ರತಿಪಾದಿಸಿದ ಥೇಲರ್, ಆ ಕೃತಕ ಬುದ್ಧಿಮತ್ತೆಯ ಯಂತ್ರಕ್ಕೆ ಅಂತಹ ಸಾಮರ್ಥ್ಯ ಇದೆ ಎಂದು ಸಾರಿದರು.

ಮಾನವನ ಮಧ್ಯಪ್ರವೇಶವಿಲ್ಲದೆಯೇ ಡೇಬಸ್ ಎರಡು ವಿಶಿಷ್ಟ ಉತ್ಪನ್ನಗಳ ವಿನ್ಯಾಸ ಮಾಡಿತು. ಮೊದಲನೆಯದು, ಫ್ರಾಕ್ಟಲ್ ಜ್ಯಾಮಿತಿಯನ್ನು ಆಧರಿಸಿದ ಆಹಾರ, ಪಾನೀಯಗಳ ಧಾರಕ (ಫುಡ್ ಕಂಟೇನರ್). ಎರಡನೆಯದು, ನೈಸರ್ಗಿಕ ಅವಘಡಗಳ ಸಂದರ್ಭದಲ್ಲಿ ಶೋಧನೆ ಮತ್ತು ರಕ್ಷಣೆಗಾಗಿ ಬಳಸಬಹುದಾದ, ವಿಶೇಷ ಸಂಕೇತಗಳನ್ನು ಸ್ಫುರಿಸುವ ಉತ್ಪನ್ನ. ಥೇಲರ್, ರ‍್ಯಾನ್ ಅಬಾಟ್ ಮತ್ತು ಆಸಕ್ತ ವಕೀಲರ ತಂಡ ಹದಿನೇಳು ದೇಶಗಳಲ್ಲಿ ಈ ಎರಡು ಉತ್ಪನ್ನಗಳಿಗೆ ಪೇಟೆಂಟ್ ಕೋರಿ 2019ರಲ್ಲಿ ಅರ್ಜಿ ಸಲ್ಲಿಸಿತು. ಈ ಎಲ್ಲ ಅರ್ಜಿಗಳಲ್ಲಿ ಎರಡೂ ಉತ್ಪನ್ನಗಳ 'ಇನ್ವೆಂಟರ್' ಡೇಬಸ್ ಎಂದು ನಮೂದಿಸಲಾಗಿತ್ತು. ಇದು, ಕೃತಕ ಬುದ್ಧಿಮತ್ತೆಗೆ ಬೌದ್ಧಿಕ ಆಸ್ತಿ ಹಕ್ಕನ್ನು ನೀಡುವಂತೆ ಕೇಳಿ, ಅದರ ಪರವಾಗಿ ಸಲ್ಲಿಸಿದ ಮೊದಲ ಅರ್ಜಿ!

ಅಮೆರಿಕದ ಪೇಟೆಂಟ್ ಮತ್ತು ಟ್ರೇಡ್‌ಮಾರ್ಕ್ಸ್ ಕಚೇರಿ ಮೊದಲನೆಯ ಹಂತದಲ್ಲೇ ಈ ಅರ್ಜಿಯನ್ನು ತಿರಸ್ಕರಿಸಿತು. ಅಲ್ಲಿನ ಪೇಟೆಂಟ್ ಕಾನೂನುಗಳಂತೆ, ಹೊಸತನ್ನು ಆವಿಷ್ಕರಿಸಿದ ಒಬ್ಬ ಮನುಷ್ಯನಿಗೆ ಪೇಟೆಂಟ್ ಕೊಡಬಹುದೇ ವಿನಾ ಕೃತಕ ಬುದ್ಧಿಮತ್ತೆಯ ಯಂತ್ರಕ್ಕಲ್ಲ ಎಂಬುದನ್ನು ಸ್ಪಷ್ಟಪಡಿಸಿತು. ಈ ನಿರ್ಣಯದ ವಿರುದ್ಧ ಥೇಲರ್ ಮತ್ತು ಸಂಗಡಿಗರು ಮಾಡಿದ ಅಪೀಲನ್ನು ಫೆಡರಲ್ ಡಿಸ್ಟ್ರಿಕ್ಟ್ ನ್ಯಾಯಾಲಯ ಮತ್ತು ಫೆಡರಲ್ ಸರ್ಕ್ಯೂಟ್ ನ್ಯಾಯಾಲಯಗಳೂ ಮನ್ನಿಸಲಿಲ್ಲ. ಥೇಲರ್ ಅಂತಿಮವಾಗಿ ಅಲ್ಲಿನ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು. ಸುಮಾರು ನಾಲ್ಕು ವರ್ಷಗಳ ಕಾಲ ನಡೆದ ಈ ಪ್ರಕರಣದಲ್ಲಿ, 2023ರ ಏಪ್ರಿಲ್‌ನಲ್ಲಿ, 'ಒಂದು ಯಂತ್ರ ಅಥವಾ ಕೃತಕ ಬುದ್ಧಿಮತ್ತೆ 'ಇನ್ವೆಂಟರ್' ಆಗುವುದು ಸಾಧ್ಯವಿಲ್ಲದ ಕಾರಣ ಅದಕ್ಕೆ ಪೇಟೆಂಟ್ ನೀಡಲಾಗದು' ಎಂಬ ತೀರ್ಪನ್ನು ನೀಡಲಾಯಿತು.

ಇಂಗ್ಲೆಂಡ್, ಯುರೋಪಿನ ದೇಶಗಳು, ನ್ಯೂಜಿಲೆಂಡ್ ಮತ್ತು ಜಪಾನ್ ಕೂಡ ಈ ಪೇಟೆಂಟ್ ಅರ್ಜಿಯನ್ನು ತಿರಸ್ಕರಿಸಿದವು. ಆಸ್ಟ್ರೇಲಿಯಾದ ನ್ಯಾಯಾಲಯಗಳು ಪ್ರಾರಂಭದಲ್ಲಿ ಒಮ್ಮತಕ್ಕೆ ಬರದಿದ್ದರೂ ಅಂತಿಮವಾಗಿ ಅಲ್ಲಿಯೂ ಅರ್ಜಿಗೆ ಮನ್ನಣೆ ದೊರೆಯಲಿಲ್ಲ. ಆದರೆ ವಿವಿಧ ದೇಶಗಳ ನ್ಯಾಯಾಲಯಗಳಲ್ಲಿ ಈ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ, 2021ರ ಜುಲೈನಲ್ಲಿ, ಡೇಬಸ್ ವಿನ್ಯಾಸ ಮಾಡಿದ ಎರಡೂ ಉತ್ಪನ್ನಗಳಿಗೆ ದಕ್ಷಿಣ ಆಫ್ರಿಕಾದ, 'ದಿ ಕಂಪನೀಸ್ ಆ್ಯಂಡ್ ಇಂಟೆಲೆಕ್ಚುಯಲ್ ಪ್ರಾಪರ್ಟಿ ಕಮಿಷನ್' ಪೇಟೆಂಟ್ ನೀಡಿ, ಕೃತಕ ಬುದ್ಧಿಮತ್ತೆಗೆ ಇನ್ವೆಂಟರ್ ಪಟ್ಟ ಕಟ್ಟಿತು. ಇದು ಇಡೀ ಪ್ರಪಂಚದಲ್ಲಿ ಕೃತಕ ಬುದ್ಧಿಮತ್ತೆಗೆ ದೊರೆತ ಮೊದಲ ಪೇಟೆಂಟ್.

ಡೇಬಸ್ ವಿನ್ಯಾಸ ಮಾಡಿದ ಎರಡು ಉತ್ಪನ್ನಗಳಿಗೆ ಪೇಟೆಂಟ್ ಕೋರಿ 17 ದೇಶಗಳಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಅದರಲ್ಲಿ 16 ದೇಶಗಳಲ್ಲಿ ಅರ್ಜಿ ತಿರಸ್ಕೃತವಾದುದನ್ನು ಥೇಲರ್ ಮತ್ತು ರ‍್ಯಾನ್ ಅಬಾಟ್ ತಾತ್ಕಾಲಿಕ ಹಿನ್ನಡೆ ಮಾತ್ರವೆಂದು ಹೇಳಿದ್ದಾರೆ, ಅಮೆರಿಕದ ಸಂಸತ್ ಸದಸ್ಯರ ಮೂಲಕವಾಗಿಯೇ ಕಾನೂನಿನಲ್ಲಿ ಅಗತ್ಯವಾದ ಬದಲಾವಣೆಗಳನ್ನು ತರುವುದು ಮುಂದಿನ ಪ್ರಯತ್ನ ಎಂದಿದ್ದಾರೆ. ನಮ್ಮ ಮಿದುಳಿನ ರಚನೆ ಮತ್ತು ಕಾರ್ಯ ವೈಖರಿಯ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳು ಅದರ ಅಸಾಧಾರಣ ಸಾಮರ್ಥ್ಯದ ಬಗ್ಗೆ ಹೊಸ ವಿಷಯಗಳನ್ನು ಬೆಳಕಿಗೆ ತರುತ್ತಿವೆ. ಅವೆಲ್ಲವನ್ನೂ ಮುಂದೆ ಕೃತಕ ಬುದ್ಧಿಮತ್ತೆಯ ವ್ಯವಸ್ಥೆಗಳಲ್ಲಿ ಅಳವಡಿಸುವ ಪ್ರಯತ್ನ ನಡೆಯುವುದರಲ್ಲಿ ಅನುಮಾನವಿಲ್ಲ. ಅಂತಹ ಪ್ರತಿಯೊಂದು ಪ್ರಯತ್ನವೂ ಬೌದ್ಧಿಕ ಹಕ್ಕು ಕಾನೂನುಗಳಿಗೆ ಹೊಸ ಸವಾಲಾಗುತ್ತದೆ ಎಂಬುದು ಪರಿಣತರ ಅಭಿಪ್ರಾಯ. ಈ ಸವಾಲುಗಳು ಹೊಸ ಔಷಧಿಗಳ ವಿನ್ಯಾಸ ಮತ್ತು ಉತ್ಪಾದನೆಯ ಕ್ಷೇತ್ರಗಳಲ್ಲಿ ಮೊದಲಿಗೆ ಎದುರಾಗಲಿವೆ ಎಂಬುದು ತಜ್ಞರ ನಿರೀಕ್ಷೆ.

ಹೊಸ ಔಷಧಿಗಳ ವಿನ್ಯಾಸ, ವಿವಿಧ ಪರೀಕ್ಷೆಗಳು ಮತ್ತು ಉತ್ಪಾದನೆಗೆ ಬೇಕಾದ ಸಮಯವನ್ನು ಶೇ 50ರಷ್ಟು ಕಡಿಮೆ ಮಾಡಿ, ವೆಚ್ಚವನ್ನು ಶೇ 30ರಿಂದ 40ರಷ್ಟು ಇಳಿಸುವ ಭರವಸೆಯನ್ನು ತೋರುತ್ತಿರುವ ಕೃತಕ ಬುದ್ಧಿಮತ್ತೆ ವ್ಯವಸ್ಥೆಗಳನ್ನು ಇಂದು ಆ ಕ್ಷೇತ್ರದಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. 2022ರ 'ನೇಚರ್' ಪತ್ರಿಕೆಯಲ್ಲಿನ ಸಂಶೋಧನಾ ಲೇಖನದಂತೆ, 2021ರಲ್ಲಿ ಕೃತಕ ಬುದ್ಧಿ-ಮತ್ತೆಯನ್ನು ಬಳಸುವ 20 ಕಂಪನಿಗಳು ಒಟ್ಟು 160 ಹೊಸ ಔಷಧಿಗಳನ್ನು ರೂಪಿಸುವ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿದ್ದವು. ಇದೇ ಪ್ರವೃತ್ತಿ ಮುಂದುವರಿದರೆ, 2030ರ ಹೊತ್ತಿಗೆ ಒಟ್ಟಾರೆ ಹೊಸ ಔಷಧಿಗಳ ಶೇ 10 ರಷ್ಟನ್ನು, ಸ್ವತಂತ್ರವಾಗಿ, ಮಾನವನ ಮಧ್ಯಪ್ರವೇಶವಿಲ್ಲದೆ ಕೃತಕ ಬುದ್ಧಿಮತ್ತೆಯ ವ್ಯವಸ್ಥೆಗಳೇ ರೂಪಿಸಲಿವೆ ಎಂಬ ಮುನ್ಸೂಚನೆ ಇದೆ. ಆ ವೇಳೆಗೆ ಪೇಟೆಂಟ್ ಕಾನೂನುಗಳಲ್ಲಿ ಬದಲಾವಣೆಗಳು ಅನಿವಾರ್ಯವಾಗಲಿವೆ.

ನಮ್ಮ ದೇಶದಲ್ಲೂ ಕೃತಕ ಬುದ್ಧಿಮತ್ತೆ ಬೆಂಬಲಿತ ಸಂಶೋಧನೆಗಳಿಗೆ ಪೇಟೆಂಟ್ ಕೋರಿ ಸಲ್ಲಿಸುವ ಅರ್ಜಿಗಳ ಸಂಖ್ಯೆ ತ್ವರಿತಗತಿಯಲ್ಲಿ ಏರುತ್ತಿದೆ. 2017- 18ರಲ್ಲಿ 657 ಅರ್ಜಿಗಳಿದ್ದು, 2021- 22ರಲ್ಲಿ 4,067 ಅರ್ಜಿಗಳನ್ನು ಸಲ್ಲಿಸಲಾಗಿದೆ. ಈ ಎಲ್ಲ ಅರ್ಜಿಗಳನ್ನು 2017ರ 'ಕಂಪ್ಯೂಟರ್ ರಿಲೇಟೆಡ್ ಇನ್ವೆನ್‌ಶನ್ಸ್ ಗೈಡ್‌ಲೈನ್ಸ್' ಅಡಿಯಲ್ಲಿ ಪರಿಶೀಲಿಸಲಾಗುತ್ತದೆ. ಉಳಿದೆಲ್ಲ ದೇಶಗಳಂತೆ ನಮ್ಮಲ್ಲಿ ಕೂಡ ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಉಪಜ್ಞೆಕಾರ ಅಥವಾ ಇನ್ವೆಂಟರ್ ಎಂದು ಪರಿಗಣಿಸುವುದಿಲ್ಲ. ಕೃತಕ ಬುದ್ಧಿಮತ್ತೆ ಮತ್ತು ಪೇಟೆಂಟ್ ಕಾನೂನುಗಳಿಗೆ ಸಂಬಂಧಿಸಿದಂತೆ ಪ್ರಪಂಚದಾದ್ಯಂತ ಪ್ರಾರಂಭವಾಗಿರುವ ಬದಲಾವಣೆಗಳ ಪ್ರಭಾವ ನಮ್ಮ ದೇಶದಲ್ಲೂ ಭವಿಷ್ಯದಲ್ಲಿ ಕಂಡುಬರಲಿದೆ.

ಚುರುಮುರಿ

ಮೂಗಿಗೆ ತುಪ್ಪ

• ಸುಮಂಗಲಾ

'ತಿರುಪತಿ ತಿಮ್ಮಪ್ಪ ಯಾಕೋ ನಮ್ಮ ನಂದಿನಿಯಮ್ಮನ ಮ್ಯಾಗೆ ಸಿಟ್ಟು ಮಾಡಿಕೊಂಡಾನೆ ಅಂತ ಕಾಣತೈತಿ' ಬೆಕ್ಕಣ್ಣ ಪೇಪರು ಓದುತ್ತ ವಿಶ್ಲೇಷಣೆಗೆ ತೊಡಗಿತು.

'ಪಾಪ... ಅಂವಾ ಎದಕ್ಕ ಸಿಟ್ಟು ಮಾಡಿಕೋತಾನಲೇ. ದೇವಸ್ಥಾನ ಮಂಡಳಿಯವರು ಯಾವದೇ ತುಪ್ಪ ಹಾಕಿ ಲಡ್ಡು ನೈವೇದ್ಯ ಮಾಡಿದ್ರೂ ಅಂವಾ ಮರುಮಾತಿಲ್ಲದೇ ಸ್ವೀಕರಿಸಿ ಆಶೀರ್ವಾದ ಮಾಡತಾನ' ಎಂದೆ.

'ಹಂಗಾರೆ ನಮ್ಮ ಕಟೀಲುಮಾಮ, ಸೀಟಿ ರವಿಯಣ್ಣ ಇವರೆಲ್ಲ ಹೇಳಿದ್ದು ಖರೇ. ಕೈ ಪಕ್ಷಕ್ಕೆ ಹಿಂದೂ ಶ್ರದ್ಧೆ-ಭಕ್ತಿ ಅಂದರೆ ಅಸಡ್ಡೆ, ಹಿಂಗಾಗಿ ತಿರುಪತಿಗೆ ತುಪ್ಪ ಕೊಡೂದು ನಿಲ್ಲಿಸ್ಯಾರೆ'.

'ಮಂಗ್ಯಾನಂಥವನೇ... ಅದೆಲ್ಲ ಬಿಜಿನೆಸ್ ಕಣಲೇ. ತಿರುಪತಿಯವರಿಗೆ ನಂಬರ್ ಒನ್ ಗುಣಮಟ್ಟದ ತುಪ್ಪನೂ ಬೇಕು, ಟೆಂಡರ್ ಒಳಗ ಅಗದಿ ಕಡಿಮೆ ದರನೂ ಇರಬಕು ಅಂದ್ರ ಹೆಂಗ ಸಾಧ್ಯ? ಗುಣಮಟ್ಟದ ತುಪ್ಪಾನ ಕಡಿಮೆ ಬೆಲೆಗೆ ಮಾರಿದ್ರ ನಮ್ ನಂದಿನಿಯಮ್ಮಂಗೆ ಲುಕ್ಸಾನು ಆಗಂಗಿಲ್ಲೇನು?'

'ಹಂಗಾರೆ ಇದು ರಾಜಕೀಯದ ಬಿಜಿನೆಸ್ಸು ಅನ್ನು. ಒಟ್ ಎಲ್ಲಾರೂ ಸೇರಿ ತಿಮ್ಮಪ್ಪನ ಮೂಗಿಗೆ ತುಪ್ಪ ಸವರತಾರೆ' ಎಂದಿತು.

'ಅಷ್ಟೇ ಅಲ್ಲ... ಇತ್ತಾಗೆ ಜನರ ಮೂಗಿಗೂ ನಾನಾ ರೀತಿಯ ತುಪ್ಪ ಸವರತಾರೆ'.

'ಜನರ ಮೂಗಿಗೆ ತುಪ್ಪ ಸವರೂ ಸ್ಪರ್ಧೆ ಇಟ್ಟರೆ ಯಾರು ಗೆಲ್ಲಬೌದು ಅಂತೀಯಾ?' ಬೆಕ್ಕಣ್ಣ ಕೇಳಿತು.

'ಹೊಸ ಸ್ಪರ್ಧೆ ಎದಕ್ಕಲೇ? ಚುನಾವಣೆ ಸ್ಪರ್ಧೆ ಅತಲ್ಲ... ಪ್ರಚಾರದ ಸಮಯದಲ್ಲಿ ಮೂಗಿಗೆ ಹೆಚ್ಚು ತುಪ್ಪ ಸವರಿದವರೇ ಗೆದ್ದು ಬಂದಿದಾರಲ್ಲ' ಎಂದೆ.

'ಗೆದ್ದು ಬಂದವರನ್ನ ಕೆಳಗಿಳಿಸಬೇಕು ಅಂದ್ರ ಸೋತವರು ಪ್ರತಿದಿನ ಜನರ ಮೂಗಿಗೆ ತುಪ್ಪ ಸವರೂ ಆಟ ಆಡಾಕೆ ಬೇಕು ಹೌದಿಲ್ಲೋ'.

'ಕಮಲಕ್ಕನ ಮನಿಯವ್ರು, ಕುಮಾರಣ್ಣನ ಮನಿಯವ್ರು ಅದನ್ನೇ ಪ್ರತೀದಿನ ಮಾಡ್ತಿದಾರ-ಲ್ಲಲೇ' ಎಂದೆ.

'ಒಟ್ರಾಶಿ ಈ ಎಲ್ಲರ ಆಟದಾಗೆ ಶ್ರೀಸಾಮಾನ್ಯನ ಮೂಗಿಗೆ ದೂರದಾಗೆ ತುಪ್ಪದ ವಾಸನೆ ಮಾತ್ರ ಬಡೀತೈತೆ, ಖರೇ ತುಪ್ಪನೂ ಯಾರೂ ಸವರಂಗಿಲ್ಲ!' ಎನ್ನುತ್ತ ಬೆಕ್ಕಣ್ಣ ಖೊಳ್ಳನೆ ನಕ್ಕಿತು.

ಸಂಗತ

ಬೀಳುವ ಮರ: ಇರಲಿ ಎಚ್ಚರ

ಸಾರ್ವಜನಿಕರು ತಮ್ಮ ಸುತ್ತಮುತ್ತಲ ಪರಿಸರದಲ್ಲಿರುವ ಗಿಡ ಮರಗಳ ಬಗ್ಗೆ ಗಮನಹರಿಸಿ, ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಬೇಕು

• ಡಾ. ಕೆ.ಎಸ್.ಚೈತ್ರಾ

ಬೆಂಗಳೂರಿನ ಚಂದ್ರಿಕಾ ಹೋಟೆಲ್ ಜಂಕ್ಷನ್‌ನಲ್ಲಿ ಬೃಹತ್ ಆಲದಮರ ಉರುಳಿ ಬಿದ್ದು ಯುವಕನ ಸ್ಥಿತಿ ಗಂಭೀರ. ಪ್ರೆಸಿಡೆನ್ಸಿ ರೋಡಿನಲ್ಲಿ ಪೈನ್ ಮರ ಉರುಳಿ ಅನೇಕ ವಾಹನಗಳಿಗೆ ಹಾನಿ, ಟ್ರಾಫಿಕ್ ದಟ್ಟಣೆ, ಜನರು ದಿನವೂ ಓಡಾಡುವ, ಮಕ್ಕಳು ಆಟವಾಡುವ ಕಬ್ಬನ್‌ಪಾರ್ಕ್‌ನಲ್ಲಿ ಐವತ್ತಕ್ಕೂ ಹೆಚ್ಚು ಮರಗಳು ನೆಲಕ್ಕುರುಳಿವೆ... ಈ ಬಾರಿಯ ಮಳೆಗಾಲದ ಕೆಲವು ಸುದ್ದಿಗಳಿವು!

ಮಳೆಯಿಂದ ಉತ್ತಮ ಬೆಳೆಯಾಗಿ, ಬದುಕು ಹಸನಾಗಲಿ ಎಂದು ಹಾರೈಸುತ್ತಿರುವ ಸಂದರ್ಭವಿದು. ಆದರೂ ನಗರಗಳಲ್ಲಿ ಮಳೆ ಬಂದೊಡನೆ ರಸ್ತೆಗಳಲ್ಲಿ ಓಡಾಡಲು, ವಾಹನಗಳಲ್ಲಿ ಚಲಿಸಲು, ಕಡೆಗೆ ಮನೆಯಿಂದ ಹೊರಗೆ ಬರಲೂ ಹೆದರುವ ಪರಿಸ್ಥಿತಿ ಎದುರಾಗಿದೆ. ಮಳೆಯ ರಭಸ, ಗಾಳಿಯ ವೇಗವನ್ನು ನಿಖರವಾಗಿ ಊಹಿಸಲು ಸಾಧ್ಯವಿಲ್ಲವಾದ್ದರಿಂದ ಜನರು ಎಚ್ಚರ ವಹಿಸಬೇಕು ಎನ್ನುವುದು ಸರಿಯೇ. ಆದರೆ ಸಣ್ಣಪುಟ್ಟ ಮಳೆಗೂ ಈ ರೀತಿ ಆಗುತ್ತಿರುವುದೇಕೆ ಎನ್ನುವ ಪ್ರಶ್ನೆ ಮೂಡುವುದು ಸಹಜ. ನಗರಗಳಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿ, ಮರಗಳ ಅಸಮರ್ಪಕ ನಿರ್ವಹಣೆ ಮುಖ್ಯ ಕಾರಣ.

ನಗರಗಳಲ್ಲಿ ರಸ್ತೆಗಳ ನಿರ್ಮಾಣ, ನೀರಿನ ಕೊಳವೆ, ಒಳಚರಂಡಿ ವ್ಯವಸ್ಥೆ, ಕೇಬಲ್ ಅಳವಡಿಕೆಯಂತಹ ಕಾರಣಗಳಿಗಾಗಿ ನೆಲವನ್ನು ಅಗೆಯಲಾಗುತ್ತದೆ. ಆಗ ಸಿಗುವ ಮರದ ಬೇರುಗಳನ್ನು ಅಲ್ಲಲ್ಲೇ ತುಂಡರಿಸಿ ಅದರ ಸುತ್ತ ಸಿಮೆಂಟ್ ಹಾಕಿ ಕೆಲಸ ಪೂರ್ಣಗೊಳಿಸ-ಲಾಗುತ್ತದೆ. ಹೀಗಾದಾಗ ಮರದ ಬೇರುಗಳ ಸಾಮರ್ಥ್ಯ ಕಡಿಮೆಯಾಗುತ್ತದೆ. ಸುತ್ತುವರಿದ ಸಿಮೆಂಟ್‌ನಿಂದಾಗಿ ನೀರು ಸರಿಯಾಗಿ ಇಳಿಯುವುದಿಲ್ಲ, ಪೋಷಕಾಂಶ ಸಿಗುವುದಿಲ್ಲ. ಹೀಗಾಗಿ ಮರ ಒಳಗಿನಿಂದಲೇ ದುರ್ಬಲವಾಗುತ್ತದೆ.

ಕಬ್ಬನ್‌ಪಾರ್ಕಿನಲ್ಲೂ ಸ್ಮಾರ್ಟ್‌ಸಿಟಿ ಕಾಮಗಾರಿ ನಡೆಯುತ್ತಿರುವುದು, ಅಲ್ಲಿನ ಮರಗಳ ಬೀಳುವಿಕೆಗೆ ಕಾರಣ ಎನ್ನುವುದು ಪರಿಸರಪ್ರೇಮಿಗಳ ಕೊರಗು. ನಗರ ಪ್ರದೇಶಗಳಲ್ಲಿ ಮರಗಳ ರೆಂಬೆಗಳು ಹೆಚ್ಚಾಗಿ ಒಂದೇ ಕಡೆ ಬಾಗಿರುತ್ತವೆ. ರಸ್ತೆಬದಿಯಲ್ಲಿರುವ ದೀಪದ ಕಂಬಗಳ ನಡುವೆ ಹಾದುಹೋಗುವ ವಿದ್ಯುತ್ ವಾಹಕಗಳಿಗೆ ಮರ ತಾಗಿದರೆ ತೊಂದರೆ ಹೆಚ್ಚು ಎಂಬ ಕಾರಣಕ್ಕೆ, ನೇರವಾಗಿರುವ ರೆಂಬೆಗಳನ್ನು ಆಗಾಗ್ಗೆ ಕಡಿಯಲಾಗುತ್ತದೆ. ಹೀಗಾಗಿ, ಮರ ಒಂದು ಬದಿಗೆ ವಾಲುತ್ತದೆ. ಈ ರೀತಿ ಬಾಗಿದ ರೆಂಬೆಗಳು ಗಾಳಿ, ಮಳೆ ಸಹಿಸುವ ಶಕ್ತಿ ಇಲ್ಲದೇ ಬೀಳುವ ಸಾಧ್ಯತೆ ಹೆಚ್ಚು. ಹಾಗೆಯೇ, ಬಹುಮಹಡಿ ಕಟ್ಟಡಗಳ ಸುತ್ತಮುತ್ತಲ ಮರಗಳಿಗೆ ಸಿಗುವ ಸೂರ್ಯನ ಕಿರಣ ಬಹಳ ಕಡಿಮೆ. ಸೂರ್ಯನ ಬೆಳಕನ್ನು ಅರಸುತ್ತ ಎತ್ತೆತ್ತರಕ್ಕೆ ಈ ಮರಗಳು ಅಡ್ಡಾದಿಡ್ಡಿ ಬೆಳೆಯುತ್ತವೆ. ಇಂಥ ಬಾಗಿದ ಮರಗಳ ತುದಿಯಲ್ಲಿ ಎಲೆಗಳು ಚಿಗುರಿ, ಚೆನ್ನಾಗಿ ಬೆಳೆದು ಭಾರ ಹೆಚ್ಚು. ಇವು ಮಳೆಗಾಲದಲ್ಲಿ ಮುರಿದುಬೀಳುವ ಸಾಧ್ಯತೆ ಹೆಚ್ಚಾಗಿರುತ್ತದೆ.

ನಗರಗಳಲ್ಲಿ ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ ಗಿಡಗಳನ್ನು ನೆಡುವುದು ಮುಖ್ಯ. ಆದರೆ ಬೇಗ ಬೆಳೆಯುವ, ಹೂವಿನಿಂದ ಅಂದವಾಗಿ ಕಾಣುವ ವಿದೇಶಿ ಗಿಡಗಳನ್ನು ನೆಡಲಾಗುತ್ತಿದೆ. ಹೂ ಬಿಡುವುದೇನೋ ನಿಜ, ಆದರೆ ಇವು ದುರ್ಬಲವಾದ ಬೇರುಗಳಿಂದ ಕೂಡಿರುತ್ತವೆ.

ಹೊಸ ಸಸಿಗಳನ್ನು ನೆಡುವಾಗ ಸಾಕಷ್ಟು ಆಳ ಮತ್ತು ಅಗಲದ ಗುಂಡಿಗಳನ್ನು ತೋಡಬೇಕು. ಕನಿಷ್ಠ ಎರಡು ಅಡಿ ಆಳವನ್ನು ಸಸಿಗಳು ತಲುಪಿದರೆ ಗಾಳಿ ಮತ್ತು ಮಳೆಯನ್ನು ತಡೆದುಕೊಳ್ಳುವ ಸಾಮರ್ಥ್ಯ-ವನ್ನು ಪಡೆಯುತ್ತವೆ. ಆದರೆ ಮೂಲಸೌಕರ್ಯದ ಹೆಸರಿನಲ್ಲಿ ಪದೇ ಪದೇ ರಸ್ತೆಯನ್ನು ಅಗೆಯಲಾಗು-ತ್ತದೆ. ಇದರಿಂದ ಗಿಡಗಳು ಬೇರೂರುವ ಮುನ್ನವೇ ದುರ್ಬಲವಾಗುತ್ತವೆ.

ಈ ಸಲ ಮಳೆಗಾಲದಲ್ಲಿ ಸಂಚಾರ ಪೊಲೀಸ್ ಠಾಣಾಧಿಕಾರಿಗಳು ತಮ್ಮ ಜೀಪಿನಲ್ಲಿಯೇ ಹಾರೆ, ಸಲಾಕೆ, ಗುದ್ದಲಿ, ಮಚ್ಚು, ಗರಗಸದಂತಹ ಅಗತ್ಯ ಸಲಕರಣೆಗಳನ್ನು ಇಟ್ಟುಕೊಂಡು, ಮರ ಬಿದ್ದಾಗ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಮಳೆ ಹಾನಿಗೆ ತ್ವರಿತವಾಗಿ ಸ್ಪಂದಿಸುವ ಈ ಕಾರ್ಯ ನಿಜಕ್ಕೂ ಒಳ್ಳೆಯದು. ಆದರೆ ನಿಜವಾದ ಕೆಲಸ ನಡೆಯಬೇಕಾ-ದದ್ದು ಮುಂದಿನ ಮಳೆಗಾಲ ಬರುವ ಮುಂಚೆಯೇ!

ಉದ್ಯಾನಗಳ ನಗರಿ ಎಂದೇ ಹೆಸರಾದ ಬೆಂಗಳೂರಿನಲ್ಲಿ ಇರುವ ಹೆಚ್ಚಿನವು ಹಳೆಯ ಮರಗಳು. ಮರಗಳ ಪ್ರಭೇದ, ಕಾಲಮಾನ ಕುರಿತು ನಿಖರ ಮಾಹಿತಿ ಇಲ್ಲ. ಅನೇಕ ಮರಗಳು ದೊಡ್ಡದಾಗಿ, ದೃಢವಾಗಿ ಕಂಡರೂ ಒಳಗೆ ದುರ್ಬಲವಾಗಿರು-ತ್ತವೆ. ಹಾಗಾಗಿ ಮರಗಳ ಗಣತಿ ಮತ್ತು ಅವುಗಳ ಸ್ಥಿತಿಗತಿ ಕುರಿತಂತೆ ಮಾಹಿತಿಯನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳುವುದು ಅವಶ್ಯ. ಹಾಗೆಯೇ ಸೂಕ್ತ ಸಸಿಗಳನ್ನು ನೆಡುವ ಬಗ್ಗೆಯೂ ಬಿಬಿಎಂಪಿ ಗಮನಹರಿಸಬೇಕು. ಅಗಲವಾದ ರಸ್ತೆಗಳಿದ್ದು ಬಹಳಷ್ಟು ಜಾಗವಿದ್ದಲ್ಲಿ ಹೊಂಗೆ, ಗುಲ್‌ಮೊಹರ್‌ನಂತಹ ವಿಶಾಲವಾಗಿ ಹಬ್ಬುವ ಮರಗಳು ಸೂಕ್ತ. ಜನಜಂಗುಳಿ ಹೆಚ್ಚಿರುವ ಕಡೆಗಳಲ್ಲಿ ಆಳವಾಗಿ ಬೇರೂರಿ, ದೃಢವಾಗಿ ನಿಲ್ಲುವ ಬೇವಿನ ಮರಗಳು ಉತ್ತಮ ಆಯ್ಕೆ. ಬೇವಿನ ಮರ ವಾಯುಮಾಲಿನ್ಯವನ್ನೂ ಕಡಿಮೆ ಮಾಡುತ್ತದೆ. ಮನೆಯ ಮುಂದೆ, ಕತ್ತರಿಸಲು ಸುಲಭವಾಗುವ ಸಂಪಿಗೆ, ಪಾರಿಜಾತ, ರಾತ್ರಿರಾಣಿಯ ಗಿಡಗಳನ್ನು ಹಾಕುವುದು ಒಳ್ಳೆಯದು.

ಸಾರ್ವಜನಿಕರು ತಮ್ಮ ಸುತ್ತಮುತ್ತಲ ಪರಿಸರ ದಲ್ಲಿರುವ ಗಿಡ ಮರಗಳ ಬಗ್ಗೆ ಗಮನಹರಿಸಿ, ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಬೇಕು. ಹಾಗೆಯೇ ಪರಿಸರತಜ್ಞರು ಮತ್ತು ಅರಣ್ಯ ಇಲಾಖೆಯ ನೆರವಿನೊಂದಿಗೆ ಮಹಾನಗರ ಪಾಲಿಕೆಯು ಗಿಡಮರಗಳ ನಿರ್ವಹಣೆ ಹಾಗೂ ಅಗತ್ಯ ಕಾಮಗಾರಿಯನ್ನು ವೈಜ್ಞಾನಿಕವಾಗಿ ಮಾಡುವುದರಿಂದ ಮರಗಳಿಗೆ ಆಗುವ ಹಾನಿಯನ್ನು ತಪ್ಪಿಸಬಹುದು.

ವಾಚಕರ ವಾಣಿ

'ಕಣಜ' ಉಳಿಸಿಕೊಳ್ಳೋಣ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ವಹಿಸುತ್ತಿರುವ 'ಕಣಜ' ಕನ್ನಡ ಆನ್‌ಲೈನ್ ಜ್ಞಾನಕೋಶವು ಮುಚ್ಚುವ ಸ್ಥಿತಿ ತಲುಪಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಆ. 4). ಇತ್ತೀಚಿನ ದಿನಗಳಲ್ಲಿ ಅತಿಯಾದ ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗಿರುವುದರಿಂದ, ಕನ್ನಡ ಭಾಷೆಯು ನಮ್ಮ ನಿತ್ಯ ಜೀವನದಿಂದ ಮರೆಯಾಗುವ ದಿನಗಳು ಬಹಳ ದೂರ ಇಲ್ಲ. ಅತಿಯಾದ ಇಂಗ್ಲಿಷ್ ಬಳಕೆಯಿಂದ ಸ್ಪಷ್ಟವಾದ ಕನ್ನಡ ಮಾತನಾಡಲು, ಬರೆಯಲು ನಾವು ಪರದಾಡುವಂತಾಗಿದೆ. ಈ ಸಮಯದಲ್ಲಿ ಕನ್ನಡ ಜ್ಞಾನಕೋಶ ಕಣಜ ನಮ್ಮೆಲ್ಲರ ಪಾಲಿಗೆ ವರದಾನವಾಗಿದೆ. ಇಂತಹ ಸಂದರ್ಭದಲ್ಲಿ ಸಿಬ್ಬಂದಿ ವೇತನ ಬಾಕಿ ಪಾವತಿ, ನಿರ್ವಹಣೆಯಂತಹ ಸಮಸ್ಯೆಗಳಿಂದ ಕಣಜ ಮುಚ್ಚುವ ಸ್ಥಿತಿಗೆ ಬಂದಿರುವುದು ವಿಪರ್ಯಾಸದ ಸಂಗತಿ.

ಇಲಾಖೆಯು ಸಿಬ್ಬಂದಿಯ ವೇತನ ಬಾಕಿಯನ್ನು ಕೂಡಲೇ ಪಾವತಿಸಬೇಕು, ಖಾಲಿ ಇರುವ ಸಮನ್ವಯಕಾರ ಹುದ್ದೆಯನ್ನು ಭರ್ತಿ ಮಾಡಬೇಕು. ಮುಂದೊಂದು ದಿನ ಕನ್ನಡದ ಉಳಿವಿಗೆ ತನ್ನದೇ ಆದ ಕೊಡುಗೆ ನೀಡುವ ಶಕ್ತಿ, ಸಾಮರ್ಥ್ಯ ಕಣಜ ಜ್ಞಾನಕೋಶಕ್ಕಿದೆ. ಕನ್ನಡಿಗರಾದ ನಾವು ಇದನ್ನು ಉಳಿಸಬೇಕು, ಬೆಳೆಸಬೇಕು, ಬಳಸಬೇಕು.

ಪ್ರಸಾದ್ ಜಿ.ಎಂ., ಮೈಸೂರು

ಚುನಾವಣಾ ಸ್ಪರ್ಧೆ ವಯೋಮಿತಿ: ಇಳಿಕೆ ಸಲ್ಲ

ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲು ಕನಿಷ್ಠ ವಯಸ್ಸನ್ನು ಪ್ರಸ್ತುತ ಇರುವ 25 ವರ್ಷದಿಂದ 18ಕ್ಕೆ ಇಳಿಸಲು ಬಿಜೆಪಿಯ ಸುಶೀಲ್ ಮೋದಿ ನೇತೃತ್ವದ ಕಾನೂನು ಮತ್ತು ಸಿಬ್ಬಂದಿ ಕುರಿತ ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು ಮಾಡಿರುವುದರ ಜೊತೆಗೆ, ಇದು ಯುವಜನರಿಗೆ ಪ್ರಜಾಪ್ರಭುತ್ವದಲ್ಲಿ ತೊಡಗಿಸಿ ಕೊಳ್ಳಲು ಸಮಾನ ಅವಕಾಶ ನೀಡುತ್ತದೆ ಎಂದು ಹೇಳಿದೆ. ಇದು ಮೇಲ್ನೋಟಕ್ಕೆ ಸರಿ ಎನ್ನಿಸಿದರೂ ಒಪ್ಪಲಾಗದು. ತೀರಾ 18 ವರ್ಷಕ್ಕೇ ಅಂದರೆ ಆಗತಾನೇ ಪಿಯುಸಿ ಮುಗಿಸಿದ್ದು, ಇನ್ನೂ ಹುಡುಗಾಟದ ಹಂತದಲ್ಲೇ ಇರುತ್ತಾರೆ. ಮನಸ್ಸು ಇನ್ನೂ ಆ ಸ್ಥಿತಿಯಿಂದ ಹೊರಬಂದಿರುವುದಿಲ್ಲ. ಉತ್ಸಾಹ, ಹುಮ್ಮಸ್ಸು ಹೆಚ್ಚಾಗಿರುತ್ತದೆಯಾದರೂ ವಿವೇಚಿಸುವಷ್ಟು ಸಾಮರ್ಥ್ಯ ಇರುವುದಿಲ್ಲ. ಹೆಸರಿಗೆ ಮಗ ಜನಪ್ರತಿನಿಧಿಯಾಗಿ ತಂದೆಯೇ ಪರೋಕ್ಷವಾಗಿ ಆಡಳಿತ ನಡೆಸುವ ಅಪಾಯ ಬರಬಹುದು. ಆಡಳಿತದಲ್ಲಿ ತಂದೆಯ ಹಸ್ತಕ್ಷೇಪ ವಿಪರೀತವಾಗಬಹುದು. ಹಾಗಾಗಿ ಈಗಿರುವ 25 ವರ್ಷದ ಕನಿಷ್ಠ ಮಿತಿಯೇ ಸೂಕ್ತ.

ನಿಜವಾಗಿಯೂ ಯುವಜನರಿಗೆ ಅವಕಾಶ ದೊರಕಬೇಕು ಎಂದರೆ, ಸ್ಪರ್ಧಿಗಳಿಗೆ 70- 75 ವರ್ಷದ ಗರಿಷ್ಠ ವಯೋಮಾನ ನಿಗದಿಪಡಿಸಲಿ. ಇದರ ಜೊತೆಗೆ, ಅಪ್ಪ ಒಂದು ಕ್ಷೇತ್ರದ ಜನಪ್ರತಿನಿಧಿ ಆಗಿದ್ದರೆ ಆತನ ಮಗ ಅಥವಾ ಮಗಳಿಗೆ ಅಥವಾ ಅವರ ಕುಟುಂಬದ ಯಾವುದೇ ವ್ಯಕ್ತಿಗೆ ಸ್ಪರ್ಧಿಸುವ ಅವಕಾಶ ನೀಡದಂತಿರಲಿ. ಆಗ ನಿಜವಾಗಿಯೂ ಹೊಸಬರು ಮತ್ತು ಯುವಕರಿಗೆ ಪ್ರಜಾಪ್ರಭುತ್ವದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಲಭಿಸುತ್ತದೆ. ಬರೀ ವಯೋಮಿತಿ ಕಡಿಮೆ ಮಾಡುವುದರಿಂದ ಈಗಿರುವ ಜನಪ್ರತಿನಿಧಿಗಳ ಕುಟುಂಬದವರಿಗೇ ಹೆಚ್ಚು ಅವಕಾಶಗಳು ದೊರಕುವ ಸಂಭವ ಹೆಚ್ಚಾಗುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಫಲಪುಷ್ಪ ಪ್ರದರ್ಶನ: ಗೆಲ್ಲುವಂತಿದೆ ಜನಮನ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಇತ್ತೀಚೆಗೆ ಆರಂಭವಾದ ಫಲಪುಷ್ಪ ಪ್ರದರ್ಶನವು ಅಚ್ಚುಕಟ್ಟಾಗಿದೆ. ಕರ್ನಾಟಕ ಕಂಡ ಮೇಲ್ಪಂಕ್ತಿಯ ರಾಜಕಾರಣಿಗಳಲ್ಲಿ ಒಬ್ಬರಾದ ಕೆಂಗಲ್ ಹನುಮಂತಯ್ಯ ಅವರ ಜೀವನ ಸಾಧನೆಗಳನ್ನು ಕೇಂದ್ರವಾಗಿ ಇಟ್ಟುಕೊಂಡು, ಸುಮಾರು 60 ಪೋಸ್ಟರ್‌ಗಳಲ್ಲಿ ಕಾಗುಣಿತ ಅಥವಾ ವ್ಯಾಕರಣ ತಪ್ಪುಗಳಿಲ್ಲದೆ ಚರಿತ್ರಾರ್ಹ ಅಂಶಗಳನ್ನು ಪ್ರಕಟಿಸಿದ್ದಾರೆ. ಮಾಹಿತಿಗಾಗಿ ನೀಡಿರುವ ಅಪರೂಪದ ಕಪ್ಪು ಬಿಳುಪು ಛಾಯಾಚಿತ್ರಗಳ ಮುದ್ರಣ ಗುಣಮಟ್ಟ ಸಹ ಉತ್ತಮವಾಗಿದೆ. ವಿಧಾನಸೌಧದ ಹೂಪ್ರತಿಕೃತಿ ಮನಸೆಳೆಯುವಂತಿದೆ. ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕರ್ನಾಟಕದ ನೆಲಕ್ಕೆ ಮತ್ತು ಕನ್ನಡಕ್ಕೆ ಸಂಬಂಧಿಸಿದ ಬಹಳ ಮಹತ್ವದ ಸಂಗತಿಗಳನ್ನು ಜನರ ಮನಸ್ಸಿಗೆ ತರುವಂತೆ ಆಯೋಜಿಸಿರುವ ಈ ವರ್ಷದ ಪ್ರದರ್ಶನವು ಬಹಳ ಕಾಲ ನೆನಪಿನಲ್ಲಿ ಉಳಿಯಲಿದೆ. ಇದರ ಆಯೋಜನೆಗೆ ಶ್ರಮಿಸಿರುವ ತೋಟಗಾರಿಕೆ ಇಲಾಖೆ ಮತ್ತು ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಿಬ್ಬಂದಿ ಅಭಿನಂದನಾರ್ಹರು.

₹ 2.5 ಕೋಟಿಯನ್ನು ಹೂವುಗಳ ಅಲಂಕಾರಕ್ಕೆ ಬಳಸಿರುವುದರ ಔಚಿತ್ಯವನ್ನು ಒಂದು ನೆಲೆಯಲ್ಲಿ ಪ್ರಶ್ನಿಸಬಹುದು. ಆದರೆ, ಈ ಪ್ರದರ್ಶನದ ಟಿಕೆಟ್ ಬಿಕರಿಯಿಂದ ಆಗಲಿರುವ ನಿರೀಕ್ಷಿತ ಆದಾಯವು ಸುಮಾರು ₹ 8 ಕೋಟಿ ಎನ್ನಲಾಗಿದೆ. ಜೊತೆಗೆ, ನಾಗರಿಕರ ಮನಸ್ಸಿನ ಮೇಲೆ ಇದರ ಸವಿನೆನಪು ಮಾಡಲಿರುವ ಪ್ರಭಾವಕ್ಕೆ ಬೆಲೆ ಕಟ್ಟುವುದು ಕಷ್ಟ.

ಶ್ರೀಕಂಠ, ಬೆಂಗಳೂರು

ಅಡಿಕೆ ಆಮದು: ನಿರ್ಧಾರ ಪುನರ್‌ಪರಿಶೀಲಿಸಿ

ಭೂತಾನ್‌ನಿಂದ ಪ್ರತಿವರ್ಷ 17 ಸಾವಿರ ಟನ್ ತಾಜಾ ಅಡಿಕೆ ಆಮದು ಮಾಡಿಕೊಳ್ಳುವುದಾಗಿ ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವಾಲಯದ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು ಲೋಕಸಭೆಯಲ್ಲಿ ತಿಳಿಸಿದ್ದಾರೆ (ಪ್ರ.ವಾ., ಆ. 6). ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಳ್ಳುವ ಮೊದಲು ಅಡಿಕೆ ಬೆಳೆಗಾರರ ಸ್ಥಿತಿಗತಿಯ ಬಗ್ಗೆ ಒಮ್ಮೆ ದೃಷ್ಟಿ ಹಾಯಿಸಬೇಕಾಗಿತ್ತು. ಅಡಿಕೆ ಬೆಳೆಗಾರರು ಇಂದು ತೀರಾ ಸಂಕಷ್ಟದಲ್ಲಿದ್ದಾರೆ. ವಿಶೇಷವಾಗಿ ರಾಜ್ಯದ ಮಲೆನಾಡು ಭಾಗದಲ್ಲಿ ಅಡಿಕೆ ಬೆಳೆಯು ಹಳದಿ ಎಲೆ ರೋಗ, ಎಲೆ ಚುಕ್ಕಿ ರೋಗದಂತಹವುಗಳಿಂದ ಅವನತಿಯ ಅಂಚಿನಲ್ಲಿದೆ. ಅಡಿಕೆ ಮಾರಾಟ ಮಾಡಲೇಬೇಕಾದ ಅವಧಿಯಲ್ಲಿ ಸಣ್ಣ, ಅತಿಸಣ್ಣ ಅಡಿಕೆ ಬೆಳೆಗಾರರಿಗೆ ಉತ್ತಮ ದರ ಸಿಕ್ಕದೆ, ರೋಗನಿರೋಧಕ ಔಷಧಿ, ಅಡಿಕೆ ತೋಟ ನಿರ್ವಹಣೆ ಕೆಲಸಗಳಿಗೆ ತಗಲುವ ಅಧಿಕ ವೆಚ್ಚ, ಪ್ರಕೃತಿ ವಿಕೋಪದಂತಹ ಪರಿಸ್ಥಿತಿಗಳಿಂದ ಅವರು ಕಂಗಾಲಾಗಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಅಡಿಕೆ ಆಮದಿನಿಂದ ಇಲ್ಲಿಯ ಅಡಿಕೆಗೆ ಬೇಡಿಕೆ ಕಡಿಮೆಯಾಗಿ ದರ ಕುಸಿತ ಉಂಟಾದರೆ, ತಮ್ಮ ಬದುಕಿಗೆ ಅದನ್ನೇ ನಂಬಿಕೊಂಡಿರುವ ಅಡಿಕೆ ಬೆಳೆಗಾರರ ಪರಿಸ್ಥಿತಿ ಮೂರಾಬಟ್ಟೆಯಾಗುತ್ತದೆ. ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅಡಿಕೆ ಆಮದಿನ ಬಗ್ಗೆ ತೆಗೆದುಕೊಂಡಿರುವ ನಿರ್ಧಾರವನ್ನು ಪುನರ್‌ಪರಿಶೀಲಿಸಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

• ಸುಕೃತ ಎಸ್.

ಸಂಘರ್ಷದ ಉನ್ಮಾದ ಹೆಣ್ಣು ಮಕ್ಕಳೇ ಗುರಿ

ಮಣಿಪುರದ ಕುಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಮೈತೇಯಿ ಸಮುದಾಯದ ಪುರುಷರ ಗುಂಪೊಂದು ಬಂದೂಕಿನ ತುದಿಯಿಂದ ಬೆದರಿಸಿ ಬೆತ್ತಲೆಗೊಳಿಸಿ, ರಸ್ತೆಯುದ್ದಕ್ಕೂ ಲೈಂಗಿಕ ಹಿಂಸೆ ನೀಡುತ್ತಿರುವ ವಿಡಿಯೊ ಇದೇ ಜುಲೈ 19ರಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಕೆಲವೇ ಗಂಟೆಗಳಲ್ಲಿ ಲಕ್ಷಾಂತರ ಬಾರಿ ಹಂಚಿಕೆಯಾದ ಆ ವಿಡಿಯೊ ದೇಶದ ಅಂತಃಸಾಕ್ಷಿಯನ್ನೇ ಕಲಕಿತು. ಸಾಮಾಜಿಕ ಜಾಲತಾಣಗಳಲ್ಲಿ ಆ ಬಗ್ಗೆ ಆವೇಶ, ಆಕ್ರೋಶ ವ್ಯಕ್ತವಾಯಿತು. ಮಣಿಪುರ ಹಿಂಸಾಚಾರದ ಕುರಿತ ಅರ್ಜಿಗಳ ವಿಚಾರಣೆ ನಡೆಸುತ್ತಿದ್ದ ಸುಪ್ರೀಂ ಕೋರ್ಟ್ ಈ ವಿಡಿಯೊ ಕುರಿತು ಸ್ವಯಂಪ್ರೇರಿತವಾಗಿ ವಿಚಾರಣೆಯನ್ನು ಜುಲೈ 20ರಂದು ಕೈಗೆತ್ತಿಕೊಂಡಿತು. 'ಮಹಿಳೆಯನ್ನು ಹಿಂಸಾಚಾರದ ಸಾಧನವನ್ನಾಗಿ ಬಳಸಿಕೊಳ್ಳುವುದನ್ನು ಒಪ್ಪಿಕೊಳ್ಳಲಾಗದು' ಎಂದು ಕಟುವಾಗಿ ಹೇಳಿತು.

ಈ ಘಟನೆ ಬಗ್ಗೆ ಮಾತನಾಡುವಾಗ ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರ, ಛತ್ತೀಸಗಢ ಮತ್ತು ರಾಜಸ್ಥಾನ ಎಲ್ಲಿಯೇ ಇಂತಹ ಘಟನೆ ನಡೆದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು ಎಂದು ಘೋಷಿಸಿದ್ದರು.

ಮಣಿಪುರದ ಕೃತ್ಯವು, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ನಡೆದ ಕೃತ್ಯಗಳೂ ಒಂದೇ ಎಂಬಂತೆ ನೋಡುವ ಯತ್ನಗಳು ಸಾಮಾಜಿಕ ಜಾಲತಾಣಗಳಲ್ಲಿನ ಚರ್ಚೆಗಳಲ್ಲಿ ನಡೆಯಿತು. ಜುಲೈ 31ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ದೆಹಲಿಯ ಬಿಜೆಪಿಯ ಕಾನೂನು ಕೋಶದ ಸಹ ಸಂಚಾಲಕಿ ಹಾಗೂ ದಿವಂಗತ ಸುಷ್ಮಾ ಸ್ವರಾಜ್ ಅವರ ಮಗಳು, ವಕೀಲೆ ಬಾನ್ಸುರಿ ಸ್ವರಾಜ್ ಅವರು ಸುಪ್ರೀಂ ಕೋರ್ಟ್‌ಗೆ ಮನವಿಯೊಂದನ್ನು ಮಾಡಿದರು. 'ಮಣಿಪುರದಲ್ಲಿ ಮಾತ್ರವಲ್ಲ ಪಶ್ಚಿಮ ಬಂಗಾಳ, ಛತ್ತೀಸಗಢ ಹಾಗೂ ರಾಜಸ್ಥಾನದಲ್ಲೂ ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯದಂಥ ಘಟನೆಗಳು ನಡೆಯುತ್ತಿವೆ. ಆದ್ದರಿಂದ, ಮಣಿಪುರದ ಈ ಕೃತ್ಯದ ವಿಚಾರಣೆಯ ಜೊತೆಗೆ, ಈ ಎಲ್ಲಾ ರಾಜ್ಯಗಳಲ್ಲಿ ನಡೆಯುತ್ತಿರುವ ಘಟನೆಗಳನ್ನೂ ಸೇರಿಸಿಕೊಳ್ಳಿ' ಎಂಬುದು ಅವರ ಮನವಿಯಾಗಿತ್ತು. ದೇಶದ ಎಲ್ಲೆಡೆ ನಡೆದ ಲೈಂಗಿಕ ದೌರ್ಜನ್ಯ ಕೃತ್ಯಗಳೂ ಒಂದೇ ಎಂದು ಅರ್ಥೈಸುವ ಯತ್ನವನ್ನು ಸುಪ್ರೀಂ ಕೋರ್ಟ್ ಖಡಾಖಂಡಿತವಾಗಿ ನಿರಾಕರಿಸಿತು. ದೇಶದ ಬೇರೆಡೆ ನಡೆದ ಅತ್ಯಾಚಾರ ಪ್ರಕರಣಗಳಿಗೂ, ಮಣಿಪುರದ ಕೃತ್ಯಕ್ಕೂ ಬಹಳ ವ್ಯತ್ಯಾಸವಿದೆ ಎಂದು ಸುಪ್ರೀಂ ಕೋರ್ಟ್ ದೃಢವಾಗಿ ಹೇಳಿತು.

ನ್ಯಾಯಾಲಯ ಹೇಳಿದ್ದೇನು...: 1. ಪೊಲೀಸರೇ ಉದ್ರಿಕ್ತ ಗುಂಪಿಗೆ ತಮ್ಮನ್ನು ಒಪ್ಪಿಸಿದರು ಎಂದು ಸಂತ್ರಸ್ತ ಮಹಿಳೆಯರು ಹೇಳಿಕೆ ನೀಡಿದ್ದಾರೆ. ಇದು 'ನಿರ್ಭಯಾ' ರೀತಿಯ ಪ್ರಕರಣವಲ್ಲ. ಅದು ಕೂಡ ಭಯಾನಕವಾಗಿಯೇ ಇತ್ತು ಮತ್ತು ಅದು ಪೂರ್ವನಿರ್ಧರಿತ ಘಟನೆ ಆಗಿರಲಿಲ್ಲ. ಆದರೆ, ಮಣಿಪುರದಲ್ಲಿ ನಡೆದದ್ದು ಪೂರ್ವನಿರ್ಧರಿತವಾದುದು. ಮಣಿಪುರಲ್ಲಿ ನಡೆದದ್ದು ವ್ಯವಸ್ಥಿತ ಹಿಂಸಾಚಾರ.

2. ದೇಶದೆಲ್ಲೆಡೆ ಮಹಿಳೆಯರ ಮೇಲೆ ಅಪರಾಧಗಳು ನಡೆಯುತ್ತಿವೆ. ಇದರಲ್ಲಿ ಸಂಶಯವಿಲ್ಲ ಮತ್ತು ಇದು ವಾಸ್ತವ. ಆದರೆ, ಈಗ ನಾವು ಚರ್ಚೆ ಮಾಡುತ್ತಿರುವುದು ಅಸಾಧಾರಣ ಘಟನೆಯಾಗಿದೆ. ಕೋಮು ಸಂಘರ್ಷದಂಥ ಸಂದರ್ಭದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ ನಡೆಯುತ್ತಿದೆ. ನಿಮ್ಮ ಮನವಿಗೆ ಒಂದೇ ಉತ್ತರ ಇರುವುದು. ದೇಶದ ಬೇರೆಡೆ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತಿದೆ ಎಂಬ ಕಾರಣಕ್ಕೆ ಮಣಿಪುರಲ್ಲಿ ನಡೆಯುತ್ತಿರುವ ಅತ್ಯಾಚಾರಗಳಿಗೆ ವಿನಾಯಿತಿ ನೀಡಲು ಬರುವುದಿಲ್ಲ. ಭಾರತದಲ್ಲಿರುವ ಎಲ್ಲಾ ಮಹಿಳೆಯರಿಗೆ ರಕ್ಷಣೆ ನೀಡಿ ಅಥವಾ ಯಾರಿಗೂ ರಕ್ಷಣೆ ನೀಡಬೇಡಿ ಎಂಬಂತಿದೆ ನಿಮ್ಮ ಮಾತು. ಈಗ ನಮ್ಮ ಮುಂದಿರುವುದು ಮಣಿಪುರದ ಸ್ಥಿತಿಯನ್ನು ಹೇಗೆ ನಿಭಾಯಿಸುತ್ತೇವೆ ಎಂಬುದಷ್ಟೇ.

ಹಾಗಾದರೆ, ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಹಾಗೂ ಯುದ್ಧ ಅಥವಾ ಕೋಮು ಸಂಘರ್ಷಗಳ ಸಮಯದಲ್ಲಿ ನಡೆಯುವ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯದ ನಡುವೆ ವ್ಯತ್ಯಾಸವೇನು? ಉತ್ತರ ಸ್ಪಷ್ಟ; ಅತ್ಯಾಚಾರ ನಡೆಸುವುದಕ್ಕೆ ಇರುವ ಕಾರಣಗಳು, ಉದ್ದೇಶಗಳು. ಯುದ್ಧ ಅಥವಾ ಕೋಮು ಸಂಘರ್ಷದಲ್ಲಿ ನಡೆಯುವ ಅತ್ಯಾಚಾರಗಳ ಉದ್ದೇಶ ಏನಿರುತ್ತವೆ ಎಂಬುದಕ್ಕೆ ವಿಶ್ವಸಂಸ್ಥೆ ಹಲವು ವಿಶ್ಲೇಷಣೆಗಳನ್ನು ಮಾಡಿದೆ.

ಗಲಭೆ, ಯುದ್ಧದ ಸಂದರ್ಭಗಳಲ್ಲಿ ನಡೆಸುವ ಲೈಂಗಿಕ ದೌರ್ಜನ್ಯವನ್ನು ವಿಶ್ವಸಂಸ್ಥೆ ಮೂರು ವಿಧಗಳಲ್ಲಿ ವಿಂಗಡಿಸಿದೆ. 1. ಇದೊಂದು ಯುದ್ಧ ತಂತ್ರ, 2. ನಿರ್ದಿಷ್ಟ ಉದ್ದೇಶದೊಂದಿಗೆ ಸಾಮೂಹಿಕವಾಗಿ ನಡೆಸಲಾಗುವ ಕೃತ್ಯ. ಇಂಥ ಕೃತ್ಯಗಳನ್ನು ನಡೆಸಲು ದೇಶದ ನಾಯಕರು ಆಜ್ಞೆ ಕೊಟ್ಟಿರುವುದಿಲ್ಲ, ಆದರೆ, ಇಂಥ ಕೃತ್ಯ ನಡೆಸದಂತೆಯೂ ಹೇಳುವುದಿಲ್ಲ ಅಥವಾ ಇಂಥ ಕೃತ್ಯಗಳ ಕುರಿತು ಮೌನವಹಿಸುತ್ತಾರೆ. 3. ಅವಕಾಶವಿದ್ದಲ್ಲಿ ವ್ಯಕ್ತಿಗಳು ಸ್ವಇಚ್ಛೆಯಿಂದ ನಡೆಸುವ ಕೃತ್ಯ. ಉಕ್ರೇನ್, ಹೈಟಿ ಮತ್ತು ಇಥಿಯೋಪಿಯಾದಲ್ಲಿ ನಡೆಯುತ್ತಿರುವ ಯುದ್ಧಾಪರಾಧಗಳ ಕುರಿತು 2022ರಲ್ಲಿ ನೀಡಿರುವ ವರದಿಯಲ್ಲಿ ವಿಶ್ವ ಸಂಸ್ಥೆ ಈ ವಿಂಗಡಣೆಗಳನ್ನು ಪ್ರಸ್ತಾಪಿಸಿದೆ.

ಎರಡು ಜನಾಂಗ/ಎರಡು ಧಾರ್ಮಿಕ ಸಮುದಾಯಗಳ ಮಧ್ಯೆ ಸಂಘರ್ಷ ನಡೆಯುತ್ತಿದ್ದರೆ, ಮಹಿಳೆಯರನ್ನು ಗುರಿಯಾಗಿಸಿಕೊಂಡೇ ಹಿಂಸಾಚಾರ ನಡೆಸಲಾಗುತ್ತದೆ. ಮಹಿಳೆಯರ ಮೇಲೆ ಅತ್ಯಾಚಾರ ಎಸಗುವುದು ಅವರನ್ನು ಸಂಘರ್ಷ/ಹಿಂಸಾಚಾರದ ಸಾಧನವನ್ನಾಗಿ ಬಳಸಿಕೊಳ್ಳುವುದರ ಒಂದು ರೂಪ. ಹೀಗೆ ಅತ್ಯಾಚಾರ ಎಸಗುವ ಮೂಲಕ, ಆ ಸಮುದಾಯದ ಜನಾಂಗೀಯ ಶುದ್ಧತೆಯನ್ನು ನಾಶಮಾಡುವುದು ಅದರ ಉದ್ದೇಶ ಎಂದು 'ವುಮೆನ್ ಫಾರ್ ವುಮೆನ್ ಇಂಟರ್ ನ್ಯಾಷನಲ್' ಎಂಬ ಎನ್‌ಜಿಒ, ಯುದ್ಧಾಪರಾಧಗಳ ಕುರಿತ ತನ್ನ ಅಧ್ಯಯನ ವರದಿ ಯೊಂದರಲ್ಲಿ ಅರ್ಥೈಸಿದೆ. ಮಣಿಪುರದಲ್ಲಿ ಆಗಿದ್ದು ಕೂಡ ಇಂಥದ್ದೇ ವ್ಯವಸ್ಥಿತ ಕೃತ್ಯ.

ಈ ವಿಶ್ಲೇಷಣೆಗೆ ಪುಷ್ಟಿ ನೀಡುವಂತೆ ಮಣಿಪುರದ ಬೆತ್ತಲೆ ಮೆರವಣಿಗೆಯ ಕೃತ್ಯದಲ್ಲಿ ಭಾಗಿಯಾಗಿದ್ದ ಬಂಧಿತ ಹಿರೋದಾಸ್ ಅವರ ತಾಯಿ ಕೆ. ಲತಾದೇವಿ, ಸುದ್ದಿವಾಹಿನಿಯೊಂದಕ್ಕೆ ಪ್ರತಿಕ್ರಿಯೆ ನೀಡಿದ್ದರು. ಆ ತಾಯಿ, 'ಇಂಥ ಕೃತ್ಯದ ಬಗ್ಗೆ ಒಂದು ವಾರದ ಹಿಂದೆಯೇ ನನಗೆ ಮಾಹಿತಿ ಸಿಕ್ಕಿತ್ತು. ಆಗ ನಾನು ನನ್ನ ಮಗನನ್ನು ಈ ಕುರಿತು ಪ್ರಶ್ನಿಸಿದೆ. ನಾನು ಇಂಥದೊಂದು ಕೃತ್ಯ ಎಸಗಿರುವುದಾಗಿ ಅವನು ಒಪ್ಪಿಕೊಂಡ. ಆದರೆ, 'ಇಂಥ ಕೃತ್ಯವನ್ನು ನಾನು ವೈಯಕ್ತಿಕ ಕಾರಣಗಳಿಗಾಗಿ ಮಾಡಿಲ್ಲ. ಬದಲಿಗೆ ನನ್ನ ಸಮುದಾಯದ (ಮೈತೇಯಿ) ಹಿತದೃಷ್ಟಿಯಿಂದ ಮಾಡಿದ್ದೇನೆ' ಎಂದು ಮಗ ಹೇಳಿದ' ಎಂದಿದ್ದರು. ತಮ್ಮ ಮಗ ತಪ್ಪು ಮಾಡಿದ್ದಾನೆ ಎಂದು ಹಿರೋದಾಸ್‌ನ ತಾಯಿ ಹೇಳಲಿಲ್ಲ, ಬದಲಿಗೆ ಮಗನ ಕೃತ್ಯವನ್ನು ಸಮರ್ಥಿಸಿಕೊಂಡರು. ಆ ತಾಯಿಯ ಸಂದರ್ಶನದ ವಿಡಿಯೊವನ್ನು ಹಲವರು ಹಂಚಿಕೊಂಡರು. ಆಕೆಯ ಸಮರ್ಥನೆಯ ಪರವಾಗಿ ಮತ್ತು ವಿರುದ್ಧವಾಗಿ ಚರ್ಚೆಗಳು ನಡೆದವು.

ಆದರೆ ಇನ್ನೊಂದೆಡೆ ಈ ಕೃತ್ಯದ ಕುರಿತ ಪ್ರತಿ ವಿಚಾರಣೆಯಲ್ಲೂ, ಇದು ಸಾಮಾನ್ಯ ಕೃತ್ಯ ಅಲ್ಲವೇ ಅಲ್ಲ. ಮಹಿಳೆಯನ್ನು ಹಿಂಸಾಚಾರದ ಅಸ್ತ್ರವನ್ನಾಗಿ ಬಳಸಿಕೊಂಡ ಕೃತ್ಯ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದೆ.

ಆಧಾರ: ಪಿಟಿಐ, ವಿಶ್ವಸಂಸ್ಥೆ ಯುದ್ಧಾಪರಾಧಗಳ ವರದಿ– 2002

ಅತ್ಯಾಚಾರವೇ ಅಸ್ತ್ರವಾದ ಕೃತ್ಯಗಳು

ಕೋಮು ಸಂಘರ್ಷ ಮತ್ತು ಯುದ್ಧದ ವೇಳೆ ಮಹಿಳೆಯರ ಮೇಲೆ ನಡೆಸುವ ಅತ್ಯಾಚಾರದ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಈ ಕೆಲವು ಹೇಳಿಕೆಗಳನ್ನು, ಘಟನಾವಳಿಗಳನ್ನು ನೆನಪಿಸಿಕೊಳ್ಳಬಹುದು.

- 'ಉಕ್ರೇನ್ ರಕ್ತವನ್ನು ಹಂಚಿಕೊಂಡ ಮಗು ಇನ್ನು ಮುಂದೆ ಜನಿಸಲೇಬಾರದು'– ಉಕ್ರೇನ್ ಮಹಿಳೆಯನ್ನು ಅತ್ಯಾಚಾರ ಮಾಡುವ ವೇಳೆ ರಷ್ಯಾ ಸೈನಿಕ ಹೇಳಿದ ಮಾತಿದು
- 'ಒತ್ತಾಯಪೂರ್ವಕವಾಗಿ ಬೆತ್ತಲೆಗೊಳಿಸುವುದು, ಸಾಮೂಹಿಕ ಅತ್ಯಾಚಾರ, ಸಾರ್ವಜನಿಕವಾಗಿ ಅತ್ಯಾಚಾರ ಮಾಡುವುದು, ಲೈಂಗಿಕ ಕಿರುಕುಳ, ಮಹಿಳೆಯರ ಎದೆಗಳನ್ನು ಕತ್ತರಿಸುವುದು, ಹೊಟ್ಟೆಗಳನ್ನು ಬಗೆದು ಸಂತಾನೋತ್ಪತ್ತಿ ಅಂಗಗಳನ್ನು ಸೀಳುವುದು, ಮುಸ್ಲಿಂ ಮಹಿಳೆಯರ ದೇಹಗಳ ಮೇಲೆ ಹಿಂದೂ ಧಾರ್ಮಿಕ ಚಿಹ್ನೆಯನ್ನು ಕೊರೆಯುವುದು'– ಇವು 2002ರ ಗೋಧ್ರಾ ಸಂದರ್ಭದಲ್ಲಿ ನಡೆದ ಘಟನೆಗಳು ಎಂದು ಅಂತರರಾಷ್ಟ್ರೀಯ ಸತ್ಯಶೋಧನಾ ಸಮಿತಿ ನೀಡಿದ ವರದಿಯಲ್ಲಿ ಉಲ್ಲೇಖವಾಗಿವೆ
- 'ಎಲ್‌ಟಿಟಿಇ ಸಂಘಟನೆಯ ಸದಸ್ಯೆ ಎಂದು ಆರೋಪಿಸಿ ಶ್ರೀಲಂಕಾ ಸೇನೆಯು ಸಿಕ್ಕ ಸಿಕ್ಕ ತಮಿಳು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದೆ. ತಾವು ಎಲ್‌ಟಿಟಿಇ ಸಂಘಟನೆಯ ಸದಸ್ಯೆ ಎಂದು ಒಪ್ಪಿಕೊಳ್ಳುವಂತೆ ಲೈಂಗಿಕ ಹಿಂಸೆ ನೀಡಲಾಗುತ್ತಿತ್ತು. ರಾತ್ರಿಯಿಂದ ಬೆಳಗಿನವರೆಗೆ ಅತ್ಯಾಚಾರ ನಡೆಸಲಾಗುತ್ತಿತ್ತು. ಶ್ರೀಲಂಕಾ ಸೇನೆಯಲ್ಲಿರುವವರು ಸಿಂಹಳೀಯರು. ತಮ್ಮ ಜನಾಂಗದ ದರ್ಪ ತೋರುವುದಕ್ಕಾಗಿಯೂ, ತಮಿಳರ ಮೇಲಿರುವ ಸಿಟ್ಟು ತೀರಿಸಿಕೊಳ್ಳುವುದಕ್ಕಾಗಿಯೂ ಇಂಥ ಕೃತ್ಯ ನಡೆಸುತ್ತಿದ್ದರು' ಎಂದು ಶ್ರೀಲಂಕಾ ಸೇನೆಯಿಂದ ಅತ್ಯಾಚಾರಕ್ಕೊಳಗಾದ ತಮಿಳು ಯುವತಿಯೊಬ್ಬರು ಹ್ಯೂಮನ್ ರೈಟ್ಸ್ ವಾಚ್ ಎನ್ನುವ ಸಂಸ್ಥೆಗೆ ನೀಡಿದ ಹೇಳಿಕೆಯಿದು

ಯುದ್ಧಾಪರಾಧ

ಜಗತ್ತಿನ ಮೊದಲನೇ ಹಾಗೂ ಎರಡನೇ ಯುದ್ಧದ ಸಂದರ್ಭದಲ್ಲಿಯೂ ಮಹಿಳೆಯರ ಮೇಲೆ ನಡೆಸಿದ ಅತ್ಯಾಚಾರವನ್ನು, ದೌರ್ಜನ್ಯವನ್ನು ಯುದ್ಧದ ಅಸ್ತ್ರವನ್ನಾಗಿಯೇ ಬಳಸಲಾಗಿದೆ. ಒತ್ತಾಯಪೂರ್ವಕವಾಗಿ ಬೆತ್ತಲು ಮಾಡುವುದು, ಅತ್ಯಾಚಾರ ಎಸಗುವುದು, ಅಪಹರಣ ಮಾಡುವುದು, ಲೈಂಗಿಕವಾಗಿ ಒತ್ತೆಯಾಳುವಾಗಿ ಇರಿಸಿಕೊಳ್ಳುವುದು, ಅಂಗವಿಕಲರನ್ನಾಗಿ ಮಾಡುವುದು, ಒತ್ತಾಯದ ಗರ್ಭಪಾತ ಮುಂತಾದ ಹಿಂಸೆಗಳನ್ನು ಮಹಿಳೆಯರಿಗೆ ನೀಡಲಾಗುತ್ತದೆ.

ರಾಜಕೀಯ ಮತ್ತು ಆರ್ಥಿಕ ದಿವಾಳಿತನದ ಕಾರಣಕ್ಕಾಗಿ 1992–95ರಲ್ಲಿ ಯುಗೊಸ್ಲಾವಿಯಾದಲ್ಲಿ ಜನಾಂಗೀಯ ಕಾರಣಕ್ಕಾಗಿ ಯುದ್ಧ ನಡೆದಿತ್ತು. ಈ ಅವಧಿಯಲ್ಲಿ ಸುಮಾರು 60 ಸಾವಿರ ಅತ್ಯಾಚಾರ ಪ್ರಕರಣಗಳು ದಾಖಲಾದವು. ಈ ಬಳಿಕವಷ್ಟೇ ಮಹಿಳೆಯರ ಮೇಲೆ ನಡೆಸುವ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರವನ್ನೂ ಯುದ್ಧಾಪರಾಧ ಎಂದು ಪರಿಗಣಿಸಬೇಕು ಎಂಬ ಒತ್ತಾಯ ತೀವ್ರವಾಯಿತು. ಆದರೂ, ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯವನ್ನು ಯುದ್ಧಾಪರಾಧ ಎಂದು ವಿಶ್ವಸಂಸ್ಥೆ ಘೋಷಿಸಿದ್ದು 2008ರಲ್ಲಿ.

ಹೀಗೆ ನಡೆಯುವ ಸಾವಿರಾರೂ ಅತ್ಯಾಚಾರ ಪ್ರಕರಣಗಳು ಸಾಮಾಜಿಕ ಕಾರಣಗಳಿಗಾಗಿ ಬೆಳಕಿಗೇ ಬರುವುದಿಲ್ಲ. ಆದ್ದರಿಂದ ಪ್ರಕರಣಗಳ ನಿಖರ ಮಾಹಿತಿ, ಅಂಕಿ ಸಂಖ್ಯೆ ಲಭ್ಯವಾಗುವುದಿಲ್ಲ. ಇಂತಹ ಲೈಂಗಿಕ ದೌರ್ಜನ್ಯ, ಅತ್ಯಾಚಾರವು ಎಷ್ಟರ ಮಟ್ಟಿಗೆ ವ್ಯಾಪಿಸಿದೆ, ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಿದೆ, ಯಾರು ಇಂಥ ದೌರ್ಜನ್ಯಗಳನ್ನು ನಡೆಸುತ್ತಿದ್ದಾರೆ, ಯಾರು ಸಂತ್ರಸ್ತರು ಎಂಬುದರ ಮಾಹಿತಿ ನಿಖರವಾಗಿ ಸಿಗುವಂತಾಗುವವರೆಗೂ ಇಂಥ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವುದು ಕಷ್ಟಸಾಧ್ಯ ಎನ್ನುತ್ತಾರೆ ಆಸ್ಟ್ರೇಲಿಯಾದ ಮೊನಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಯೊಲಾಂಡಾ ರಿವೆರೋಸ್, ಮೊರೆಲ್ಸ್ ಹಾಗೂ ಜ್ಯಾಕ್ವಿ ಟ್ರೂ.

'ಜೈಲರ್' ಬಿಡುಗಡೆಗೆ ಉತ್ಸಾಹ

ರಜನಿಕಾಂತ್, ಶಿವರಾಜ್‌ಕುಮಾರ್, ಮೋಹನ್‌ಲಾಲ್ ಮುಖ್ಯಭೂಮಿಕೆಯಲ್ಲಿರುವ 'ಜೈಲರ್' ಚಿತ್ರ ಆಗಸ್ಟ್ 10ರಂದು ತೆರೆ ಕಾಣುತ್ತಿದೆ. ರಾಜ್ಯದ ಬಹುತೇಕ ಚಿತ್ರಮಂದಿರಗಳು ತಮಿಳಿನ ಈ ಚಿತ್ರ ಬಿಡುಗಡೆಗೆ ಉತ್ಸಾಹ ತೋರಿದ್ದು, ಕನ್ನಡ ಚಿತ್ರಗಳಿಗೆ ಚಿತ್ರಮಂದಿರ ಸಿಗದ ಸ್ಥಿತಿ ನಿರ್ಮಾಣಗೊಂಡಿದೆ. ನಟ ಜಗ್ಗೇಶ್, ಡಾಲಿ ಧನಂಜಯ್ ಅಭಿನಯದ 'ತೋತಾಪುರಿ–2' ಚಿತ್ರತಂಡ ಆ.11ಕ್ಕೆ ತೆರೆಗೆ ಬರುವುದಾಗಿ ಹೇಳಿತ್ತು. 'ಬಹುತೇಕ ಚಿತ್ರಮಂದಿರಗಳು ಜೈಲರ್ ಸಿನಿಮಾ ಪ್ರದರ್ಶನಕ್ಕೆ ಉತ್ಸುಕವಾಗಿವೆ. ಹೀಗಾಗಿ ಕನ್ನಡ ಸಿನಿಮಾಕ್ಕೆ ಶೋ ಸಿಗುವುದು ಕಷ್ಟವಾಗಿದೆ. ಹೀಗಾಗಿ ನಮ್ಮ ಚಿತ್ರ ಬಿಡುಗಡೆ ಕುರಿತು ಗೊಂದಲ ಬಗೆಹರಿದಿಲ್ಲ. ಇಂದು(ಆ.7) ಒಂದು ವಿತರಕ ತಂಡದ ಜೊತೆ ಸಭೆಯಿದೆ. ಅದರ ಬಳಿಕ ಚಿತ್ರ ಬಿಡುಗಡೆ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎನ್ನುತ್ತಾರೆ 'ತೋತಾಪುರಿ' ನಿರ್ಮಾಪಕ ಕೆ.ಎ.ಸುರೇಶ್.

ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದ 'ಜೈಲರ್' ತಮಿಳು ಅವತರಣಿಕೆಗೆ ಬೆಂಗಳೂರಿನಲ್ಲಿ ಈಗಾಗಲೇ 800ಕ್ಕೂ ಅಧಿಕ ಸ್ಕ್ರೀನ್ ಖಚಿತವಾಗಿದೆ. ಕನ್ನಡ ಡಬ್ ಆವೃತ್ತಿಗೆ 10ಕ್ಕಿಂತ ಕಡಿಮೆ ಸ್ಕ್ರೀನ್‌ಗಳಿವೆ. ಇದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶವೂ ವ್ಯಕ್ತವಾಗಿದೆ.

'ಜೈಲರ್' ಚಿತ್ರದಲ್ಲಿ ತಮನ್ನಾ, ರಜನಿಕಾಂತ್

'ಚೆನ್ನೈ ಎವಿ ಮೀಡಿಯಾ ಚಿತ್ರ ಬಿಡುಗಡೆ ಮಾಡುತ್ತಿದೆ. ಕರ್ನಾಟಕದಲ್ಲಿ ಅವರಿಂದ ನಾವು ಸಬ್ ರಿಲೀಸ್ ಮಾಡುತ್ತಿದ್ದೇವೆ. ದೊಡ್ಡ ಕನ್ನಡ ಸಿನಿಮಾ ಇಲ್ಲ. ಜೈಲರ್ ಕ್ರೇಜ್ ಹೆಚ್ಚಿದೆ. ಆದಾಗ್ಯೂ ಉತ್ತಮವಾಗಿ ಕಲೆಕ್ಷನ್ ಮಾಡುತ್ತಿರುವ ಕನ್ನಡ ಚಿತ್ರಗಳಿಗೆ ತೊಂದರೆಯಾಗುವುದಿಲ್ಲ. ಬುಧವಾರದ ಹೊತ್ತಿಗೆ 300 ಸಿಂಗಲ್ ಸ್ಕ್ರೀನ್ ಸೇರ್ಪಡೆಯಾಗಬಹುದು. 80ಕ್ಕಿಂತ ಹೆಚ್ಚು ಮಲ್ಟಿಪ್ಲೆಕ್ಸ್‌ಗಳು ಸೇರಿ ಮೊದಲ ದಿನವೇ ರಾಜ್ಯದಲ್ಲಿ 2000ಕ್ಕೂ ಅಧಿಕ ಪ್ರದರ್ಶನದ ನಿರೀಕ್ಷೆಯಿದೆ' ಎನ್ನುತ್ತಾರೆ ಜಯಣ್ಣ ಫಿಲ್ಮ್ಸ್‌ನ ಬೋಗೇಂದ್ರ.

ವರ್ಷಾಂತ್ಯದಲ್ಲಿ ಕಿಚ್ಚ #46 ತೆರೆಗೆ?

ಚೆನ್ನೈನ ಮಹಾಬಲಿಪುರಂ ಸಮೀಪ #46 ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿರುವ ಸುದೀಪ್, #46 ಹಾಗೂ ತಮ್ಮ ಮುಂದಿನ ಯೋಜನೆಗಳ ಕುರಿತು ಇತ್ತೀಚೆಗೆ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ್ದಾರೆ.

'ಈ ಸಿನಿಮಾ ನಿರ್ದೇಶಕ ವಿಜಯ್ ಕಾರ್ತಿಕೇಯ ಹಾಗೂ ನಿರ್ಮಾಣ ಸಂಸ್ಥೆಯವರು ತಮಿಳು ಸಿನಿಮಾ ಮಾಡುವ ಯೋಜನೆ ಹಾಕಿಕೊಂಡು ಬಂದಿದ್ದರು. ಕಥೆ ಕೇಳಿ ಕನ್ನಡದಲ್ಲೇ ಈ ಸಿನಿಮಾ ನಿರ್ಮಾಣ ಮಾಡಲು ತಿಳಿಸಿದೆ. ಕನ್ನಡದಲ್ಲೇ ಹಲವು ಸಿನಿಮಾ ರಾಷ್ಟ್ರವ್ಯಾಪಿ ತಲುಪಿದೆ. ಇದೂ ಹಾಗೆಯೇ ಆಗಲಿ ಎಂದೆ. ತಮಿಳು ಹಾಗೂ ಕನ್ನಡದಲ್ಲಿ ಏಕಕಾಲದಲ್ಲಿ ಶೂಟಿಂಗ್ ಇಂದಿನ ದಿನಗಳಲ್ಲಿ ಅಗತ್ಯವೂ ಇಲ್ಲ ಎಂದೆ. ನನ್ನ ಮಾತಿಗೆ ಅವರು ಒಪ್ಪಿಗೆ ಸೂಚಿಸಿದರು. ಬಹುತೇಕ ತಮಿಳು ತಂತ್ರಜ್ಞರ ತಂಡವೇ ಅವರ ಪಟ್ಟಿಯಲ್ಲಿತ್ತು. ನಾನು ಅವರ ಬದಲಾಗಿ ಅಜನೀಶ್ ಲೋಕನಾಥ್, ಶೇಖರ್ ಚಂದ್ರ ಮುಂತಾದ ಕನ್ನಡ ತಂತ್ರಜ್ಞರ ಹೆಸರು ಸೂಚಿಸಿದೆ. ಇದೇ ಕಾರಣಕ್ಕಾಗಿ ಇಂದು ತಮಿಳುನಾಡಿನಲ್ಲಿ ಶೂಟಿಂಗ್ ನಡೆಯುತ್ತಿದ್ದರೂ, ತಂಡದ ಶೇ 90 ಜನ ಕನ್ನಡಿಗರಿದ್ದಾರೆ. ಬಹುತೇಕ ಕಲಾವಿದರೂ ಕನ್ನಡಿಗರೇ. ಇಲ್ಲಿನ ಕೈಗಾರಿಕೆಗಳ ಬ್ಯಾಕ್ ಡ್ರಾಪ್‌ನಲ್ಲಿ ಬೃಹತ್ ಸೆಟ್ ನಿರ್ಮಾಣ ಮಾಡಿ ಶೂಟಿಂಗ್ ನಡೆಯುತ್ತಿದೆ. ಬಳಿಕ ಪಾಂಡಿಚೇರಿ ಸೇರಿ ಕೆಲವು ಕಡೆ ಶೂಟಿಂಗ್ ಇರಲಿದೆ. ಇದೇ ವರ್ಷ ಈ ಸಿನಿಮಾವನ್ನು ತೆರೆಗೆ ತರುವ ಹಠದಲ್ಲಿ ನಾನಿದ್ದೇನೆ' ಎಂದರು ಸುದೀಪ್.

ಈ ತಿಂಗಳು ಪೂರ್ತಿ ಚೆನ್ನೈನಲ್ಲೇ ಶೂಟಿಂಗ್‌ನಲ್ಲಿ ತೊಡಗಿಸಿಕೊಳ್ಳಲಿರುವ ಸುದೀಪ್, ಜನ್ಮದಿನದ (ಸೆ. 2) ಸಂದರ್ಭದಲ್ಲಿ ಬೆಂಗಳೂರಿಗೆ ಮರಳಲಿದ್ದಾರೆ. ನಂತರ ಮತ್ತೆ #46 ಶೂಟಿಂಗ್ ಸೆಟ್‌ಗೆ ತೆರಳಲಿದ್ದಾರೆ.



ಸುದೀಪ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಮ್ಮ ಪ್ರದೇಶದಿಂದ ಬೇರೆ ಪ್ರದೇಶಕ್ಕೆ ಭದ್ರತೆಗೆಂದು ತೆರಳುತ್ತಿರುವ ಅಸ್ಸಾಂ ರೈಫಲ್ಸ್‌ನ ಅಧಿಕಾರಿಯನ್ನು ಉದ್ದೇಶಿಸಿ, 'ನಮ್ಮನ್ನು ಬಿಟ್ಟು ತೆರಳಬೇಡಿ' ಎಂದು ಮಹಿಳೆಯರು ಗೋಗರೆಯುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಡುತ್ತಿದೆ. 'ಈ ವಿಡಿಯೊದಲ್ಲಿ ಇರುವವರು ಮೈತೇಯಿ ಹಿಂದೂ ಸಮುದಾಯದ ಮಹಿಳೆಯರು. ಇವರನ್ನು ರಕ್ಷಿಸಿ' ಎಂದು ವಿಡಿಯೊದೊಂದಿಗೆ ಬರಹವನ್ನೂ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಈ ವಿಡಿಯೊದಲ್ಲಿ ಇರುವವರು ಮೈತೇಯಿ ಸಮುದಾಯದ ಮಹಿಳೆಯರಲ್ಲ. ಬದಲಿಗೆ ಕುಕಿ ಬುಡಕಟ್ಟು ಸಮುದಾಯದ ಮಹಿಳೆಯರು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದ ಪೂರ್ಣ ವಿಡಿಯೊ ದೊರೆಕಿದ್ದು, ಇದರಲ್ಲಿ ಅಸ್ಸಾಂ ರೈಫಲ್ಸ್‌ನ ಅಧಿಕಾರಿ ಮಾತನಾಡಿರುವ ಭಾಗವೂ ಸೇರಿದೆ. 'ನಾವು ನಾಳೆ ಚುರಾಚಾಂದ್‌ಪುರಕ್ಕೆ ಹೋಗುವುದು ನಿಮ್ಮ ಸಮುದಾಯವನ್ನು ರಕ್ಷಿಸುವ ಸಲುವಾಗಿಯೇ. ಮೈತೇಯಿ ಸಮುದಾಯದವರು ನಿಮಗೆ ಏನನ್ನು ಮಾಡುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಜೊತೆಗೆ, ಮೈತೇಯಿ ಅವರನ್ನೂ ರಕ್ಷಿಸಬೇಕಲ್ಲವೇ' ಎಂದು ಅವರು ಹೇಳಿದ್ದಾರೆ. ಈ ಬಗ್ಗೆ 'ದಿ ಟೆಲಿಗ್ರಾಫ್', 'ಹಿಂದೂಸ್ತಾನ್ ಟೈಮ್ಸ್' ಹಾಗೂ 'ಟೈಮ್ಸ್ ನೌ' ವರದಿ ಮಾಡಿದೆ. ಆದ್ದರಿಂದ, ಅಸ್ಸಾಂ ರೈಫಲ್ಸ್‌ನ ಅಧಿಕಾರಿಯನ್ನು ಬೇರೆಡೆ ಹೋಗದಂತೆ ಗೋಗರೆಯುತ್ತಿರುವುದು ಮೈತೇಯಿ ಮಹಿಳೆಯರು ಅಲ್ಲ, ಕುಕಿ ಬುಡಕಟ್ಟು ಸಮುದಾಯದ ಮಹಿಳೆಯರು ಎಂದು 'ಇಂಡಿಯಾ ಟುಡೆ' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆಳಗಿನ ಬೆಳಕು

ಗುರುರಾಜ ಕರಜಗಿ

ಒಂದೇ ಬೇಡಿಕೆ

ಬೇಡಿದುದನೀವನೀಶ್ವರನೆಂಬ ನಚ್ಚಿಲ್ಲ |
ಬೇಡಲೊಳಿತಾವುದೆಂಬುದರರಿವುಮಿಲ್ಲ ||
ಕೂಡಿ ಬಂದುದನೆ ನೀನ್ ಅವನಿಚ್ಛೆಯೆಂದುಕೊಳೆ |
ನೀಡುಗೆದೆಗಟ್ಟಿಯನು – ಮಂಕುತಿಮ್ಮ || 943 ||

ಪದ-ಅರ್ಥ: ಬೇಡಿದುದನೀವನೀಶ್ವರನೆಂಬ = ಬೇಡಿದುದನು + ಈವನು(ಕೊಡುವನು) + ಈಶ್ವರನು + ಎಂಬ, ನಚ್ಚಿಲ್ಲ = ನಂಬಿಕೆಯಿಲ್ಲ, ಬೇಡಲೊಳಿತಾವುದೆಂಬುದರರಿವುಮಿಲ್ಲ = ಬೇಡಲು + ಒಳಿತಾವುದು + ಎಂಬುದರ + ಅರಿವು + ಇಲ್ಲ, ಅವನಿಚ್ಛೆಯೆಂದುಕೊಳೆ = ಅವನ + ಇಚ್ಛೆ + ಎಂದು + ಕೊಳೆ, ನೀಡುಗೆದೆಗಟ್ಟಿಯನು = ನೀಡುಗೆ (ನೀಡಲಿ) + ಎದೆ + ಗಟ್ಟಿಯನು.

ವಾಚ್ಯಾರ್ಥ: ನಾವು ಬೇಡಿದ್ದನ್ನು ಈಶ್ವರ ನೀಡುತ್ತಾನೆಂಬ ನಂಬಿಕೆಯಿಲ್ಲ. ಬೇಡಲು ಯಾವುದು ಒಳಿತು ಎನ್ನುವುದರ ಅರಿವೂ ಇಲ್ಲ. ಯಾವುದು ಕೂಡಿ ಬರುತ್ತದೋ ಅದನ್ನೇ ಈಶ್ವರನ ಇಚ್ಛೆಯೆಂದು ಅನುಭವಿಸು. ಅದಕ್ಕೆ ಎದೆಯನ್ನು ಗಟ್ಟಿ ಮಾಡು ಎಂದು ಬೇಡು.

ವಿವರಣೆ: ಭಗವಂತನನ್ನು ನಾವು ನಿತ್ಯವೂ ಬೇಡುತ್ತಲೇ ಇರುತ್ತೇವೆ. ನಮ್ಮ ಬೇಡಿಕೆಯ ಪಟ್ಟಿಗೆ ಅಂತ್ಯವೇ ಇಲ್ಲ. ಆದರೆ ಭಗವಂತ ನಾವು ಕೇಳಿದ್ದನ್ನೆಲ್ಲ ಕೊಡುತ್ತಾನೆಯೆ? ಬಹುಶ: ನಾವು ಮಾಡಿದ ಕರ್ಮಗಳಿಗೆ ಸರಿಯಾದ ಫಲವನ್ನು ಮಾತ್ರ ಕೊಡುತ್ತಾನೆ.

ಅದು ಮಾತ್ರವಲ್ಲ, ನಮಗಾಗಿ ಏನು ಬೇಡಿಕೊಳ್ಳಬೇಕೆಂಬುದರ ಅರಿವೂ ನಮಗಿಲ್ಲ. ಯಾವುದನ್ನು ಬೇಡಿದರೆ ಒಳ್ಳೆಯದು ಎಂದುಕೊಳ್ಳುತ್ತೇವೋ ಅದು ನಮಗೆ ಆಪತ್ತನ್ನೇ ತರಬಹುದು. ಪುರಾಣ, ಇತಿಹಾಸಗಳಲ್ಲಿ ಇಂಥ ಅನೇಕ ಬೇಡಿಕೆಗಳು ಶಾಪಗಳಾದುವನ್ನು ಓದಿದ್ದೇವೆ. ಭಸ್ಮಾಸುರ ಬೇಡಿದ ವರ ಅವನನ್ನೇ ಸುಟ್ಟಿತು. ಹಿರಣ್ಯಕಶಿಪು ಅತಿಯಾದ ಬುದ್ಧಿವಂತಿಕೆಯಿಂದ ಬೇಡಿದ ವರಕ್ಕೆ ಸರಿಯಾಗಿ ಅಷ್ಟೇ ಬುದ್ಧಿವಂತಿಕೆಯಿಂದ ಭಗವಂತ ಮರಣ ತಂದ. ನನ್ನ ಗೆಳೆಯರೊಬ್ಬರಿಗೆ ಬೆಟ್ಟದ ಮೇಲಿರುವುದು ಬಹಳ ಇಷ್ಟ. ಅದಕ್ಕಾಗಿ ಮೇಲಧಿಕಾರಿಗಳನ್ನು ಕಾಡಿ, ಬೇಡಿ ಮಡಿಕೇರಿಗೆ ವರ್ಗಮಾಡಿಸಿಕೊಂಡರು. ಬೆಟ್ಟದ ತುದಿಯ ಮೇಲೊಂದು ಮನೆ ತೆಗೆದುಕೊಂಡು ತಮ್ಮ ಕನಸು ಈಡೇರಿತೆಂದು ಸಂತೋಷಪಟ್ಟರು. ಮುಂದೆ ಮೂರು ತಿಂಗಳಿಗೆ ವಿಪರೀತ ಮಳೆಯಾಗಿ, ಬೆಟ್ಟ ಕುಸಿದು, ಮನೆ ಮುರಿದು ಹೋಗಿ, ತೀರಿ ಹೋದರು. ಅವರು ಬೇಡಿದ್ದು ವರವೋ ಶಾಪವೋ?

ಅದಕ್ಕೆ ಕಗ್ಗ ಹೇಳುತ್ತದೆ, ನಾವು ಕೇಳಿದ್ದನ್ನು ಭಗವಂತ ಕೊಡುತ್ತಾನೆ ಎಂಬ ಖಾತ್ರಿ ಇಲ್ಲ. ನಾವು ಬೇಡುವುದು ನಮಗೆ ಒಳ್ಳೆಯದೊ, ಕೆಟ್ಟದ್ದೋ ಎಂಬುದೂ ತಿಳಿದಿಲ್ಲ. ಹಾಗಾದರೆ ಏನು ಮಾಡಬೇಕು? ಭಗವಂತನಲ್ಲಿ ಏನನ್ನೂ ಬೇಡುವುದು ಬೇಡ. ಅವನು ನಮ್ಮ ಕರ್ಮಕ್ಕೆ ತಕ್ಕ ಫಲವನ್ನು ಕೊಡುತ್ತಾನೆ ಎಂದುಕೊಂಡು ಪ್ರಾಮಾಣಿಕ ಕಾರ್ಯಗಳನ್ನು ಮಾಡುತ್ತ, ಬಂದದ್ದನ್ನೇ ಅವನ ಇಚ್ಛೆ ಎಂದು ಅನುಭವಿಸಬೇಕು. ಏನು ಬಂದರೂ ಅದು ಅವನ ಕೃಪೆ ಎಂದು ಭಾವಿಸು. ಬೇಡುವುದಿದ್ದರೆ ಒಂದನ್ನು ಮಾತ್ರ ಬೇಡು. 'ಭಗವಂತಾ, ನೀನು ನೀಡಿದ್ದು ನನಗೆ ಒಪ್ಪಿತ. ಆದರೆ ಬಂದದ್ದನ್ನು ಎದುರಿಸಲು ಧೈರ್ಯಕೊಡು, ನನ್ನ ಎದೆಯನ್ನು ಗಟ್ಟಿ ಮಾಡು'. ಅದೊಂದೇ ಬೇಡಿಕೆ ಸಾಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಸೋಮವಾರ ಆಗಸ್ಟ್ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಸಪ್ತಮಿ ಗಂ. 28-15
ನಕ್ಷತ್ರ: ಅಶ್ವಿನಿ ಗಂ. 25-16 ಯೋಗ: ಶೂಲ ಗಂ. 18-16
ಕರಣ: ವಿಷ್ಟಿ ಗಂ. 16-42, ಕರ್ಕಾಟಕ ಮಾಸದ 21 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2.
ರಾಹುಕಾಲ : ಬೆಳಗ್ಗೆ 07-30 - 09-00 ಸರ್ಯೋದಯ : 06-20 ಸರ್ಯಾಸ್ತ : 06-52 ಮುಸ್ಲಿಂ ದಿನಾಂಕ : 19 ಮೊಹರಮ್
ಅದೃಷ್ಟ ಸಂಖ್ಯೆ : 8, 6

ಮೇಷ: ಮಕ್ಕಳ ಭವಿಷ್ಯದ ಕುರಿತಾಗಿ ಆಳವಾದ ಚಿಂತನೆ ನೆಡೆಸುವಿರಿ. ಇಂದು ನಿಮ್ಮ ಎಲ್ಲಾ ಆಲೋಚನೆಗಳಿಗೂ ಸಂಗಾತಿಯ ಸಂಪೂರ್ಣ ಬೆಂಬಲ ಇರುವುದು. ಸಾಲದ ರೂಪದಲ್ಲಿ ಕೊಟ್ಟ ಹಣ ಮರಳುವ ಲಕ್ಷಣಗಳು ಇವೆ.

ವೃಷಭ: ಹೊಸ ಕನಸು ಹಾಗು ಉತ್ಸಾಹದಿಂದ ಕೆಲಸವನ್ನು ಶುರು ಮಾಡುವಿರಿ. ತಾಯಿಯ ಆರೋಗ್ಯ ಹದಗೆಟ್ಟಿದ್ದಲ್ಲಿ ಹಂತ ಹಂತವಾಗಿ ಚೇತರಿಕೆ ಉಂಟಾಗುವುದು. ಹಳೆಯ ಸಿಹಿ ಘಟನೆಗಳನ್ನು ಮೆಲಕು ಹಾಕುವಿರಿ.

ಮಿಥುನ: ನಿಮ್ಮ ಸ್ಥಿರ ಅಥವಾ ಚರ ಆಸ್ತಿಯನ್ನು ಮಾರಲು ಯೋಚನೆ ನೆಡೆಸಿದ್ದಲ್ಲಿ ಹಿರಿಯರಿಂದ ಸರಿಯಾದ ಮಾರ್ಗ ಕೇಳಿ ಪಡೆದುಕೊಳ್ಳಿ. ನಿಮಗೆ ಅಚಾನಕ್ಕಾಗಿ ಭೇಟಿಯಾದ ವ್ಯಕ್ತಿಯಿಂದ ಕೆಲವು ಪ್ರಯೋಜನಗಳಾಗಬಹುದು.

ಕರ್ಕಾಟಕ: ನಿಮಗಿಂತ ಸಣ್ಣ ವಯಸ್ಸಿನ ಮಕ್ಕಳ ಆಟೋಟಗಳನ್ನು ನೋಡಿ ಕಳೆದು ಹೋದ ದಿನಗಳನ್ನು ನೆನಪಿಸಿಕೊಳ್ಳುವಿರಿ. ಅಧಿಕ ಒತ್ತಡದ ಕೆಲಸದ ನಡುವೆಯೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ.

ಸಿಂಹ: ನಿಮ್ಮ ಮಾನಸಿಕ ಒತ್ತಡವು ಕಡಿಮೆಯಾಗದ ಹೊರತು ಇತರರೊಂದಿಗೆ ವಾಗ್ವಾದಕ್ಕೆ ಇಳಿಯಬೇಡಿ. ವ್ಯವಹಾರದಲ್ಲಿ ಗೆಳೆಯನ ಮಾತುಗಳನ್ನು ಕೇಳಿದರೆ ಲಾಭವಾಗುವುದು. ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಬರುವುದು ಶುಭ ತರುವುದು.

ಕನ್ಯಾ: ನೀವು ತೆಗೆದುಕೊಂಡ ದಿಟ್ಟ ಹೆಜ್ಜೆಗಳು ನಿಮ್ಮ ಯಶಸ್ಸಿನ ಕಡೆಗೆ ಕರೆದುಕೊಂಡು ಹೋಗುವುದು. ಕುಟುಂಬದ ಸದಸ್ಯರ ನಡುವೆ ಅನಗತ್ಯ ಚರ್ಚೆಗಳನ್ನು ಮಾಡಬೇಡಿ. ನಕಾರಾತ್ಮಕ ಚಿಂತೆಗಳಿಗೆ ಆಸ್ಪದ ಕೊಡಬೇಡಿ.

ತುಲಾ: ದಿನಗೂಲಿ ಕೆಲಸವನ್ನು ಮಾಡುವವರಿಗೆ ಈ ದಿನ ಸ್ವಲ್ಪ ಅಸ್ಥಿರತೆ ಕಾಡಬಹುದು. ನಿಮ್ಮ ಖರ್ಚುಗಳನ್ನು ಬಿಟ್ಟು ಕೆಲವು ಮನೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡಿಸುವುದಕ್ಕಾಗಿ ಖರ್ಚು ಮಾಡಬೇಕಾಗಿ ಬರುವುದು.

ವೃಶ್ಚಿಕ: ಸಂಜೆಯ ವೇಳೆಗೆ ತಾಯಿಯ ತವರು ಮನೆಯ ಕಡೆಯಿಂದ ಸಿಹಿ ಸುದ್ದಿಯನ್ನು ಕೇಳುವಿರಿ. ಕೆಲವೊಂದು ಸಮಾರಂಭದಲ್ಲಿ ನಿಮ್ಮ ಹಾಜರಿಯು ವಿಶೇಷವಾದ ಕಳೆ ತರುವುದು. ವಾತ ಪಿತ್ತಗಳ ದೋಷ ಉಂಟಾಗುವುದು.

ಧನು: ಮುಂಜಾಗರೂಕತೆ ಇಲ್ಲದೇ ಮಾಡಿದ ಕೆಲಸಗಳು ಅಪಾಯವನ್ನು ತಂದೊಡ್ಡಬಹುದು. ಸ್ವಾದವನ್ನು ಅರಸಿ ತಿಂದ ಆಹಾರವು ಅನಾರೋಗ್ಯಕ್ಕೆ ಕಾರಣವಾಗುವುದು. ನಿಮ್ಮ ಬಗ್ಗೆ ಹೆತ್ತವರಿಗೆ ಚಿಂತೆಯಾಗುವಂತೆ ಮಾಡಬೇಡಿ.

ಮಕರ: ಜೀವನದ ಎಲ್ಲ ರೀತಿಯ ಕ್ಷಣಗಳನ್ನು ಅನುಭವಿಸಿದ ನಿಮಗೆ ಇತರರಿಗೆ ಜೀವನವನ್ನು ಹೇಳಿಕೊಡುವುದು ಕಷ್ಟವಾಗುವುದಿಲ್ಲ. ಆದಾಯಕ್ಕೆ ಹೊಸ ಮೂಲಗಳನ್ನು ಹುಡುಕುವಿರಿ. ನೂತನ ವಸ್ತ್ರ ಧಾರಣೆ ಖುಷಿ ಕೊಡುವುದು.

ಕುಂಭ: ಬಹು ಕಾಲದಿಂದ ಎದುರು ನೋಡುತ್ತಿದ್ದ ಜೀವನವನ್ನು ಅನುಭವಿಸುವ ಸಮಯ ಹತ್ತಿರವಿದೆ. ಭಾವನಾತ್ಮಕವಾಗಿ ಸ್ನೇಹಿತರು ಹಾಗೂ ಕುಟುಂಬದವರ ಸಹಕಾರ ಸಿಗಲಿದೆ. ಆರ್ಥಿಕವಾಗಿ ಸದೃಢವಾಗಲಿದ್ದೀರಿ.

ಮೀನ: ನಿಮ್ಮ ಧ್ಯೇಯಗಳನ್ನು ಪಸರಿಸುವ ಕೆಲಸ ಮಾಡುವಿರಿ. ಕಾರಣಾಂತರದಿಂದ ಇಂದು ಕೆಲ ವ್ಯಕ್ತಿಗಳನ್ನು ನಿರ್ಲಕ್ಷಿಸುವಿರಿ. ಅಕ್ಕ ಪಕ್ಕದವರಿಗೆ ನಿಮ್ಮ ಸಂಪತ್ತು ಅನುಭವಿಸುವ ಚಟ ಉಂಟಾಗವುದು.

ಪದಬಂಧ 5403

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ತರ್ಕ ಮಾಡುತ್ತಿರುವ ಹಂಚಿಕೆದಾರ (4)
3.ಒಳ್ಳೆಯ ಬುದ್ಧಿ (3)
5.ಕರುವಿಗೆ ತೋರಿದ ದಯೆ (3)
7.ಪಾಯ ತೋಡುವಾಗ ಹೂಡಿದ ಯುಕ್ತಿ (3)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
11.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12.ಮೈಸೂರು ಎಂದಾಗ ನೆನಪಾಗುವ ಹೂವು (3)
15.ನಗ ಖರೀದಿಗೆ ತಕ್ಕುದಾದ ಷಹರು (3)
16.ದಾಯಾದಿ ಮನೆಹತ್ತಿರ ಕೂಡಿರುವ ಗುಂಪು (4)

ಮೇಲಿಂದ ಕೆಳಕ್ಕೆ
1.ಪ್ರತಿಕೂಲವಾದುದನ್ನು ಹೀಗೆನ್ನಿ (3)
2.ಕೆಮ್ಮಿದಾಗ ಹೊರ ಬೀಳುವ ಶ್ಲೇಷ್ಮ (2)
3.ಯಮನ ಹತ್ತಿರ ಕಳೆದ ಕಾಲ (3)
4.ಪ್ರತಿಯಾಗಿ ಹೇಳುವ ಮಂತ್ರ (4)
6.ಕಾಯ ಬಗ್ಗಿಸಿ ಮಾಡಿದ ಕೆಲಸವಿಲ್ಲಿ ಉಲ್ಟಾ ಆಗಿದೆ (3)
7.ಕನ್ನಡಿಗನು ನೀಡಿದ ಎಕ್ಸಾಂಪಲ್! (5)
9.ತಿರುಗಿದಾಗ ಸಾವು ಕಾಣಿಸಿದೆಯಲ್ಲಾ (3)
10.ಕೊನೆಗೆ ಮರ್ಯಾದೆಯನ್ನಿಟ್ಟು ಮಾಡಿರುವ ಹೋಲಿಕೆ (4)
11.ಹತ್ತು ನೂರಿದು (3)
13.ಇಳೆಯ ಹತ್ತಿರವಿರುವ ಮಿತ್ರ (3)
14.ವಂಚನೆಗೊಂದು ಪರ್ಯಾಯ ಪದ (2)



5402ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದ್ಧಕಂಕಣ 3.ಸುಮ್ಮಾನ
5.ಪೀಠ 6.ರಪ
8.ಪ್ರಧಾನ 9.ಪರಮಪದ
12.ಪಲ್ಲಂಗ 13.ಸರ
15.ಕಂಸ 16.ರಹಸ್ಯ
17.ವಾಚನಾಲಯ

ಮೇಲಿಂದ ಕೆಳಕ್ಕೆ:
1.ಬಲಿಪೀಠ 2.ಕಮ್ಮಾರ
4.ನಸುನಗು 7.ಪರಮಹಂಸ
8.ಪ್ರಸಾದ 9.ಪರಾಗ
10.ಅಪಸ್ವರ 11.ಸುಸಮಯ
14.ರತುಚ

ಸುಡೊಕು 5789

9				5		8	4	
			3		9			1
	4			1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5788 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

100 ಕೋಟಿ ದಾಟಿದ ರಿಲಯನ್ಸ್ ರಿಟೇಲ್ ವಹಿವಾಟು

ನವದೆಹಲಿ (ಪಿಟಿಐ): ರಿಲಯನ್ಸ್ ರಿಟೇಲ್ ಕಂಪನಿಯು 2022-23ನೇ ಹಣಕಾಸು ವರ್ಷದಲ್ಲಿ 100 ಕೋಟಿ ವಹಿವಾಟಿನ ಮೈಲಿಗಲ್ಲನ್ನು ದಾಟಿದೆ. ಗ್ರಾಹಕರ ಸಂಖ್ಯೆಯು 24.9 ಕೋಟಿ ತಲುಪಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ಈಚಿನ ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ. ವರ್ಷದಿಂದ ವರ್ಷಕ್ಕೆ ವಹಿವಾಟಿನಲ್ಲಿ ಶೇ 42ರಷ್ಟು ಹೆಚ್ಚಳ ಕಂಡುಬಂದಿದೆ ಎಂದು ತಿಳಿಸಿದೆ. 2022-23ರಲ್ಲಿ ರಿಲಯನ್ಸ್ ಡಿಜಿಟಲ್ ಕಾಮರ್ಸ್ ಮತ್ತು ಹೊಸ ವಹಿವಾಟುಗಳು ಒಟ್ಟು ವರಮಾನಕ್ಕೆ ಶೇ 18ರಷ್ಟು ಕೊಡುಗೆ ನೀಡಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವರ್ಷದ ಚಿರಸ್ಮರಣೆ

ಎನ್. ತಿಮ್ಮರಾಜು
(ಮಾ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಶಾಂತಿನಗರ)
ನಿಧನ: 07-08-2005
ಸದಾ ನಿಮ್ಮ ನೆನಪಿನಲ್ಲಿರುವ..
ಪತ್ನಿ–ಶ್ರೀಮತಿ ಮಂಜುಳ ತಿಮ್ಮರಾಜು ಮಕ್ಕಳು ಹಾಗೂ ಕುಟುಂಬವರ್ಗದವರು.

31ನೇ ವರ್ಷದ ಚಿರಸ್ಮರಣೆ

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾಸ್ಮರಿಸುವ.
ಪತ್ನಿ: ಕಮಲಮ್ಮ, ಮಕ್ಕಳು, ಮೊಮ್ಮಕ್ಕಳು
ಪಿ.ಎಲ್.ಕುಮಾರಸ್ವಾಮಿ
ನಿವೃತ್ತ ಜಿಲ್ಲಾ ನ್ಯಾಯಾಧೀಶರು

LOOKING FOR JOB OPPORTUNITY
Refer Classifieds on Wednesday

ಎನ್‌ಎಫ್‌ಒ: ತಗ್ಗಿದ ಆಸಕ್ತಿ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಕಂಪನಿಗಳು ಈ ವರ್ಷ ಹೊಸ ಫಂಡ್‌ಗಳನ್ನು ಆರಂಭಿಸುವತ್ತ (ಎನ್‌ಎಫ್‌ಒ) ಹೆಚ್ಚಿನ ಆಸಕ್ತಿ ತೋರಿಲ್ಲ ಎಂದು ಅಂಕಿ-ಅಂಶಗಳು ಹೇಳುತ್ತಿವೆ.

2023ರ ಏಳು ತಿಂಗಳಲ್ಲಿ ಎನ್‌ಎಫ್‌ಒಗಾಗಿ 59 ಕರಡು ದಾಖಲೆಪತ್ರಗಳು ಸಲ್ಲಿಕೆ ಆಗಿವೆ. ಕಳೆದ ವರ್ಷ 70 ದಾಖಲೆಪತ್ರಗಳು ಸಲ್ಲಿಕೆ ಆಗಿದ್ದವು ಎಂದು ಉದ್ಯಮ ವಲಯ ಮಾಹಿತಿ ನೀಡಿದೆ.

ಆಸ್ತಿ ನಿರ್ವಹಣಾ ಕಂಪನಿಗಳು ಹೊಸ ಯೋಜನೆಗಳನ್ನು ಬಿಡುಗಡೆ ಮಾಡುವ ಬದಲಾಗಿ ಹಾಲಿ ಇರುವ ಯೋಜನೆಗಳನ್ನು ನಿರ್ವಹಿಸಲು ಮತ್ತು ಅವುಗಳಿಗೆ ಉತ್ತೇಜನ ನೀಡಲು ಹೆಚ್ಚು ಗಮನ ಹರಿಸುತ್ತಿವೆ. ಈ ಕಾರ್ಯತಂತ್ರದಿಂದಾಗಿ ಹಾಲಿ ಹೂಡಿಕೆದಾರರಿಗೆ ಗಳಿಕೆಯನ್ನು ಹೆಚ್ಚಿಸಲು ಮತ್ತು ಆಸ್ತಿಯನ್ನು ಸ್ಥಿರ ಮಟ್ಟದಲ್ಲಿ ನಿರ್ಹಹಣೆ ಮಾಡಲು ಅನುಕೂಲ ಆಗಲಿದೆ ಎಂದು ಎಸ್‌ಎಎಸ್ ಆನ್‌ಲೈನ್‌ನ ಸ್ಥಾಪಕ ಮತ್ತು ಸಿಇಒ ಶ್ರೇಯ್ ಜೈನ್ ಹೇಳಿದ್ದಾರೆ.

ಸದ್ಯ ಮಾರುಕಟ್ಟೆಯು ದಾಖಲೆ ಮಟ್ಟವನ್ನು ತಲುಪುತ್ತಿರುವುದು ಸಹ ಎನ್‌ಎಫ್‌ಒ ಬಿಡುಗಡೆ ಮಾಡದೇ ಇರಲು ಕಾರಣವಾಗಿದೆ. ಮಾರುಕಟ್ಟೆಯು ಗರಿಷ್ಠ ಮಟ್ಟದಲ್ಲಿ ಇದ್ದಾಗ ಕುಸಿತದ ಸಾಧ್ಯತೆಯೂ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

2023ರಲ್ಲಿ ಈವರೆಗೆ ಎನ್‌ಎಫ್‌ಒ ಮೂಲಕ ₹20 ಸಾವಿರ ಕೋಟಿ ಸಂಗ್ರಹ ಅಗಿದೆ. 2022ರಲ್ಲಿ ₹62,187 ಕೋಟಿ ಮತ್ತು 2021ರಲ್ಲಿ ₹99,704 ಕೋಟಿ ಸಂಗ್ರಹ ಆಗಿತ್ತು.

ಸಂಪತ್ತು ಗಳಿಕೆಗೆ ಮಿಡ್‌ಕ್ಯಾಪ್ ಹೆದ್ದಾರಿ

ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಷೇರು ಮಾರುಕಟ್ಟೆಯಲ್ಲಿ ನೋಂದಾಯಿತ ಆಗಿರುವ ಸಾವಿರಾರು ಕಂಪನಿಗಳಲ್ಲಿ ಮ್ಯೂಚುವಲ್ ಫಂಡ್ ಕಂಪನಿಗಳು ಹೂಡಿಕೆ ಮಾಡುತ್ತವೆ. ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಕಂಪನಿಗಳಲ್ಲಿ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳು ಇವೆ. ಆದರೆ ಉತ್ತಮ ಬೆಳವಣಿಗೆಯ ಸಾಧ್ಯತೆ, ಹೆಚ್ಚು ಲಾಭಾಂಶ ತಂದುಕೊಡುವ ಸಾಮರ್ಥ್ಯದ ಕಾರಣಕ್ಕೆ ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಈಗ ಹೆಚ್ಚು ಚರ್ಚೆಯಲ್ಲಿವೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಮಿಡ್ ಕ್ಯಾಪ್ ಫಂಡ್‌ಗಳು ವಾರ್ಷಿಕ ಸರಾಸರಿ ಶೇಕಡ 16.79ರಷ್ಟು ಲಾಭ ಕೊಟ್ಟಿವೆ. ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್ ಅಂದರೆ ಏನು? ಅದು ಹೇಗೆ ಹಣ ವಿನಿಯೋಗ ಮಾಡುತ್ತದೆ? ಈ ಫಂಡ್‌ಗಳಲ್ಲಿ ಯಾರು ಹೂಡಿಕೆ ಮಾಡಬೇಕು? ಈ ಕುರಿತು ಮಾಹಿತಿ ತಿಳಿಯೋಣ.

ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್ ಅಂದರೆ ಏನು? ಷೇರು ಮಾರುಕಟ್ಟೆಯಲ್ಲಿ ಮೂರು ವರ್ಗಗಳಿಗೆ ಸೇರಿದ ಕಂಪನಿಗಳಿರುತ್ತವೆ. ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳು. ಹೆಸರೇ ಸೂಚಿಸುವಂತೆ ಲಾಜ್ ಕ್ಯಾಪ್ ಅಂದರೆ ಷೇರು ಮಾರುಕಟ್ಟೆಯಲ್ಲಿರುವ ಬೃಹತ್ ಕಂಪನಿಗಳು, ಮಿಡ್ ಕ್ಯಾಪ್ ಅಂದರೆ ಮಧ್ಯಮ ಗಾತ್ರ ಮತ್ತು ಸ್ಮಾಲ್ ಕ್ಯಾಪ್ ಅಂದರೆ ಸಣ್ಣ ಗಾತ್ರದ ಕಂಪನಿಗಳು. ಷೇರುಪೇಟೆಯಲ್ಲಿನ ಅಗ್ರ 100 ಕಂಪನಿಗಳು ಲಾರ್ಜ್ ಕ್ಯಾಪ್ ಎನಿಸಿಕೊಳ್ಳುತ್ತವೆ. 101ರಿಂದ 250ನೇ ಶ್ರೇಯಾಂಕದವರೆಗಿರುವ ಕಂಪನಿಗಳನ್ನು ಮಿಡ್ ಕ್ಯಾಪ್ ಎನ್ನಲಾಗುತ್ತದೆ. ಉಳಿದ ಕಂಪನಿಗಳು ಸ್ಮಾಲ್ ಕ್ಯಾಪ್ ವರ್ಗಕ್ಕೆ ಸೇರುತ್ತವೆ.

ಮಿಡ್ ಕ್ಯಾಪ್ ಕಂಪನಿಗಳಲ್ಲಿ ಮ್ಯೂಚುವಲ್ ಫಂಡ್ ಕಂಪನಿಗಳು ಹೂಡಿಕೆ ಹಣವನ್ನು ತೊಡಗಿಸಿದರೆ ಅದು ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್ ಆಗುತ್ತದೆ. ಸ್ಮಾಲ್ ಕ್ಯಾಪ್ ಕಂಪನಿಗಳಾಗಿದ್ದವು ಬೆಳವಣಿಗೆಯ ಮೂಲಕ ಕ್ರಮೇಣ ಮಿಡ್ ಕ್ಯಾಪ್, ಲಾರ್ಜ್ ಕ್ಯಾಪ್ ಕಂಪನಿಗಳಾಗಿ ರೂಪುಗೊಳ್ಳಲು ಪ್ರಯತ್ನಿಸುತ್ತಿರುತ್ತವೆ. ಆರ್ಥಿಕ ಪ್ರಗತಿ ಸಕಾರಾತ್ಮಕವಾಗಿರುವಾಗ ಮಿಡ್ ಕ್ಯಾಪ್ ಕಂಪನಿಗಳು ಲಾರ್ಜ್ ಕ್ಯಾಪ್ ಕಂಪನಿಗಳಿಗಿಂತ ವೇಗವಾಗಿ ಬೆಳೆಯುತ್ತವೆ. ಆರ್ಥಿಕ ಹಿಂಜರಿತವಿರುವಾಗ ಮಿಡ್ ಕ್ಯಾಪ್ ಕಂಪನಿಗಳು ಲಾರ್ಜ್ ಕ್ಯಾಪ್ ಕಂಪನಿಗಳಿಗಿಂತ ಕಡಿಮೆ ಬೆಳವಣಿಗೆ ಸಾಧಿಸುವ ಸಾಧ್ಯತೆ ಇರುತ್ತದೆ.

ಮಿಡ್ ಕ್ಯಾಪ್ ಕಂಪನಿಗಳಲ್ಲಿ ಯಾರು ಹೂಡಿಕೆ ಮಾಡಬೇಕು:

1. ದೀರ್ಘಾವಧಿ ಹೂಡಿಕೆ ಬಹಳ ಮುಖ್ಯ: ಮಿಡ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ದೀರ್ಘಾವಧಿ ಹೂಡಿಕೆ ಬಹಳ ಮುಖ್ಯ. 5ರಿಂದ 7 ವರ್ಷಗಳ ಹೂಡಿಕೆ ಸಮಯವಿದ್ದರೆ ಮಾತ್ರ ಈ ಫಂಡ್‌ಗಳಲ್ಲಿ ಹಣ ತೊಡಿಸುವುದು ಸೂಕ್ತ. ಸಹಜವಾಗಿ ಮಿಡ್ ಕ್ಯಾಪ್ ಕಂಪನಿಗಳು ಲಾರ್ಜ್ ಕ್ಯಾಪ್ ಕಂಪನಿಗಳಷ್ಟು ಸದೃಢವಾಗಿರುವುದಿಲ್ಲ. ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಮಿಡ್ ಕ್ಯಾಪ್ ಕಂಪನಿಗಳು ಚೇತರಿಸಿಕೊಳ್ಳಲು ಸಮಯ ತೆಗೆದುಕೊಳ್ಳುತ್ತವೆ. ಹಾಗಾಗಿ ಹೂಡಿಕೆದಾರರಿಗೆ ಇಲ್ಲಿ ಸಮಾಧಾನದಿಂದ ಕಾಯುವ ಗುಣವಿರಬೇಕು.

2. ರಿಸ್ಕ್ ತೆಗೆದುಕೊಳ್ಳಲು ತಯಾರಿರಬೇಕು: ಮಿಡ್ ಕ್ಯಾಪ್ ಫಂಡ್‌ಗಳು ಲಾರ್ಜ್ ಕ್ಯಾಪ್ ಫಂಡ್‌ಗಳಿಗಿಂತ ಹೆಚ್ಚು ರಿಸ್ಕ್ ಹೊಂದಿರುತ್ತವೆ. ರಿಸ್ಕ್ ಹೇಗೆ ಹೆಚ್ಚಿಗೆ ಇದೆಯೋ ಅದೇ ರೀತಿ ಲಾಭಾಂಶ ಗಳಿಕೆಯ ಸಾಧ್ಯತೆ ಮಿಡ್ ಕ್ಯಾಪ್‌ಗಳಲ್ಲಿ ಹೆಚ್ಚಿದೆ. ಹಾಗಾಗಿ, ಹೆಚ್ಚು ರಿಸ್ಕ್ ಹೆಚ್ಚು ಲಾಭ ಎನ್ನುವ ಲೆಕ್ಕಾಚಾರ ಒಪ್ಪುವವರು ಮಿಡ್ ಕ್ಯಾಪ್‌ಗಳನ್ನು ಪರಿಗಣಿಸಬಹುದು.

3. ಅಲ್ಪಾವಧಿಗೆ ಈ ಫಂಡ್ ಬೇಡ: ಮೂರು ತಿಂಗಳು, ಆರು ತಿಂಗಳು, ಒಂದು ವರ್ಷದ ಅವಧಿಯ ಹೂಡಿಕೆಗೆ ಮಿಡ್ ಕ್ಯಾಪ್ ಫಂಡ್‌ಗಳನ್ನು ಪರಿಗಣಿಸಬೇಡಿ. ಮಿಡ್ ಕ್ಯಾಪ್‌ಗಳಲ್ಲಿ ತ್ವರಿತ ಮತ್ತು ಹರಿತವಾದ ಏರಿಳಿತ ಕಂಡುಬರುವುದರಿಂದ ಅಲ್ಪಾವಧಿಗೆ ಹೂಡಿಕೆ ಮಾಡಿದರೆ ನಷ್ಟವಾಗುವ ಸಾಧ್ಯತೆ ಇರುತ್ತದೆ.

ಮಿಡ್ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಒಳಗಾಗಿ ನಗದೀಕರಣ ಮಾಡಿದರೆ ಗಳಿಕೆಯ ಮೇಲೆ ಶೇ 15ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ (ಎಸ್‌ಟಿಸಿಜಿ). ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ನಗದೀಕರಣ ಮಾಡಿದರೆ, ಲಾಭಾಂಶ ₹1 ಲಕ್ಷದ ಒಳಗಿದ್ದರೆ ತೆರಿಗೆ ಇರುವುದಿಲ್ಲ. ₹1 ಲಕ್ಷ ಮೀರಿದ ಲಾಭಾಂಶಕ್ಕೆ ಶೇ 10ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ (ಎಲ್‌ಟಿಸಿಜಿ).

ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳುವುದು ಮುಖ್ಯ. ಲಾರ್ಜ್ ಕ್ಯಾಪ್, ಮಿಡ್‌ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳ ಮಿಶ್ರಣ ನಿಮ್ಮ ಪೋರ್ಟ್‌ಫೋಲಿಯೊದಲ್ಲಿರಬೇಕು. ಐದರಿಂದ ಏಳು ವರ್ಷಗಳ ಹೂಡಿಕೆ ಅವಧಿಗೆ ನೀವು ಅಂಟಿಕೊಳ್ಳುವಿರಿ ಎಂದಾದರೆ ಮಿಡ್ ಕ್ಯಾಪ್ ಹೂಡಿಕೆ ಪರಿಗಣಿಸಬಹುದು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಸತತ ಎರಡನೇ ವಾರವೂ ಕುಸಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಕುಸಿದಿವೆ. ಆಗಸ್ಟ್ 4ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆಯಾಗಿವೆ. 65,721 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.66ರಷ್ಟು ಕುಸಿದಿದೆ. 19,517 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.65ರಷ್ಟು ತಗ್ಗಿದೆ. ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ ಉಂಟಾದ ಕಾರಣ ಷೇರುಪೇಟೆಯಲ್ಲಿ ಭಾರೀ ಕುಸಿತ ಉಂಟಾಯಿತು. ಆದರೆ ದೇಶಿ ಹೂಡಿಕೆದಾರರ ಖರೀದಿ ಉತ್ಸಾಹ, ಉತ್ತಮ ಮುಂಗಾರು, ಜಿಎಸ್‌ಟಿ ಸಂಗ್ರಹದಲ್ಲಿ ಜಿಗಿತ, ತ್ರೈಮಾಸಿಕ ಫಲಿತಾಂಶದಲ್ಲಿ ಕಂಪನಿಗಳ ನಿರೀಕ್ಷಿತ ಸಾಧನೆ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆಯ ಕುಸಿತದ ಪ್ರಮಾಣವನ್ನು ತಗ್ಗಿಸಿದವು.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4.2ರಷ್ಟು ಕುಸಿದಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4ರಷ್ಟು, ಎಫ್‌ಎಂಸಿಜಿ ಶೇ 1.7ರಷ್ಟು ಇಳಿಕೆಯಾಗಿವೆ. ನಿಫ್ಟಿ ಐ.ಟಿ ಶೇ 3ರಷ್ಟು ಮತ್ತು ಫಾರ್ಮಾ ಶೇ 2ರಷ್ಟು ಗಳಿಸಿಕೊಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,545.64 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹5,617.33 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ವೇದಾಂತ, ಅದಾನಿ ಗ್ರೀನ್ ಎನರ್ಜಿ, ಹೀರೊ ಮೋಟೊಕಾರ್ಪ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಜಾಜ್ ಫಿನ್‌ಸರ್ವ್, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಮತ್ತು ಡಿಎಲ್‌ಎಫ್ ಕುಸಿತ ಕಂಡಿವೆ. ಜೊಮಾಟೊ, ಟೆಕ್ ಮಹೀಂದ್ರ, ಇನ್ಫೊ ಎಜ್ ಇಂಡಿಯಾ, ಬಂಧನ್ ಬ್ಯಾಂಕ್, ಎಲ್‌ಐಸಿ, ಎಸ್‌ಆರ್‌ಎಫ್ ಮತ್ತು ಪೇಟಿಎಂ ಗಳಿಸಿಕೊಂಡಿವೆ.

ಮುನ್ನೋಟ: ಆಗಸ್ಟ್ 8ರಿಂದ 10ರವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ಜರುಗಲಿದೆ. ರೆಪೊ ಬಡ್ಡಿ ದರ ಹೆಚ್ಚಳದ ಬಗ್ಗೆ ರಿಸರ್ವ್ ಬ್ಯಾಂಕ್ ಯಾವ ನಿಲುವು ತಳೆಯಲಿದೆ ಎಂಬ ಕುತೂಹಲವಿದೆ. ಈ ವಾರ ಇಂಡಿಯಾ ಸಿಮೆಂಟ್ಸ್, ಗೋದ್ರೆಜ್ ಕನ್ಸ್ಯೂಮರ್ ಪ್ರಾಡಕ್ಟ್, ಇಂಡಿಗೋ ಪೇಂಟ್ಸ್, ಪಾಲಿಸಿ ಬಜಾರ್, ಟಾಟಾ ಕೆಮಿಕಲ್ಸ್, ಡಿಶ್ ಟಿವಿ, ಯುರೇಕಾ ಫೋಬ್ಸ್, ಹಿಂಡಾಲ್ಕೊ ಇಂಡಸ್ಟ್ರೀಸ್, ಜೆಟ್ ಏರ್‌ವೇಸ್, ಬರ್ಜರ್ ಪೇಂಟ್ಸ್, ಐಆರ್‌ಸಿಟಿಸಿ, ಟಾಟಾ ಪವರ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homepages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹485

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹271-508
ದ್ವಿತಳಿ (ಬಿ.ವಿ)	₹333-611

ಸುಧಾ, ಮಯೂರ ಓದಿರಿ

ಭಾರತೀಯ ರಿಸರ್ವ್ ಬ್ಯಾಂಕ್ ಮಾಹಿತಿ • ಇಳಿದ ಎನ್‌ಪಿಎ ಮೊತ್ತ

ಎಂಎಸ್‌ಎಂಇ: ತಗ್ಗಿದ ಸಾಲ ನೀಡಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತಿಂಗಳಲ್ಲಿ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆ ವಲಯಕ್ಕೆ ಬ್ಯಾಂಕ್‌ಗಳು ನೀಡುವ ಸಾಲದ ಬೆಳವಣಿಗೆ ಪ್ರಮಾಣ ಕುಸಿತ ಕಂಡಿದೆ.

ದೇಶದಲ್ಲಿ ಅತಿಹೆಚ್ಚು ಜನರಿಗೆ ಉದ್ಯೋಗ ನೀಡಿರುವ ಹೆಗ್ಗಳಿಕೆ ಎಂಎಸ್‌ಎಂಇ ವಲಯದ್ದು. ಬ್ಯಾಂಕ್‌ಗಳು ಹೆಚ್ಚಿನ ಸವಾಲನ್ನು ತಮ್ಮ ಮೇಲೆ ಎಳೆದುಕೊಳ್ಳಲು ಸಿದ್ಧವಿಲ್ಲದಿರುವ ಕಾರಣ, ಸಾಲ ನೀಡಲು ಮುಂದಾಗುತ್ತಿಲ್ಲ ಎಂದು ಎಂಎಸ್‌ಎಂಇ ವಲಯದ ಪ್ರಮುಖರು ಹೇಳಿದ್ದಾರೆ.

‘ಎಂಎಸ್‌ಎಂಇ ವಲಯದ ಉದ್ಯಮಗಳು ಸಾಲ ಪಡೆಯುವುದಕ್ಕೆ ಇರುವ ಅಡ್ಡಿಗಳು ಒಂದೆರಡಲ್ಲ. ಬ್ಯಾಂಕಿಂಗ್ ವ್ಯವಸ್ಥೆಯ ಧೋರಣೆಯೇ ನಿಜವಾದ ಅಡ್ಡಿ. ಬ್ಯಾಂಕಿಂಗ್ ವ್ಯವಸ್ಥೆಯು ಈ ವಲಯಕ್ಕೆ ನೀಡುವ ಯಾವುದೇ ಸಾಲವನ್ನು ಅನುತ್ಪಾದಕ ಎಂಬಂತೆ ಕಾಣುತ್ತಿದೆ’ ಎಂದು ಭಾರತೀಯ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅನಿಲ್ ಭಾರದ್ವಾಜ್ ದೂರಿದ್ದಾರೆ.

ಎಂಎಸ್‌ಎಂಇ ವಲಯಕ್ಕೆ ನೀಡಿರುವ ಸಾಲದಲ್ಲಿ ₹1.31 ಲಕ್ಷ ಕೋಟಿ ಅನುತ್ಪಾದಕ ಆಗಿದೆ. ಇದು ಮಾರ್ಚ್ ಅಂತ್ಯದವರೆಗಿನ ಮಾಹಿತಿ. ಹಿಂದಿನ ವರ್ಷದ ಮಾರ್ಚ್ ಅಂತ್ಯದಲ್ಲಿ ಅನುತ್ಪಾದಕ ಸಾಲದ ಮೊತ್ತವು ₹1.54 ಲಕ್ಷ ಕೋಟಿ ಆಗಿತ್ತು.

ಅಡಮಾನ ಇರಿಸುವಲ್ಲಿ ಸಮಸ್ಯೆ, ಸಾಲ ಪಡೆದು ಅದನ್ನು ತೀರಿಸಿದ ದೀರ್ಘಾವಧಿ ದಾಖಲೆಗಳು ಇಲ್ಲದಿರುವುದು ಹಾಗೂ ಹೆಚ್ಚಿನ ಬಡ್ಡಿ ದರವು ದೇಶದ ಎಂಎಸ್‌ಎಂಇ ವಲಯಕ್ಕೆ ಸಾಲ ಪಡೆಯುವಲ್ಲಿ ಇರುವ ಸಮಸ್ಯೆಗಳು ಎಂದು ಬಿಜ್2ಕ್ರೆಡಿಟ್ ಸಿಇಒ ರೋಹಿತ್ ಅರೋರ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಈ ವರ್ಷದ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ, ಎಂಎಸ್‌ಎಂಇ ವಲಯಕ್ಕೆ ಸಾಲ ಖಾತರಿ ಯೋಜನೆಯ ಅಡಿಯಲ್ಲಿ ₹5 ಕೋಟಿವರೆಗಿನ ಸಾಲಕ್ಕೆ ಖಾತರಿ ನೀಡುತ್ತಿದೆ. ಇದು ಈ ಮೊದಲು ₹2 ಕೋಟಿ ಮಾತ್ರ ಆಗಿತ್ತು.



ಹಣದುಬ್ಬರದ ಆತಂಕ: ಬಡ್ಡಿದರ ಯಥಾಸ್ಥಿತಿ ಸಂಭವ

ನವದೆಹಲಿ (ಪಿಟಿಐ): ಹಣದುಬ್ಬರದ ವಿಚಾರವಾಗಿ ಮುಂದುವರಿದಿರುವ ಕಳವಳ ಹಾಗೂ ಆರ್ಥಿಕ ಬೆಳವಣಿಗೆಯ ವೇಗವನ್ನು ಕಾಯ್ದುಕೊಳ್ಳಲು ಸಾಲದ ಮೇಲಿನ ಬಡ್ಡಿ ದರದಲ್ಲಿ ಸ್ಥಿರತೆ ತರುವ ಅಗತ್ಯವಿರುವ ಕಾರಣದಿಂದಾಗಿ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಬಾರಿಯೂ ಬಡ್ಡಿದರ ಬದಲಿಸದಿರುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಮಂಗಳವಾರದಿಂದ ಗುರುವಾರದವರೆಗೆ ಸಭೆ ಸೇರಲಿದೆ. ಬಡ್ಡಿದರ ವಿಚಾರವಾಗಿ ಸಭೆಯ ನಿರ್ಧಾರವನ್ನು ಗುರುವಾರ ಪ್ರಕಟಿಸಲಿದೆ. ಜಾಗತಿಕ ವಿದ್ಯಮಾನಗಳು ಸೇರಿದಂತೆ ಹಲವು ಅಂಶಗಳನ್ನು ಆರ್‌ಬಿಐ ಪರಿಗಣಿಸುತ್ತದೆ. ಜಾಗತಿಕ ಮಟ್ಟದಲ್ಲಿ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಳ ಮಾಡಿರುವುದರಿಂದ ಆಗಿರುವ ಪರಿಣಾಮಗಳನ್ನು ಆರ್‌ಬಿಐ ಗಮನಿಸಲಿದೆ ಎಂದು ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸ್ವರೂಪ್ ಕುಮಾರ್ ಸಹಾ ಹೇಳಿದ್ದಾರೆ.

ಒಟ್ಟಾರೆ ಪರಿಸ್ಥಿತಿಯನ್ನು ಅವಲೋಕಿಸಿದರೆ ಆರ್‌ಬಿಐ ಸದ್ಯ ಇರುವ ರೆಪೊ ದರ ಮಟ್ಟವನ್ನು ಹೀಗೆಯೇ ಉಳಿಸಿಕೊಳ್ಳಲಿದೆ. ಜಾಗತಿಕ ಪರಿಸ್ಥಿತಿಯು ಸ್ಥಿರವಾಗಿ ಮುಂದುವರಿದಲ್ಲಿ ಮುಂದಿನ ಎರಡರಿಂದ ಮೂರು ತ್ರೈಮಾಸಿಕಗಳಲ್ಲಿ ಆರ್‌ಬಿಐ ಬಡ್ಡಿ ದರವನ್ನು ಬದಲು ಮಾಡುವ ಸಾಧ್ಯತೆ ಇಲ್ಲ ಎಂದು ಸಹಾ ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್ ತಿಂಗಳಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟವಾದ ಶೇ 4.81ಕ್ಕೆ ತಲುಪಿದೆ. ಹೀಗಿದ್ದರೂ ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಗಿಂತ (ಶೇ 6) ಕಡಿಮೆ ಮಟ್ಟದಲ್ಲಿಯೇ ಇದೆ.

ಹಣದುಬ್ಬರದ ಒತ್ತಡ ಹೆಚ್ಚಾಗಿದೆ. ತರಕಾರಿ ದರವು ತೀವ್ರವಾಗಿ ಹೆಚ್ಚಾಗಿರುವುದರಿಂದ ಮುಂದಿನ ಎರಡರಿಂದ ಮೂರು ತಿಂಗಳುಗಳಲ್ಲಿ ಹಣದುಬ್ಬರವು ಶೇ 6ಕ್ಕಿಂತಲೂ ಮೇಲಕ್ಕೆ ಏರಿಕೆ ಕಾಣುವ ಸಾಧ್ಯತೆ ಇದೆ ಎಂದು ಕ್ವಾಂಟಮ್ ಎಎಂಸಿಯ ನಿಧಿ ನಿರ್ವಾಹಕ ಪಂಕಜ್ ಪಾಠಕ್ ಹೇಳಿದ್ದಾರೆ.

ಆದಿಯಾಲಾ ಬದಲು ಅಟಕ್ ಜೈಲಿನಲ್ಲಿ ಇಮ್ರಾನ್

ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ನ್ಯಾಯಾಲಯದ ಆದೇಶದ ಪ್ರಕಾರ ರಾವಲ್ಪಿಂಡಿಯ ಆದಿಯಾಲಾ ಜೈಲಿನಲ್ಲಿರಬೇಕಿತ್ತು. ಆದರೆ ಅಟಕ್ ನಗರದ ಜೈಲಿನಲ್ಲಿದ್ದಾರೆ ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ.

ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್ ಖಾನ್‌ಗೆ (70) ನ್ಯಾಯಾಲಯ ಮೂರು ವರ್ಷ ಜೈಲು ಶಿಕ್ಷೆ ವಿಧಿಸುತ್ತಿದ್ದಂತೆ, ಲಾಹೋರ್‌ನ ಅವರ ನಿವಾಸದಲ್ಲಿ ಶನಿವಾರ ಬಂಧಿಸಲಾಗಿತ್ತು.

ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷರನ್ನು ಇಸ್ಲಾಮಾಬಾದ್‌ನ ಪೊಲೀಸ್ ಮುಖ್ಯಸ್ಥರು ಬಂಧಿಸಬೇಕು ಎಂದು ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಹುಮಾಯೂನ್ ದಿಲಾವರ್ ಆದೇಶಿಸಿದ್ದರು. ಆದರೆ ಪಂಜಾಬ್ ಪೊಲೀಸರು ಇಮ್ರಾನ್‌ಖಾನ್ ಅವರನ್ನು ಬಂಧಿಸಿದ್ದಾರೆ.

ರಾವಲ್ಪಿಂಡಿಯ ಆದಿಯಾಲಾ ಜೈಲಿನಲ್ಲಿರಿಸಿ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದ್ದರೂ, ಭಾರಿ ಬಿಗಿ ಭದ್ರತೆಯೊಂದಿಗೆ ಅಟಕ್ ಜೈಲಿನಲ್ಲಿರಿಸಲಾಗಿದೆ ಎಂದು ‘ಡಾನ್’ ವರದಿ ಮಾಡಿದೆ.

‘ಭೇಟಿಗೆ ನಿಷೇಧ’– ಆರೋಪ: ಈ ಮಧ್ಯೆ, ಇಮ್ರಾನ್ ಖಾನ್ ಅವರನ್ನು ಭೇಟಿಯಾಗಲು ಜೈಲಿನ ಅಧಿಕಾರಿಗಳು ಅವಕಾಶ ನೀಡುತ್ತಿಲ್ಲ ಎಂದು ಪಾಕಿಸ್ತಾನ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷದ ಕಾರ್ಯಕರ್ತರು ಆರೋಪಿಸಿದ್ದಾರೆ.

‘ನ್ಯಾಯಾಲಯಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಹಾಕಿಸಿಕೊಳ್ಳಲಿಕ್ಕಾಗಿ ಇಮ್ರಾನ್ ಅವರ ಕಾನೂನು ಅಧಿಕಾರಿಗಳ ತಂಡ ಜೈಲಿಗೆ ತೆರಳಿತ್ತು. ಆದರೆ ಇಮ್ರಾನ್ ಖಾನ್ ಭೇಟಿಯಾಗಲು ಅಧಿಕಾರಿಗಳು ಬಿಡುತ್ತಿಲ್ಲ’ ಎಂದಿದ್ದಾರೆ.

ಜುಕರ್‌ಬರ್ಗ್– ಮಸ್ಕ್ ಕಾದಾಟ ‘ಎಕ್ಸ್’ನಲ್ಲಿ ನೇರ ಪ್ರಸಾರ

ಇಲಾನ್ ಮಸ್ಕ್

ನ್ಯೂಯಾರ್ಕ್ (ಎಪಿ): ಮಾರ್ಕ್ ಜುಕರ್‌ಬರ್ಗ್ ಮತ್ತು ತಮ್ಮ ನಡುವೆ ನಡೆಯಲಿರುವ ಕೇಜ್ ಮ್ಯಾಚ್ (ಪಂಜರದೊಳಗಿನ ಕಾದಾಟ) ಅನ್ನು ಸಾಮಾಜಿಕ ಮಾಧ್ಯಮವಾದ ‘ಎಕ್ಸ್’ನಲ್ಲಿ (ಟ್ವಿಟರ್) ನೇರ ಪ್ರಸಾರ ಮಾಡಲಾಗುವುದು ಎಂದು ಇಲಾನ್ ಮಸ್ಕ್ ಭಾನುವಾರ ಹೇಳಿದ್ದಾರೆ.

ಕೇಜ್ ಮ್ಯಾಚ್‌ನಲ್ಲಿ ಪರಸ್ಪರ ಮುಖಾಮುಖಿಯಾಗಲು ಈ ಇಬ್ಬರು ಟೆಕ್ ದೈತ್ಯರು ಜೂನ್ ತಿಂಗಳಲ್ಲಿ ಒಪ್ಪಿಗೆ ಸೂಚಿಸಿದ್ದರು.

ಫೇಸ್‌ಬುಕ್ ಸಂಸ್ಥಾಪಕ ಜುಕರ್ ಬರ್ಗ್ ಅವರು ಸಮರ ಕಲೆಯನ್ನು ಕಲಿತಿದ್ದು, ತಾವು ಮೊದಲ ಜಿಯು ಜಿಟ್ಸು ಟೂರ್ನಿ ಪೂರ್ಣಗೊಳಿಸಿರುವ ಬಗ್ಗೆ ಈ ವರ್ಷದ ಆರಂಭದಲ್ಲಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು.

ಭಾರ ಎತ್ತುವ ಮೂಲಕ ಕಾದಾಟಕ್ಕೆ ತರಬೇತಿ ಪಡೆಯುತ್ತಿದ್ದೇನೆ ಎಂದು ಮಸ್ಕ್ ಅವರು ಈಚೆಗೆ ಹೇಳಿದ್ದರು.

ಮಸ್ಕ್ ಮತ್ತು ಜುಕರ್‌ಬರ್ಗ್ ಅವರು ನಿಜವಾಗಿಯೂ ಕೇಜ್ ಮ್ಯಾಚ್‌ನಲ್ಲಿ ಸೆಣಸಲಿದ್ದಾರೆಯೇ ಎಂಬುದನ್ನು ಕಾದು ನೋಡಬೇಕಾಗಿದೆ. ಆದರೆ ಈ ಇಬ್ಬರ ಕೇಜ್ ಮ್ಯಾಚ್ ಒಪ್ಪಂದ ಮತ್ತು ಪೋಸ್ಟ್‌ಗಳು ತಮಾಷೆಯಾಗಿ ಗಮನ ಸೆಳೆದಿವೆ ಎಂದು ಮೂಲಗಳು ಹೇಳಿವೆ.

ಮುಂದಿನ ವಿಶ್ವ ಯುವ ದಿನ ದಕ್ಷಿಣ ಕೊರಿಯಾದಲ್ಲಿ: ಪೋಪ್

ಲಿಸ್ಬನ್ (ಎಪಿ): ‘ಕ್ಯಾಥೊಲಿಕರ ಪ್ರಮುಖ ಹಬ್ಬಗಳಲ್ಲಿ ಒಂದಾದ ‘ವಿಶ್ವ ಯುವ ದಿನ’ವು 2027ರಲ್ಲಿ ದಕ್ಷಿಣ ಕೊರಿಯಾದ ಸೋಲ್‌ನಲ್ಲಿ ನಡೆಯಲಿದೆ’ ಎಂದು ಪೋಪ್ ಫ್ರಾನ್ಸಿಸ್ ಅವರು ಭಾನುವಾರ ತಿಳಿಸಿದರು.

ಲಿಸ್ಬನ್‌ನಲ್ಲಿ ನಡೆದ ವಿಶ್ವ ಯುವ ದಿನದ ಕೊನೆಯ ದಿನ ಪೋಪ್ ಅವರು ಈ ಘೋಷಣೆ ಮಾಡಿದ್ದಾರೆ.

1995ರಲ್ಲಿ ಫಿಲಿಪ್ಪೀನ್ಸ್‌ನ ಮನಿಲಾದಲ್ಲಿ ಈ ಹಬ್ಬ ನಡೆದಿತ್ತು. ಅದರ ಬಳಿಕ, ಮತ್ತೆ 2027ರಲ್ಲಿ ಏಷ್ಯಾ ಖಂಡದ ರಾಷ್ಟ್ರವೊಂದಕ್ಕೆ ಈ ಹಬ್ಬದ ಆತಿಥ್ಯ ವಹಿಸುವ ಅವಕಾಶ ಬಂದಿದೆ.

ಸಂಕ್ಷಿಪ್ತ ಸುದ್ದಿ

ಪಾಕಿಸ್ತಾನ: ರೈಲು ಹಳಿ ತಪ್ಪಿ 30 ಸಾವು

ಕರಾಚಿ (ಪಿಟಿಐ): ಕರಾಚಿಯಿಂದ ರಾವಲ್ಪಿಂಡಿಗೆ ಹೋಗುತ್ತಿದ್ದ ರೈಲಿನ ಬೋಗಿಗಳು ಭಾನುವಾರ ಹಳಿ ತಪ್ಪಿದ್ದರಿಂದ 30 ಜನರು ಮೃತಪಟ್ಟಿದ್ದು, ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಜಾರಾ ಎಕ್ಸ್‌ಪ್ರೆಸ್ ರೈಲು ನವಾಬ್‌ಶಾ ಪ್ರದೇಶದ ಸರ್ಹರಿ ರೈಲು ನಿಲ್ದಾಣದ ಬಳಿ ಹಳಿ ತಪ್ಪಿ, ಅಪಘಾತಕ್ಕೀಡಾಗಿದೆ. ‘ತುರ್ತು ಕಾರ್ಯಾಚರಣೆಗೆ ಒತ್ತು ನೀಡಿದ್ದೇವೆ’ ಎಂದು ಪಾಕಿಸ್ತಾನ್ ರೈಲ್ವೆಯ ಡಿಎಸ್‌ಪಿ ತಿಳಿಸಿದ್ದಾರೆ.

ಪೂರ್ವ ಚೀನಾದಲ್ಲಿ ಭೂಕಂಪ: 21 ಮಂದಿಗೆ ಗಾಯ

ಬೀಜಿಂಗ್ (ಪಿಟಿಐ): ಪೂರ್ವ ಚೀನಾದಲ್ಲಿ ಭಾನುವಾರ ಭೂಕಂಪವಾಗಿದ್ದು, ರಿಕ್ಟರ್ ಮಾಪಕದಲ್ಲಿ 5.5 ತೀವ್ರತೆ ದಾಖಲಾಗಿದೆ. ಕಟ್ಟಡಗಳು ಕುಸಿದು 21 ಮಂದಿ ಗಾಯಗೊಂಡಿದ್ದಾರೆ.

ಪಿಂಗ್‌ಯುವಾನ್ ಕೌಂಟಿಯಲ್ಲಿ ಸಂಭವಿಸಿದ ಕಂಪನದಿಂದ ಬೀಜಿಂಗ್, ಟಿಯಾನ್‌ಜಿನ್ ನಗರಗಳಲ್ಲಿ ಮತ್ತು ಹೆನಾನ್ ಹಾಗೂ ಹೆಬೈ ಪ್ರಾಂತ್ಯಗಳಲ್ಲೂ ಕಂಪನದ ಅನುಭವವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs
General
ಪ್ರವಾಸ
Travel
ಭವಿಷ್ಯ
Astrology
Pilgrimage Tours

EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸ್ (DCTTC)
Nursery Teachers Training Course
Qual : PUC.
Post Graduation Diploma in Information Technology
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

DH ಪ್ರಜಾವಾಣಿ
JOB CORNER

BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply
For More Details Contact:
9731810277 | 9901641752
9845114560 | 9886213331
080- 45557163 | 45557164

ಸರ್ಕಾರ ಬಹಿಷ್ಕರಿಸಲು ಮೈತೇಯಿ ಸಮಿತಿ ನಿರ್ಧಾರ; ಪೊಲೀಸರಿಂದ ಶಸ್ತ್ರಾಸ್ತ್ರಗಳ ವಶ

ಮಣಿಪುರ: 15 ಮನೆಗಳಿಗೆ ಬೆಂಕಿ

ಇಂಫಾಲ್ (ಪಿಟಿಐ): ಸಂಘರ್ಷ ಪೀಡಿತ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ದುಷ್ಕರ್ಮಿಗಳು 15 ಮನೆಗಳಿಗೆ ಬೆಂಕಿ ಇಟ್ಟಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

ಉದ್ರಿಕ್ತ ಗುಂಪೊಂದು ಶನಿವಾರ ಸಂಜೆ ಲಂಗೋಲ್ ಗೇಮ್ಸ್ ಗ್ರಾಮದಲ್ಲಿ ಮನೆಗಳಿಗೆ ಬೆಂಕಿ ಇಟ್ಟಿದೆ. ಗುಂಪು ಚದುರಿಸಿ, ಪರಿಸ್ಥಿತಿಯನ್ನು ತಹಬದಿಗೆ ತರಲು ಭದ್ರತಾ ಸಿಬ್ಬಂದಿ ಅಶ್ರುವಾಯು ಪ್ರಯೋಗಿಸಿದರು. ಈ ಸಂದರ್ಭದಲ್ಲಿ ವ್ಯಕ್ತಿಯೊಬ್ಬರ ಕಾಲಿಗೆ ಗುಂಡೇಟು ತಗುಲಿತ್ತು. ಅವರನ್ನು ಪ್ರಾದೇಶಿಕ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ರಿಮ್ಸ್) ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಭಾನುವಾರ ಬೆಳಿಗ್ಗೆ ವೇಳೆಗೆ ಸ್ಥಳದಲ್ಲಿ ಪರಿಸ್ಥಿತಿ ಅಲ್ಪಮಟ್ಟಿಗೆ ಸುಧಾರಿಸಿದೆ. ಆದರೆ ನಿರ್ಬಂಧ ಮುಂದುವರಿದಿದೆ ಎಂದು ತಿಳಿಸಿದರು.

ಇಂಫಾಲ್ ಪೂರ್ವ ಜಿಲ್ಲೆಯ ಚೆಕಾನ್ ಪ್ರದೇಶದಲ್ಲೂ ದುಷ್ಕರ್ಮಿಗಳು ವಾಣಿಜ್ಯ ಕಟ್ಟಡಗಳು ಮತ್ತು ಸಮೀಪದ ಮೂರು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಕಾಂಗ್ಪೊಕ್ಪಿ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಮತ್ತು ದುಷ್ಕರ್ಮಿಗಳ ಮಧ್ಯೆ ಗುಂಡಿನ ಚಕಮಕಿ ನಡೆದಿದೆ. ವ್ಯಕ್ತಿಯೊಬ್ಬರನ್ನು ಬಂಧಿಸಿ, ಬಂದೂಕೊಂದನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದರು.

ಮೈತೇಯಿ ಮತ್ತು ಕುಕಿ ಸಮುದಾಯಗಳ ಮಧ್ಯೆ ಘರ್ಷಣೆ ಆರಂಭವಾದಾಗಿನಿಂದ ಈವರೆಗೆ ಸುಮಾರು 160 ಮಂದಿ ಮೃತ ಪಟ್ಟಿದ್ದಾರೆ.

ನವದೆಹಲಿಯ ಜಂತರ್ ಮಂತರ್‌ನಲ್ಲಿ ಮೈತೇಯಿ ಸಮುದಾಯದವರು ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಅಧಿವೇಶನಕ್ಕೆ ಕುಕಿ ಶಾಸಕರು ಗೈರು ಸಾಧ್ಯತೆ

ಕೋಲ್ಕತ್ತ (ಪಿಟಿಐ): ಹಿಂಸಾಚಾರ ಮುಂದುವರಿದಿರುವ ಕಾರಣ ಆ.21ರಿಂದ ಆರಂಭವಾಗಲಿರುವ ಮಣಿಪುರ ವಿಧಾನಸಭಾ ಅಧಿವೇಶನಕ್ಕೆ ಕುಕಿ ಸಮುದಾಯದ ಬಹುತೇಕ ಶಾಸಕರು ಗೈರಾಗುವ ಸಾಧ್ಯತೆ ಇದೆ ಎಂದು ಸಮುದಾಯದ ನಾಯಕರು ತಿಳಿಸಿದ್ದಾರೆ.

ಆದರೆ ಮೈತೇಯಿ ಸಮುದಾಯದ 'ಮಣಿಪುರ ಏಕತೆ ಸಂಯೋಜನಾ ಸಮಿತಿ'ಯು (ಸಿಒಸಿಒಎಂಐ), 'ಶಾಸಕರು ಅಧಿವೇಶನಕ್ಕೆ ಹಾಜರಾಗುವುದಾದರೆ ಅವರಿಗೆ ಭದ್ರತೆ ಒದಗಿಸಲು ಸಿದ್ಧ' ಎಂದು ಭರವಸೆ ನೀಡಿದೆ.

'ರಾಜ್ಯದ ಕಾನೂನು ಸುವ್ಯವಸ್ಥೆ ಮತ್ತು ಹಿಂಸಾಚಾರವನ್ನು ಗಮನಿಸಿದರೆ ಮುಂಬರುವ ವಿಧಾನಸಭಾ ಅಧಿವೇಶನದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದು ಎನಿಸುತ್ತಿದೆ' ಎಂದು ಚುರಾಚಂದಪುರ ಬಿಜೆಪಿ ಶಾಸಕ ಎಲ್.ಎಂ ಖಾವುತೆ ತಿಳಿಸಿದ್ದಾರೆ.

ಮಣಿಪುರ ವಿಧಾನಸಭೆಯಲ್ಲಿ ಬಿಜೆಪಿಯ ಐದು ಶಾಸಕರು ಸೇರಿ 10 ಮಂದಿ ಕುಕಿ-ಜೋಮಿ ಶಾಸಕರಿದ್ದಾರೆ. 'ಇವರು ಅಧಿವೇಶನಕ್ಕೆ ಹಾಜರಾಗದೇ ಇದ್ದರೆ ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರದ ಕುರಿತು ಸದನದಲ್ಲಿ ಮೌಲ್ಯಯುತ ಚರ್ಚೆ ನಡೆಯಲು ಸಾಧ್ಯವಿಲ್ಲ ಎಂದು ವಿಶ್ಲೇಷಕರು ತಿಳಿಸಿದ್ದಾರೆ.

1,195 ಶಸ್ತ್ರಾಸ್ತ್ರಗಳ ವಶಕ್ಕೆ: ಜನರು ಲೂಟಿ ಮಾಡಿದ್ದ ಸುಮಾರು 1,195 ಶಸ್ತ್ರಾಸ್ತ್ರಗಳನ್ನು ರಾಜ್ಯದ ವಿವಿಧ ಭಾಗಗಳಿಂದ ವಶಕ್ಕೆ ಪಡೆಯಲಾಗಿದೆ ಎಂದು ಮಣಿಪುರ ಪೊಲೀಸರು ತಿಳಿಸಿದ್ದಾರೆ.

ಕಣಿವೆ ಜಿಲ್ಲೆಗಳಿಂದ 1,057 ಮತ್ತು ಪರ್ವತ ಜಿಲ್ಲೆಗಳಿಂದ 138 ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ. ಇದರ ಜೊತೆಗೆ ಸಾವಿರಾರು ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕದ್ದೊಯ್ದಿರುವ ಶಸ್ತ್ರಾಸ್ತ್ರಗಳ ಪತ್ತೆಗೆ ನಿರಂತರವಾಗಿ ಶೋಧ ನಡೆಸಲಾಗುತ್ತಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಭದ್ರತಾ ಪಡೆಗಳ ಶಸ್ತ್ರಾಸ್ತ್ರಗಳನ್ನು ಕದ್ದೊಯ್ದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮಹಾ ನಿರ್ದೇಶಕ ರಾಜೀವ್ ಸಿಂಗ್ ಎಚ್ಚರಿಸಿದ್ದಾರೆ.

ಬಹಿಷ್ಕರಿಸಲು ನಿರ್ಧಾರ : ಹಿಂಸಾಚಾರವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ವಿಧಾನಸಭೆಯ ತುರ್ತು ಅಧಿವೇಶನ ಕರೆಯಲು ಮತ್ತು ಸದ್ಯದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿಭಾಯಿಸಲು ವಿಫಲವಾಗಿದೆ ಎಂದು ಆರೋಪಿಸಿರುವ 'ಮಣಿಪುರ ಏಕತೆ ಸಂಯೋಜನಾ ಸಮಿತಿ'ಯು (ಸಿಒಸಿಒಎಂಐ) ಸರ್ಕಾರದ ಕಾರ್ಯಕ್ರಮ ಬಹಿಷ್ಕರಿಸಲು ನಿರ್ಧರಿಸಿದೆ.

ಬೆಂಬಲ ಹಿಂಪಡೆದ ಕುಕಿ ಪಕ್ಷ

ಮಣಿಪುರದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕುಕಿ ಪೀಪಲ್ಸ್ ಅಲೆಯನ್ಸ್ (ಕೆಪಿಎ) ಪಕ್ಷವು ವಾಪಸ್ ಪಡೆದಿದೆ.

ಪಕ್ಷದ ಅಧ್ಯಕ್ಷ ಟಾಂಗ್ಮಾಂಗ್ ಹಾಕಿಪ್ ಅವರು, ಈ ಕುರಿತು ರಾಜ್ಯಪಾಲೆ ಅನುಸೂಯಾ ಉಯಿಕೆ ಅವರಿಗೆ ಸಲ್ಲಿಸಿರುವ ಪತ್ರದಲ್ಲಿ ಎನ್‌ಡಿಎ ಮೈತ್ರಿಕೂಟ ತೊರೆದಿರುವ ಬಗ್ಗೆ ತಿಳಿಸಿದ್ದಾರೆ.

ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರದಿಂದ ಕಣಿವೆ ರಾಜ್ಯ ಹೊತ್ತಿ ಉರಿಯುತ್ತಿದೆ. ಸಂಘರ್ಷ ನಿಯಂತ್ರಿಸಲು ಸರ್ಕಾರ ವಿಫಲವಾಗಿದೆ ಎಂದು ಪಕ್ಷ ಆರೋಪಿಸಿದೆ.

ಮಣಿಪುರದ ವಿಧಾನಸಭೆಯಲ್ಲಿ ಒಟ್ಟು 60 ಶಾಸಕರಿದ್ದು, ಈ ಪೈಕಿ ಕೆಪಿಎಯ ಇಬ್ಬರು ಚುನಾಯಿತರಾಗಿದ್ದಾರೆ. ಬಿಜೆಪಿಯ 32 ಶಾಸಕರಿದ್ದಾರೆ. ನಾಗಾ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ಐವರು ಸೇರಿದಂತೆ ಮೂವರು ಪಕ್ಷೇತರ ಶಾಸಕರು ಬಿರೇನ್ ಸಿಂಗ್ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ಹಾಗಾಗಿ, ಸರ್ಕಾರದ ಅಸ್ತಿತ್ವಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ.

ಕಲ್ಲು ತೂರಾಟಕ್ಕೆ ಬಳಸಿದ್ದ ಕಟ್ಟಡಗಳ ನೆಲಸಮ

ಗುರುಗ್ರಾಮ (ಪಿಟಿಐ): ಹರಿಯಾಣದ ನೂಹ್‌ನಲ್ಲಿ ಸಂಭವಿಸಿದ ಹಿಂಸಾಚಾರದ ವೇಳೆ ಕಲ್ಲು ತೂರಾಟ ನಡೆಸಲು ಬಳಸಿಕೊಂಡಿದ್ದರು ಎನ್ನಲಾದ ಹಲವು ಕಟ್ಟಡಗಳನ್ನು ಅಧಿಕಾರಿಗಳು ಭಾನುವಾರ ನೆಲಸಮ ಮಾಡಿದ್ದಾರೆ.

ಅಕ್ರಮ ಕಟ್ಟಡಗಳನ್ನು ನೆಲ ಸಮಗೊಳಿಸುವ ಕಾರ್ಯಾಚರಣೆ ಯನ್ನು ಜಿಲ್ಲಾಡಳಿತವು ನಾಲ್ಕನೇ ದಿನವೂ ಮುಂದುವರಿಸಿತು. 16 ಅಕ್ರಮ ಕಟ್ಟಡಗಳನ್ನು ಗುರುತಿಸಲಾಗಿದ್ದು, ಬುಲ್ಡೋಜರ್ ಬಳಸಿ ತೆರವುಗೊಳಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವಿಎಚ್‌ಪಿ ಹಮ್ಮಿಕೊಂಡಿದ್ದ ಶೋಭಾಯಾತ್ರೆ ಸಂದರ್ಭದಲ್ಲಿ ಸಂಭವಿಸಿದ ಹಿಂಸಾಚಾರದ ವೇಳೆ ಗೂಂಡಾಗಳು ಕಲ್ಲುಗಳನ್ನು ತೂರಾಟ ನಡೆಸಲು ಈ ಅಕ್ರಮ ಕಟ್ಟಡಗಳನ್ನು ಬಳಸಿಕೊಂಡಿದ್ದರು' ಎಂದು ಉಪವಿಭಾಗಾಧಿಕಾರಿ ಅಶ್ವನಿಕುಮಾರ್ ಹೇಳಿದ್ದಾರೆ.

'ಜನರು ಅಗತ್ಯ ವಸ್ತುಗಳನ್ನು ಖರೀದಿಸಲು ಅನುಕೂಲವಾಗುವಂತೆ ಭಾನುವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 12 ವರೆಗೆ ಕರ್ಫ್ಯೂ ಸಡಿಲಿಸಲಾಗಿತ್ತು' ಎಂದು ಜಿಲ್ಲಾಧಿಕಾರಿ ಧೀರೇಂದ್ರ ಖಡ್ಗಟಾ ಹೇಳಿದ್ದಾರೆ.

ಇಂಟರ್ನೆಟ್ ಸ್ಥಗಿತ: ಕೋಮು ಸಂಘರ್ಷ ಭುಗಿಲೆದ್ದಿರುವ ಕಾರಣ ಫರಿದಾಬಾದ್ ಜಿಲ್ಲೆಯ ಬಲ್ಲಾಭ್‌ಗಢ ಉಪ ವಿಭಾಗದಲ್ಲಿ ಭಾನುವಾರ ಮಧ್ಯಾಹ್ನ 1ರಿಂದ ಸೋಮವಾರ ರಾತ್ರಿ 11:59ರ ವರೆಗೆ ಮೊಬೈಲ್ ಇಂಟರ್ನೆಟ್ ಮತ್ತು ಎಸ್‌ಎಂಎಸ್ ಸೇವೆ ಸ್ಥಗಿತಗೊಳಿಸುವಂತೆ ಸರ್ಕಾರ ಸೂಚಿಸಿದೆ.

ಸಿಪಿಐ ನಿಯೋಗಕ್ಕೆ ತಡೆ: ನೂಹ್ ಜಿಲ್ಲೆಗೆ ಸಮೀಪವಿರುವ ಹಿಂಸಾಚಾರ ಪೀಡಿತ ಗ್ರಾಮಗಳಿಗೆ ಭೇಟಿ ನೀಡಲು ಹೊರಟಿದ್ದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ (ಸಿಪಿಐ) ನಾಲ್ವರು ಸದಸ್ಯರಿದ್ದ ನಿಯೋಗವನ್ನು ಪೊಲೀಸರು ಭಾನುವಾರ ತಡೆದರು.

'ವಾಗ್ವಾದಕ್ಕೆ ಇಳಿಯದೆ ವಾಪಸ್ ಹೋಗಲು ನಿರ್ಧರಿಸಿದ್ದೇವೆ. ಗೂಂಡಾಗಳು, ದುಷ್ಕರ್ಮಿಗಳು ಮುಕ್ತವಾಗಿ ಓಡಾಡಬಹುದು. ಆದರೆ ಶಾಂತಿ ಪುನಃಸ್ಥಾಪನೆ ಬಯಸಿ ಬರುವ ಜನರನ್ನು ತಡೆಯಲಾಗುತ್ತಿದೆ' ರಾಜ್ಯಸಭಾ ಸದಸ್ಯ ಬಿನೊಯ್ ವಿಶ್ವಂ ದೂರಿದರು.

'ಸ್ಥಳದಲ್ಲಿ ಸೆಕ್ಷನ್ 144ರನ್ವಯ ನಿಷೇಧಾಜ್ಞೆ ಜಾರಿಯಲ್ಲಿರುವ ಕಾರಣ ಹಾಗೂ ನಿಯೋಗದ ಸದಸ್ಯರ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಹಿಂಸಾಚಾರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡುವುದನ್ನು ತಡೆಯಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದರು.

'ಜನರೊಂದಿಗೆ ಕುಳಿತು ಚಹಾ ಕುಡಿದು ಬರುತ್ತೇವೆ ಎಂದು ಸ್ಥಳದಲ್ಲಿದ್ದ ಪೊಲೀಸರಲ್ಲಿ ಮನವಿ ಮಾಡಿದೆವು. ಆದರೆ ಅವರು, 'ಪೊಲೀಸ್ ಠಾಣೆಯಲ್ಲಿ ಕುಳಿತು ಚಹಾ ಕುಡಿಯುವುದಾದರೆ ಸ್ವಾಗತ. ಸದ್ಯದ ಪರಿಸ್ಥಿತಿಯಲ್ಲಿ ಸಾರ್ವಜನಿಕರನ್ನು ಭೇಟಿಯಾಗಲು ಅವಕಾಶ ನೀಡುವುದಿಲ್ಲ' ಎಂದು ಹೇಳಿದರು' ಎಂದು ನಿಯೋಗದ ಸದಸ್ಯರೊಬ್ಬರು ತಿಳಿಸಿದರು.

ಈ ಮಧ್ಯೆ ಜಿಲ್ಲಾ ಉಪ ಪೊಲೀಸ್ ಕಮಿಷನರ್ ಧಿರೇಂದ್ರ ಖಡ್ಗಟ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ ನರೇಂದ್ರ ಬಿಜರಾನಿಯಾ ಅವರು ನೂಹ್ ಜಿಲ್ಲೆಯ ಹಲವು ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿದರು.

ಮಹಾಪಂಚಾಯಿತಿ

ಗುರುಗ್ರಾಮದ ಸೆಕ್ಟರ್–57ರಲ್ಲಿನ ಮಸೀದಿಗೆ ಬೆಂಕಿ ಹಚ್ಚಿರುವುದು ಹಾಗೂ ಇಮಾಮ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರು ಯುವಕರನ್ನು ಬಂಧಿಸಿರುವುದನ್ನು ಪ್ರತಿಭಟಿಸಿ ತಿಗ್ರಾ ಗ್ರಾಮದಲ್ಲಿ ಹಿಂದೂ ಸಮುದಾಯದಿಂದ ಮಹಾಪಂಚಾಯಿತಿ ನಡೆಯಿತು.

'ಮಸೀದಿಗೆ ಬೆಂಕಿ ಹಾಗೂ ಇಮಾಮ್ ಹತ್ಯೆ ಪ್ರಕರಣಕ್ಕೂ ಬಂಧಿತರಿಗೂ ಯಾವುದೇ ಸಂಬಂಧ ಇಲ್ಲ' ಎಂದಿರುವ ಮಹಾಪಂಚಾಯಿತಿ ಬಂಧಿತರ ಬಿಡುಗಡೆಗೆ ಏಳು ದಿನಗಳ ಗಡುವು ನೀಡಿದೆ.

ಪಾಣಿಪತ್: ದಾಳಿ, ಹಲವರಿಗೆ ಗಾಯ

ಚಂಡೀಗಡ(ಪಿಟಿಐ): ಮಾಸ್ಕ್ ಧರಿಸಿ, ದ್ವಿಚಕ್ರವಾಹನಗಳಲ್ಲಿ ಬಂದಿದ್ದ ಯುವಕರು ಭಾನುವಾರ ಪಾಣಿಪತ್‌ನ ಎರಡು ಸ್ಥಳಗಳಲ್ಲಿ ದಾಳಿ ಮಾಡಿ ಹಲವು ಅಂಗಡಿಗಳನ್ನು ಧ್ವಂಸಗೊಳಿಸಿದ್ದಾರೆ. ಈ ಘಟನೆಯಲ್ಲಿ 3–4 ಜನರು ಗಾಯಗೊಂಡಿದ್ದಾರೆ ಎನ್ನಲಾಗಿದೆ.

ನೂಹ್ ಜಿಲ್ಲೆಯಲ್ಲಿ ಸಂಭವಿಸಿದ ಕೋಮು ಗಲಭೆ ಜನರ ಮನದಿಂದ ಮರೆಯಾಗುವ ಮುನ್ನವೇ ಈ ಘಟನೆ ನಡೆದಿದೆ.

'ಒಂದು ಕೋಮಿಗೆ ಸೇರಿದವರ ಅಂಗಡಿಗಳನ್ನು ಗುರಿಯಾಗಿಸಿ ಯುವಕರು ದಾಳಿ ನಡೆಸಿದ್ದಾರೆ. ದಾಳಿ ನಡೆಸಿದವರು 20 ರಿಂದ 25 ವರ್ಷ ವಯೋಮಾನದವರಿದ್ದಾರೆ. ಘಟನೆಗೆ ಸಂಬಂಧಿಸಿ 15 ಜನರನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಲಂಚ ಪ್ರಕರಣ: ಜೈಪುರ ಮೇಯರ್ ಅಮಾನತು

ಜೈಪುರ (ಪಿಟಿಐ): ಲಂಚ ಪಡೆದ ಪ್ರಕರಣ ದಲ್ಲಿ ಪತಿಯನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿರುವ ಬೆನ್ನಲ್ಲೇ ಜೈಪುರ ಹೆರಿಟೇಜ್ ಮಹಾನಗರ ಪಾಲಿಕೆಯ ಮೇಯರ್ ಮುನೇಶ್ ಗುರ್ಜರ್ ಅವರನ್ನು ಅಮಾನತು ಮಾಡಲಾಗಿದೆ.

ಜಮೀನು ಗುತ್ತಿಗೆ ನೀಡುವುದಕ್ಕೆ ಸಂಬಂಧಿಸಿದ ದಾಖಲೆ ನೀಡಲು ₹2 ಲಕ್ಷ ಲಂಚ ಪಡೆದ ಆರೋಪದಲ್ಲಿ ಮುನೇಶ್ ಅವರ ಪತಿ ಸುಶೀಲ್ ಗುರ್ಜರ್ ಹಾಗೂ ಮಧ್ಯವರ್ತಿಗಳಾದ ನಾರಾಯಣ ಸಿಂಗ್ ಮತ್ತು ಅನಿಲ್ ದುಬೆ ಎಂಬವರನ್ನು ಎಸಿಬಿ ಶುಕ್ರವಾರ ಬಂಧಿಸಿತ್ತು.

ಬಳಿಕ ಗುರ್ಜರ್ ಮನೆಯಲ್ಲಿ ಶೋಧ ನಡೆಸಿದ್ದ ಎಸಿಬಿ ₹40 ಲಕ್ಷ ನಗದು, ದಾಖಲೆ ವಶಪಡಿಸಿಕೊಂಡಿತ್ತು. ನಾರಾಯಣ ಸಿಂಗ್ ಮನೆಯಲ್ಲಿ ₹8 ಲಕ್ಷ ನಗದು ಪತ್ತೆಯಾಗಿತ್ತು.

'ಈ ಪ್ರಕರಣದಲ್ಲಿ ಮುನೇಶ್ ಭಾಗಿಯಾಗಿರುವ ಶಂಕೆಯಿಂದ ತನಿಖೆ ಪೂರ್ಣಗೊಳ್ಳುವವರೆಗೆ ಅವರನ್ನು ಮೇಯರ್ ಸ್ಥಾನದಿಂದ ಅಮಾನತುಗೊಳಿಸಲಾಗಿದೆ' ಎಂದು ಸ್ಥಳೀಯಾಡಳಿತ ಇಲಾಖೆಯ ನಿರ್ದೇಶಕ ಹೃದೇಶ್ ಕುಮಾರ್ ಶರ್ಮಾ ಹೇಳಿದ್ದಾರೆ.

'ಇದು ನನ್ನ ಕುಟುಂಬದ ವಿರುದ್ಧ ನಡೆದ ರಾಜಕೀಯ ಷಡ್ಯಂತ್ರ. ಷಡ್ಯಂತ್ರ ನಡೆಸಿರುವವರು ಶೀಘ್ರ ಸಿಕ್ಕಿಬೀಳಲಿದ್ದಾರೆ. ನನಗೆ ನ್ಯಾಯಾಂಗದ ಮೇಲೆ ಸಂಪೂರ್ಣ ವಿಶ್ವಾಸ ಇದೆ' ಎಂದು ಮುನೇಶ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಸರ್ಕಾರದ ಈ ನಿರ್ಧಾರವು ಸ್ವಾಗತಾರ್ಹ. ಯಾರೇ ಆದರೂ ಭ್ರಷ್ಟಾಚಾರ ನಡೆಸಿದರೆ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ರಾಜಸ್ಥಾನ ಸಚಿವ ಪ್ರತಾಪ್ ಸಿಂಗ್ ಖಚರಿಯಾವಾಸ್ ಹೇಳಿದ್ದಾರೆ.

'ವದಂತಿ ಹರಡಿದರೆ ಬಹಿಷ್ಕಾರ'

ಪ್ರಜಾವಾಣಿ ವಾರ್ತೆ

ವಾರಾಣಸಿ: ಜ್ಞಾನವಾಪಿ ಮಸೀದಿ ಆವರಣದಲ್ಲಿ ವಿಗ್ರಹಗಳು ಪತ್ತೆಯಾಗಿವೆ ಎಂಬ ವದಂತಿಯ ಕುರಿತು ಪರಿಶೀಲಿಸದಿದ್ದರೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ನಡೆಸುತ್ತಿರುವ ವೈಜ್ಞಾನಿಕ ಸಮೀಕ್ಷೆಯಿಂದ ದೂರ ಉಳಿಯುವುದಾಗಿ ಮುಸ್ಲಿಂ ಪ್ರತಿನಿಧಿಗಳು ಭಾನುವಾರ ಎಚ್ಚರಿಕೆ ನೀಡಿದ್ದಾರೆ.

ಸಮೀಕ್ಷೆಯ ವೇಳೆ ಮಸೀದಿಯ ನೆಲ ಅಂತಸ್ತಿನಲ್ಲಿ ವಿಗ್ರಹಗಳು, ತ್ರಿಶೂಲ ಮತ್ತು ಹೂಜಿ ಪತ್ತೆಯಾಗಿದೆ ಎಂದು ಕೆಲ ಮಾಧ್ಯಮಗಳು ವದಂತಿಗಳನ್ನು ಹರಡುತ್ತಿವೆ ಎಂದು ಮುಸ್ಲಿಂ ಅರ್ಜಿದಾರರ ಪರ ವಕೀಲರಾದ ಮುಮ್ತಾಜ್ ಅಹಮ್ಮದ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಜ್ಞಾನವಾಪಿಯು ಎಂದೆಂದಿಗೂ ಮಸೀದಿಯಾಗಿಯೇ ಉಳಿಯಲಿದೆ' ಎಂದು ಮುಸ್ಲಿಂ ಧರ್ಮಗುರುವೊಬ್ಬರು ಹೇಳಿದ್ದಾರೆ.

ಮಸೀದಿ ಆವರಣದಲ್ಲಿ ವೈಜ್ಞಾನಿಕ ಸಮೀಕ್ಷೆಯು ಮೂರನೇ ದಿನವಾದ ಭಾನುವಾರವೂ ಮುಂದುವರಿಯಿತು.

ಮಸೀದಿ ಆವರಣವನ್ನು ಅಗೆಯದೆ 'ಭೂ ಭೇದಕ ರೇಡಾರ್' (ಜಿಪಿಆರ್) ಬಳಸಿ ಸಮೀಕ್ಷೆ ನಡೆಸಲು ಎಎಸ್‌ಐ ತಂಡ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಬಾಲಕರಿಗೆ ಮೂತ್ರ ಕುಡಿಸಿದ ಗುಂಪು

ಸಿದ್ಧಾರ್ಥನಗರ (ಉತ್ತರ ಪ್ರದೇಶ) (ಪಿಟಿಐ): ₹2 ಸಾವಿರ ಹಣ ಕಳವು ಮಾಡಿದ್ದಾರೆಂಬ ಶಂಕೆ ಮೇಲೆ ಇಬ್ಬರು ಬಾಲಕರಿಗೆ ಜನರ ಗುಂಪೊಂದು ಬಲವಂತವಾಗಿ ಮೂತ್ರ ಕುಡಿಸಿ, ಅವರ ಗುದದ್ವಾರಕ್ಕೆ ಹಸಿಮೆಣಸಿನ ಕಾಯಿ ಖಾರ ಸವರಿ, ಪೆಟ್ರೋಲ್ ಇಂಜಕ್ಷನ್‌ಗಳನ್ನು ನೀಡಿ ವಿಕೃತಿ ಮೆರೆದಿರುವ ಪ್ರಕರಣ ನಡೆದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಉತ್ತರ-ಪ್ರದೇಶದ ಸಿದ್ಧಾರ್ಥನಗರ ಜಿಲ್ಲೆಯ ಪತ್ರಾ ಬಜಾರ್‌ನ ಕೊಂಕಟಿ ಕ್ರಾಸಿಂಗ್‌ನಲ್ಲಿರುವ ಕೋಳಿ ಮಾಂಸದ ಅಂಗಡಿಯಲ್ಲಿ ಶುಕ್ರವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಈ ದೌರ್ಜನ್ಯ ನಡೆದಿದೆ.

ಕೋಳಿ ಫಾರ್ಮ್‌ನಲ್ಲಿ ಬಾಲಕರಿಬ್ಬರು ಹಣ ಕದ್ದಿದ್ದಾರೆಂದು ಆರೋಪಿಸಿ, ಫಾರ್ಮ್ ಮಾಲೀಕರು ಬಾಲಕರ ಕೈಗಳನ್ನು ಕಟ್ಟಿ ಎಳೆತಂದಿದ್ದಾರೆ. ಮೊದಲಿಗೆ ಇಬ್ಬರಿಗೂ ಸಿರಿಂಜ್‌ನಿಂದ ಪೆಟ್ರೋಲ್ ಚುಚ್ಚಿ, ಇಬ್ಬರ ಗುದದ್ವಾರಕ್ಕೆ ಹಸಿಮೆಣಸಿನ ಕಾಯಿ ಖಾರ ಸವರಲಾಗಿದೆ. ಅಲ್ಲದೆ, ಉಪ್ಪಿನಂಶದ ತಿಂಡಿ ತಿನಿಸಿ, ಬಲವಂತದಿಂದ ಮೂತ್ರ ಕುಡಿಸಿದ್ದು, ಬಾಲಕರು ಸಹಾಯಕ್ಕಾಗಿ ಕೂಗಿದರೂ ಯಾರೊಬ್ಬರು ಅವರ ರಕ್ಷಣೆಗೆ ಮುಂದಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತ ಇಬ್ಬರು ಬಾಲಕರ ಪೈಕಿ ಒಬ್ಬ ಬಾಲಕನ ತಂದೆ ಪೊಲೀಸರಿಗೆ ದೂರು ನೀಡಿದ್ದು, 8 ಆರೋಪಿಗಳ ಪೈಕಿ ಆರು ಜನರನ್ನು ಬಂಧಿಸಲಾಗಿದೆ ಎಂದು ಎಎಸ್‌ಪಿ ಸಿದ್ಧಾರ್ಥ ಹೇಳಿದ್ದಾರೆ.

ಆರೋಪಿಗಳು ಇಡೀ ಘಟನೆಯನ್ನು ವಿಡಿಯೊ ಮಾಡಿ, ಸಾಮಾಜಿಕ ಮಾಧ್ಯಮ ಗಳಲ್ಲಿ ಶನಿವಾರ ಹಂಚಿಕೊಂಡಿದ್ದರು. ಇದು ಗಮನಕ್ಕೆ ಬರುತ್ತಿದ್ದಂತೆಯೇ ಎಸ್‌ಪಿ ಅಭಿಷೇಕ್ ಕುಮಾರ್ ಅಗರ್ವಾಲ್, ಕ್ರಮಕ್ಕೆ ಆದೇಶಿಸಿದ್ದರು. ಪತ್ರಾ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ.

ಈಗ ಸೂಕ್ತ ಸ್ಥಾನದಲ್ಲಿ ಅಜಿತ್ ಪವಾರ್: ಶಾ

ಪ್ರಜಾವಾಣಿ ವಾರ್ತೆ

ಮುಂಬೈ: 'ನೀವೀಗ ಸರಿಯಾದ ಸ್ಥಾನದಲ್ಲಿದ್ದೀರಿ' ಹೀಗೆಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರನ್ನು ಉದ್ದೇಶಿಸಿ ಹೇಳಿದರು.

ಭಾನುವಾರ ಪುಣೆಯಲ್ಲಿ ನಡೆದ ಸಹಕಾರಿ ಸಂಘಗಳ ಕಚೇರಿಯ ಕೇಂದ್ರ ರಿಜಿಸ್ಟ್ರಾರ್‌ನ (ಸಿಆರ್‌ಸಿಎಸ್) ಡಿಜಿಟಲ್ ಪೋರ್ಟಲ್ ಚಾಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾ, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಸಮ್ಮುಖದಲ್ಲೇ ಪವಾರ್ ಅವರಿಗೆ ಈ ಮಾತನ್ನು ಹೇಳಿದರು.

'ಅಜಿತ್ ದಾದಾ ಎನ್‌ಡಿಎ ಬಳಿ ಬಂದರು. ಉಪ ಮುಖ್ಯಮಂತ್ರಿಯಾದ ಬಳಿಕ ಇದೇ ಮೊದಲ ಬಾರಿಗೆ ಅವರೊಂದಿಗೆ ವೇದಿಕೆ ಹಂಚಿಕೊಳ್ಳುತ್ತಿರುವೆ. 'ಬಹಳ ವರ್ಷಗಳ ಬಳಿಕ ನೀವು ಸರಿಯಾದ ಸ್ಥಾನದಲ್ಲಿದ್ದೀರಿ... ಇದು ನಿಮಗೆ ಸರಿಯಾದ ಸ್ಥಾನ. ಆದರೆ, ನೀವು ಬಹಳ ತಡ ಮಾಡಿಬಿಟ್ಟಿರಿ' ಎಂದೂ ಶಾ ಹೇಳಿದ್ದಾರೆ.

ಇದಕ್ಕೂ ಮುನ್ನ ಮಾತನಾಡಿದ ಅಜಿತ್ ಪವಾರ್ ಅವರು, 'ಅಮಿತ್ ಶಾ ಅವರು ಮಹಾರಾಷ್ಟ್ರದ ಅಳಿಯ. ಹಾಗಾಗಿ, ಇಲ್ಲಿನ ಜನರು ಅವರ ಬಗ್ಗೆ ವಿಶೇಷ ಪ್ರೀತಿ ಹೊಂದಿದ್ದಾರೆ' ಎಂದರು.

ಇದಕ್ಕೆ ದನಿಗೂಡಿಸಿದ ದೇವೇಂದ್ರ ಫಡಣವೀಸ್, 'ಅಮಿತ್ ಶಾ ಅವರು ಮಹಾರಾಷ್ಟ್ರದ ಅಳಿಯ ಮಾತ್ರವಲ್ಲ. ಅವರ ಜನನವೂ ಮುಂಬೈನಲ್ಲಿ ಆಗಿದೆ' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗಷ್ಟೇ ಪುಣೆಗೆ ಭೇಟಿ ನೀಡಿದ್ದರು. ಈ ವೇಳೆ ಅವರು ಶಿಂದೆ, ಫಡಣವೀಸ್ ಮತ್ತು ಅಜಿತ್ ಪವಾರ್ ಅವರ ಜತೆಗೆ ಹಲವು ಕಾರ್ಯಕ್ರಮ ಗಳಲ್ಲಿ ಪಾಲ್ಗೊಂಡಿದ್ದರು. ಅದಾದ ಬಳಿಕ ಅಮಿತ್ ಶಾ ಕೂಡಾ ಪುಣೆಗೆ ಭೇಟಿ ನೀಡಿರುವುದು ರಾಜಕೀಯ ವಲಯದಲ್ಲಿ ಮಹತ್ವ ಪಡೆದುಕೊಂಡಿದೆ.

ಅಮಿತ್ ಭೇಟಿ ಅಲ್ಲಗಳೆದ ಜಯಂತ್

ಮುಂಬೈ: ಎನ್‌ಡಿಎಗೆ ಸೇರುವ ಇಚ್ಛೆಯಿಂದ ಕೇಂದ್ರ ಗೃಹಸಚಿವ ಹಾಗೂ ಬಿಜೆಪಿ ನಾಯಕ ಅಮಿತ್ ಶಾ ಅವರೊಂದಿಗೆ ಸಭೆ ನಡೆಸಲಾಗಿದೆ ಎನ್ನುವುದನ್ನು ಸಾರಾಸಗಟಾಗಿ ನಿರಾಕರಿಸಿರುವ ಎನ್‌ಸಿಪಿ ನಾಯಕ ಜಯಂತ್ ಪಾಟೀಲ್ ಅವರು, ತಮ್ಮ ನಿಷ್ಠೆ ಏನಿದ್ದರೂ ಶರದ್ ಪವಾರ್ ಅವರಿಗೆ ಮಾತ್ರ ಎಂದು ಭಾನುವಾರ ಸ್ಪಷ್ಟಪಡಿಸಿದ್ದಾರೆ.

ಶರದ್ ಪವಾರ್ ಅವರ ವಿರುದ್ಧ ಬಂಡಾಯವೆದ್ದು ಹೊರಹೋದ ಅಜಿತ್ ಪವಾರ್– ಪ್ರಫುಲ್ ಪಟೇಲ್ ಗುಂಪನ್ನು ಸೇರಲು ಜಯಂತ್ ಪಾಟೀಲ್ ಯತ್ನಿಸುತ್ತಿದ್ದಾರೆ ಎನ್ನುವ ಊಹಾಪೋಹಗಳು ಕೆಲ ವಾರಗಳಿಂದ ಹರಿದಾಡುತ್ತಿವೆ. ಇದಕ್ಕೆ ಇಂಬುಗೊಡುವಂತೆ ಇತ್ತೀಚೆಗಷ್ಟೇ ಪಾಟೀಲ್ ಅವರು ಅಜಿತ್ ಪವಾರ್ ಗುಂಪಿನೊಳಗಿರುವ ರಾಯಗಢದ ಸಂಸದ ಸುನಿಲ್ ತತ್ಕರೆ ಅವರನ್ನು ಭೇಟಿ ಮಾಡಿದ್ದರು.

ಶನಿವಾರ ಸಂಜೆ ಮತ್ತು ಭಾನುವಾರ ಪಾಟೀಲ್ ಅವರು ಪುಣೆಯ ಹೋಟೆಲೊಂದರಲ್ಲಿ ಅಮಿತ್ ಶಾ ಅವರೊಂದಿಗೆ ಸಭೆ ನಡೆಸಿದ್ದಾರೆ ಎಂಬ ಚರ್ಚೆಗಳು ನಡೆದಿವೆ. ಇದೇ ಸಭೆಯಲ್ಲಿ ಬಿಜೆಪಿಯ ಬೆಂಬಲಿಗರೂ ಪಾಲ್ಗೊಂಡಿದ್ದರು ಎನ್ನಲಾಗಿದೆ.

ಡುರಾಂಡ್ ಕಪ್: ಡ್ರಾ ಪಂದ್ಯದಲ್ಲಿ ದೆಹಲಿ ಎಫ್‌ಸಿ

ಗುವಾಹಟಿ (ಪಿಟಿಐ): ದೆಹಲಿ ಎಫ್‌ಸಿ ತಂಡವು ಭಾನುವಾರ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ 'ಇ' ಗುಂಪಿನ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ತಂಡದೊಂದಿಗೆ 1–1ರಿಂದ ಡ್ರಾ ಸಾಧಿಸಿತು.

ಹಿಮಾಂಶು ಜಾಂಗ್ರಾ ಅವರು 6ನೇ ನಿಮಿಷಕ್ಕೆ ಗೋಲು ಹೊಡೆಯುವ ಮೂಲಕ ದೆಹಲಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು.

ಹೈದರಾಬಾದ್ ತಂಡದ ರಾಮಹ್ಲುಂಚುಂಗ 57ನೇ ನಿಮಿಷಕ್ಕೆ ಚೆಂಡನ್ನು ಗುರಿ ತಲುಪಿಸುವ ಮೂಲಕ ಸಮಬಲ ತಂದುಕೊಟ್ಟರು. ಧಾರಾಕಾರವಾಗಿ ಮಳೆ ಸುರಿಯುತ್ತಿದ್ದ ಕಾರಣ ಎರಡೂ ತಂಡಗಳು ಆಟವಾಡಲು ಪ್ರಯಾಸಪಟ್ಟರು.

ಮತ್ತೊಂದು ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ತಂಡವು ಬಾಂಗ್ಲಾದೇಶ ಆರ್ಮಿ ಫುಟ್‌ಬಾಲ್ ತಂಡದೊಂದಿಗೆ 2–2ರಿಂದ ಡ್ರಾ ಸಾಧಿಸಿತು.

ಬೆಂಗಾಲ್ ತಂಡದ ಪರವಾಗಿ ಸಾಲ್ ಕ್ರೆಸ್ಪೋ (34ನೇ ನಿ.), ಮತ್ತು ಸಿವಿರೋ (45 + 4ನೇ) ಗೋಲು ದಾಖಲಿಸಿದರೆ, ಬಾಂಗ್ಲಾ ತಂಡದ ಪರವಾಗಿ ಸಹರಿಯಾರ್ ಎಮನ್ (88ನೇ) ಮತ್ತು ಮೆರಾಜ್ ಪ್ರಧಾನ್ (90 + 7ನೇ) ಚೆಂಡನ್ನು ಗುರಿ ಸೇರಿಸಿದರು.

ಚೀನಾದ ವೆಂಗ್ ಹಾಂಗ್‌ಗೆ ಆಸ್ಟ್ರೇಲಿಯಾ ಓಪನ್ ಕಿರೀಟ

ಪ್ರಣಯ್ ಕೈತಪ್ಪಿದ ಪ್ರಶಸ್ತಿ

ಸಿಡ್ನಿ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಎಚ್.ಎಸ್. ಪ್ರಣಯ್ ಅವರು ಭಾನುವಾರ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಫೈನಲ್ ಪಂದ್ಯದಲ್ಲಿ ಪರಾಭವಗೊಂಡರು.

90 ನಿಮಿಷ ನಡೆದ ರೋಚಕ ಹಣಾಹಣಿಯಲ್ಲಿ ಪ್ರಣಯ್, ವಿಶ್ವದ 24ನೇ ಕ್ರಮಾಂಕದಲ್ಲಿರುವ ಚೀನಾದ ವೆಂಗ್ ಹಾಂಗ್ ಯಾಂಗ್ ಎದುರು 9-21, 23-21, 20-22ರಿಂದ ಸೋತರು. ಇದರಿಂದಾಗಿ ಪ್ರಸಕ್ತ ಋತುವಿನಲ್ಲಿ ಎರಡನೇ ಬಿಡಬ್ಲ್ಯುಎಫ್ ಪ್ರಶಸ್ತಿಯನ್ನು ಜಯಿಸುವ ಅವಕಾಶ ಅವರಿಗೆ ಕೈತಪ್ಪಿತು. ಅವರು ಮೇ ತಿಂಗಳಿನಲ್ಲಿ ನಡೆದಿದ್ದ ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು.

24 ವರ್ಷದ ವೆಂಗ್ ಅವರು ಮಲೇಷ್ಯಾ ಓಪನ್ ಫೈನಲ್‌ನಲ್ಲಿ ಪ್ರಣಯ್ ವಿರುದ್ಧ ಸೋತಿದ್ದರು. ಇದೀಗ ಅವರು ಮುಯ್ಯಿ ತೀರಿಸಿಕೊಂಡಿದ್ದಾರೆ. ವೆಂಗ್ 2019ರ ಚೀನಾ ಮಾಸ್ಟರ್, 2022ರ ಕೊರಿಯಾ ಓಪನ್ ಚಾಂಪಿಯನ್ ಆಗಿದ್ದರು.

ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ 31 ವರ್ಷದ ಪ್ರಣಯ್ ಅವರು ಮೊದಲ ಗೇಮ್‌ನಲ್ಲಿ ಲೋಪಗಳನ್ನು ಸುಲಭವಾಗಿ ಕಳೆದುಕೊಂಡರೂ ಎರಡನೇ ಗೇಮ್‌ನಲ್ಲಿ ಪುಟಿದೆದ್ದರು. ಸಮಬಲದ ಹೋರಾಟ ನಡೆಸಿ ಅಂತಿಮವಾಗಿ ಪ್ರಣಯ್ ಮೇಲುಗೈ ಸಾಧಿಸಿ, ಸಮಬಲಗೊಳಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಭಾರತೀಯ ಆಟಗಾರ ಆರಂಭದಿಂದಲೇ ಹಿಡಿತ ಸಾಧಿಸಿ 15–9ರ ಮುನ್ನಡೆಯೊಂದಿಗೆ ಪ್ರಶಸ್ತಿಯತ್ತ ದಾಪುಗಾಲು ಹಾಕುತ್ತಿರುವಾಗ ಎದುರಾಳಿ ಆಟಗಾರ ಪ್ರಬಲ ಹೊಡೆತ, ಡ್ರಾಪ್ ಶಾಟ್‌ಗಳ ಮೂಲಕ ತಿರುಗೇಟು ನೀಡಿದರು.

ಒಂದು ಹಂತದಲ್ಲಿ 71 ಶಾಟ್ ರ‍್ಯಾಲಿ ಆಡಿ ಆಯಾಸಗೊಂಡು ಇಬ್ಬರೂ ಆಟಗಾರರು ಕುಸಿದು ಕುಳಿತು ವಿಶ್ರಾಂತಿ ಪಡೆದರು. ನಂತರ ಮುಂದುವರಿದ ಆಟದಲ್ಲಿ ಚೀನಾ ಆಟಗಾರ ಮೇಲುಗೈ ಸಾಧಿಸಿದರು.

ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಪದಕದೊಂದಿಗೆ ಭಾರತದ ಎಚ್.ಎಸ್. ಪ್ರಣಯ್ ಮತ್ತು ಪ್ರಶಸ್ತಿಯೊಂದಿಗೆ ಚೀನಾದ ವೆಂಗ್ ಹಾಂಗ್ ಯಾಂಗ್ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಪಾಕ್ ಮಹಿಳೆ ಜತೆ ವರ್ಚುವಲ್ ಮದುವೆ

ಜೋಧಪುರ (ಪಿಟಿಐ): ರಾಜಸ್ಥಾನದ ವಕೀಲರೊಬ್ಬರು ಪಾಕಿಸ್ತಾನಿ ಮಹಿಳೆಯನ್ನು ಈಚೆಗೆ ವರ್ಚುವಲ್ ಆಗಿ ಮದುವೆ ಆಗಿರುವ ವಿಷಯ ಬೆಳಕಿಗೆ ಬಂದಿದೆ.

ಜೋಧಪುರದವರಾದ ವಕೀಲ ಮೊಹಮ್ಮದ್ ಅರ್ಬಾಜ್ ಅವರು ಪಾಕಿಸ್ತಾನದ ಕರಾಚಿಯ ಅಮೀನಾ ಅವರನ್ನು ಕಳೆದವಾರ ಮದುವೆಯಾಗಿದ್ದಾರೆ. ಅಮೀನಾ ಅವರ ಕುಟುಂಬಕ್ಕೆ ವೀಸಾ ದೊರಕುವುದು ವಿಳಂಬವಾದ ಕಾರಣ ವರ್ಚುವಲ್ ಆಗಿ ಮದುವೆ ಸಂಪ್ರದಾಯಗಳನ್ನು ನೆರವೇರಿಸಲಾಗಿದೆ. ಇದಕ್ಕಾಗಿ ದೊಡ್ಡ ಟಿವಿ ಪರದೆಗಳನ್ನು ಎರಡೂ ಕಡೆಯೂ ಅಳವಡಿಸಲಾಗಿತ್ತು.

ಮಹಿಳೆ ವಿರುದ್ಧ ಎಫ್‌ಐಆರ್

ಜೈಪುರ (ಪಿಟಿಐ): ಪಾಕಿಸ್ತಾನಕ್ಕೆ ತೆರಳಿ ಫೇಸ್‌ಬುಕ್ ಗೆಳೆಯನನ್ನು ವರಿಸಿರುವ ಭಾರತದ ವಿವಾಹಿತ ಮಹಿಳೆ ಅಂಜು ಹಾಗೂ ಅವರ ಪತಿ ನಸ್ರುಲ್ಲಾ ವಿರುದ್ಧ ರಾಜಸ್ಥಾನದ ಅಲ್ವರ್ ಜಿಲ್ಲೆಯ ಫೂಲ್‌ಬಾಗ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಂಜು ಅವರ ಮೊದಲ ಪತಿ ಅರವಿಂದ್ ಕುಮಾರ್ ನೀಡಿರುವ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಚ್ಛೇದನ ಪಡೆಯದ ಕಾರಣ ಅಂಜು ಅವರಿಗೆ ಬೇರೊಬ್ಬರನ್ನು ಮದುವೆಯಾಗಲು ಸಾಧ್ಯವಿಲ್ಲ ಎಂದು ಅರವಿಂದ್ ಅವರು ದೂರಿನಲ್ಲಿ ಹೇಳಿದ್ದಾರೆ.

ಅಮಲಿನಲ್ಲಿ ಮಹಿಳೆ ಹತ್ಯೆ

ಜೈಪುರ (ಪಿಟಿಐ): ರಾಜಸ್ಥಾನದ ಉದಯಪುರ ಜಿಲ್ಲೆಯ ಸಾಯಿರಾ ಪೊಲೀಸ್ ಠಾಣೆ ವ್ಯಾಪ್ತಿಯ ತರಪಾಲ ಗ್ರಾಮದಲ್ಲಿ ವೃದ್ಧೆಯೊಬ್ಬರನ್ನು ಮದ್ಯದ ಅಮಲಿನಲ್ಲಿದ್ದ ವ್ಯಕ್ತಿಯೊಬ್ಬ ಶಿವನ ಅವತಾರವೆಂದು ಹೇಳಿಕೊಂಡು ಥಳಿಸಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಾಪ ಸಿಂಹ (70), ನಾಥು ಸಿಂಗ್ ಹಾಗೂ ಬಾಲಕರಿಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

'ಮಸೂದೆಯಿಂದ ಮಾಧ್ಯಮ ಸ್ವಾತಂತ್ರ್ಯಕ್ಕೆ ಧಕ್ಕೆ'

ನವದೆಹಲಿ: ಕೇಂದ್ರ ಸರ್ಕಾರದ ಪ್ರಸ್ತಾವಿತ ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ ಹಾಗೂ ನಿಯತಕಾಲಿಕಗಳ ಮುದ್ರಣ ಹಾಗೂ ನೋಂದಣಿ ಮಸೂದೆಯು ಮಾಧ್ಯಮಗಳ ಸ್ವಾತಂತ್ರ್ಯದ ಮೇಲೆ ಗಂಭೀರ ಪರಿಣಾಮ ಬೀರಲಿವೆ ಎಂದು ಭಾರತೀಯ ಸಂಪಾದಕರ ಕೂಟ ಆತಂಕ ವ್ಯಕ್ತಪಡಿಸಿದೆ.

ಈ ಎರಡೂ ಮಸೂದೆಗಳು ಮಾಧ್ಯಮ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ನಿರ್ಬಂಧಿಸುತ್ತವೆ. ಹಾಗಾಗಿ, ಕೂಡಲೇ ಲೋಕಸಭೆಯ ಸ್ಪೀಕರ್ ಹಾಗೂ ರಾಜ್ಯಸಭಾ ಸಭಾಪತಿ ಅವರು, ಈ ಮಸೂದೆಗಳನ್ನು ಸಂಸದೀಯ ಸಮಿತಿಯ ಮರುಪರಿಶೀಲನೆ ಗಾಗಿ ವಾಪಸ್ ಕಳುಹಿಸಬೇಕು ಎಂದು ಕೂಟವು ಒತ್ತಾಯಿಸಿದೆ.

508 ರೈಲು ನಿಲ್ದಾಣ ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೃತ ಭಾರತ ನಿಲ್ದಾಣ ಯೋಜನೆಯಡಿ ಕೇಂದ್ರ ಸರ್ಕಾರ ದೇಶದಲ್ಲಿ 1,309 ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿ ಸಲು ನಿರ್ಧರಿಸಿದೆ. ಮೊದಲ ಹಂತದಲ್ಲಿ 508 ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದಕ್ಕಾಗಿ ₹24,470 ಕೋಟಿ ನಿಗದಿಪಡಿಸಲಾಗಿದೆ.

ಪ್ರಯಾಣಿಕರಿಗೆ ಆಧುನಿಕ ಸೌಲಭ್ಯ ಕಲ್ಪಿಸುವುದೇ ಯೋಜನೆಯ ಮೂಲ ಉದ್ದೇಶ. ಸ್ಥಳೀಯ ಸಂಸ್ಕೃತಿ, ಪರಂಪರೆ ಹಾಗೂ ವಾಸ್ತುಶಿಲ್ಪದ ಆಧಾರದ ಮೇಲೆ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಪ್ರಯಾಣಿಕರಿಗೆ ವಿಶ್ವದರ್ಜೆಯ ಸೌಕರ್ಯ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ರಾಜ್ಯವಾರು ಎಷ್ಟು: ಉತ್ತರ ಪ್ರದೇಶ 55, ರಾಜಸ್ಥಾನ 55, ಬಿಹಾರ 49, ಮಹಾರಾಷ್ಟ್ರ 44, ಪಶ್ಚಿಮ ಬಂಗಾಳ 37, ಮಧ್ಯಪ್ರದೇಶ 34, ಅಸ್ಸಾಂ 32, ಒಡಿಶಾ 25, ಪಂಜಾಬ್ 22, ಗುಜರಾತ್ 21, ತೆಲಂಗಾಣ 21, ಜಾರ್ಖಂಡ್ 20, ಆಂಧ್ರಪ್ರದೇಶ 18, ತಮಿಳುನಾಡು, 18, ಹರಿಯಾಣದಲ್ಲಿ 15 ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ.

ಪ್ರಯಾಣ ದರ ಏರಿಕೆ ಇಲ್ಲ: ನಿಲ್ದಾಣಗಳ ಪುನರ್ ಅಭಿವೃದ್ಧಿ ಯೋಜನೆ ಹೆಸರಿನಲ್ಲಿ ರೈಲುಗಳ ಪ್ರಯಾಣ ದರವನ್ನು ಏರಿಕೆ ಮಾಡುವುದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ಹೇಳಿದ್ದಾರೆ.

ಕರ್ನಾಟಕದಲ್ಲಿ 13 ರೈಲು ನಿಲ್ದಾಣ ನವೀಕರಣ

ಕರ್ನಾಟಕದಲ್ಲಿ ಮೊದಲ ಹಂತದಲ್ಲಿ 13 ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ನೈರುತ್ಯ ರೈಲ್ವೆಯು ₹172.7 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ ವಿಭಾಗದಲ್ಲಿ ಆರು ಮತ್ತು ಮೈಸೂರು ವಿಭಾಗದಲ್ಲಿ ಎರಡು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಿದೆ.

ಕೇಂದ್ರ ರೈಲ್ವೆಯಿಂದ 3, ದಕ್ಷಿಣ ಕೇಂದ್ರ ರೈಲ್ವೆ ಹಾಗೂ ದಕ್ಷಿಣ ರೈಲ್ವೆಯಿಂದ ತಲಾ ಒಂದೊಂದು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಮೇಲ್ದರ್ಜೆಗೇರುತ್ತಿರುವ ನಿಲ್ದಾಣಗಳು ಇಂತಿವೆ.

● ಘಟಪ್ರಭ ● ಗೋಕಾಕ್ ರಸ್ತೆ ● ಅಳ್ನಾವರ ● ಬಳ್ಳಾರಿ ● ಕೊಪ್ಪಳ ● ಗದಗ ● ಹರಿಹರ ● ಅರಸೀಕೆರೆ ● ಕಲಬುರಗಿ ● ಶಹಾಬಾದ್ ● ವಾಡಿ ● ಬೀದರ್ ● ಮಂಗಳೂರು ಜಂಕ್ಷನ್

ಚೆನ್ನೈ ಸೂಪರ್ ಸ್ಟಾರ್ಜ್ ತಂಡದ ತೆಕ್ಕೆಗೆ ಬೆಂಗಳೂರಿನ ಷಟ್ಲರ್

ಜಿಪಿಬಿಎಲ್: ಮಿಥುನ್‌ಗೆ ಗರಿಷ್ಠ ಮೌಲ್ಯ

ಬೆಂಗಳೂರು: ಕೆಲ ದಿನಗಳ ಹಿಂದೆ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಶ್ವದ ಏಳನೇ ರ‍್ಯಾಂಕ್ ಆಟಗಾರ ಕೀನ್ ಯೆ ಲೊ ಅವರಿಗೆ ಆಘಾತ ನೀಡಿದ್ದ ಬೆಂಗಳೂರಿನ ಮಿಥುನ್ ಮಂಜುನಾಥ್ ಅವರು ಗ್ರ್ಯಾನ್‌ಪ್ರೀ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ (ಜಿಪಿಬಿಎಲ್) ಎರಡನೇ ಆವೃತ್ತಿಯ ಹರಾಜಿನಲ್ಲಿ ₹14.50 ಲಕ್ಷದೊಂದಿಗೆ ಗರಿಷ್ಠ ಮೌಲ್ಯ ಗಳಿಸಿದ್ದಾರೆ.

25 ವರ್ಷದ ಮಿಥುನ್ ಅವರಿಗೆ ಐಕಾನ್ ವಿಭಾಗದಲ್ಲಿ ಮೂಲ ಬೆಲೆ ₹8 ಲಕ್ಷ ನಿಗದಿಯಾಗಿತ್ತು. ಅವರಿಗಾಗಿ ಬೆಂಗಳೂರು ಟೈಗರ್ಸ್ ಮತ್ತು ಚೆನ್ನೈ ಸೂಪರ್ ಸ್ಟಾರ್ಜ್ ತಂಡಗಳು ಬಹಳಷ್ಟು ಪೈಪೋಟಿ ನಡೆಸಿದವು. ಅಂತಿಮವಾಗಿ ಚೆನ್ನೈ ತೆಕ್ಕೆಗೆ ಜಾರಿದರು. ಬೆಂಗಳೂರು ಟೈಗರ್ಸ್ ತಂಡವು ರಿಪಬ್ಲಿಕ್ ಆಫ್ ಕೊರಿಯಾದ ಶಿನ್ ಬೇಕ್ ಚಿಯೋಲ್ ಅವರನ್ನು ₹ 14 ಲಕ್ಷದೊಂದಿಗೆ ಖರೀದಿ ಮಾಡಿತು. ಇದು ಎರಡನೇ ಗರಿಷ್ಠ ಮೌಲ್ಯವಾಗಿದೆ.

ಜಿಪಿಬಿಎಲ್ ಎರಡನೇ ಆವೃತ್ತಿಯ ಹರಾಜಿಗೆ 500ಕ್ಕೂ ಅಧಿಕ ಆಟಗಾರರು ನೋಂದಾಯಿಸಿದ್ದರು. ಅದರಿಂದ 150 ಆಟಗಾರರನ್ನು ಆಯ್ಕೆ ಮಾಡಲಾಗಿತ್ತು. ಆ ಪೈಕಿ ಎಂಟು ತಂಡಗಳು ತಲಾ 10ರಂತೆ ಒಟ್ಟು 80 ಆಟಗಾರರನ್ನು ಹರಾಜಿನಲ್ಲಿ ಪಡೆದವು. ಪಂದ್ಯಗಳು ಆ.27ರಿಂದ ಸೆ.9ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.

ತಂಡಗಳು: ಬೆಂಗಳೂರು ಟೈಗರ್ಸ್: ಶಿನ್ ಬೇಕ್ ಚಿಯೋಲ್, ಪೂರ್ವ ಬಾರ್ವೆ, ಸಾಯಿ ಪ್ರತೀಕ್ ಕೃಷ್ಣಪ್ರಸಾದ್, ಲೀ ಡಾಂಗ್ ಕೆಯುನ್, ಹರ್ಷಿತ್ ಅಗರವಾಲ್, ಅಕ್ಷನ್ ಶೆಟ್ಟಿ, ಎಸ್. ಭಾರ್ಗವ್, ಅಶಿತ್ ಸೂರ್ಯ, ಪ್ರೇರಣಾ ಎನ್. ಶೇಟ್, ವಿ.ಎ. ಗ್ಲೋರಿಯಾ

ಹೈದರಾಬಾದ್ ಹೌಂಡ್ಸ್: ಸಮೀರ್ ವರ್ಮಾ, ರಘು ಮರಿಸ್ವಾಮಿ, ಶಿಖಾ ಗೌತಮ್, ಎಸ್. ಪ್ರಕಾಶ್ ರಾಜ್, ತ್ರಿಶಾ ಹೆಗ್ಡೆ, ಎ. ಹರಿಹರನ್, ಕಾರ್ತಿಕಿ ಗುಲ್ಶನ್ ಕುಮಾರ್, ರುಬಾನ್ ಕುಮಾರ್, ಎಚ್.ಆರ್. ವಸಂತ್ ಕುಮಾರ್, ಅನಿಯಾ ಸೆಟಿಯನ್

ಪುಣೆ ಪ್ಯಾಂಥರ್ಸ್: ಜಾನ್ ಲೌಡಾ, ತಾನ್ಯಾ ಹೇಮಂತ್, ಹೇಮನಾಗೇಂದ್ರ, ಕನಿಕಾ ಕನ್ವಾಲ್, ಲೀ ಹಕ್ ಬೀಮ್, ಸಂಯಮ್ ಶುಕ್ಲಾ, ಅಭಿಷೇಕ್ ಶೈನಿ, ತರುಣ್ ಮನ್ನೆಪಲ್ಲಿ, ಚಯಾನಿತ್ ಜೋಶಿ, ಲಿಖಿತಾ ಶ್ರೀವಾಸ್ತವ

ಚೆನ್ನೈ ಸೂಪರ್ ಸ್ಟಾರ್ಜ್: ಮಿಥುನ್ ಮಂಜುನಾಥ್, ಎಚ್.ವಿ. ನಿತಿನ್, ಧ್ರುತಿ ಯತೀಶ್, ಆಡಮ್ ಮಂಡ್ರೆಕ್, ವಿವಿಯನ್ ಸಂಡೋರ್ಹಾಜಿ, ಕೆ. ಸತೀಶ್ ಕುಮಾರ್, ವಿ.ಎಸ್. ವರ್ಷಿಣಿ, ಚಿರಾಗ್ ಸೇನ್, ರೋಷನ್ ಗುರ್ಬಾನಿ, ಲೋಕೇಶ್ ವಿಶ್ವನಾಥನ್

ಗುಜರಾತ್ ಲಯನ್ಸ್: ಕಿಮ್ ಗಿ ಜಂಗ್, ಗೌಸ್ ಶೇಕ್, ಜನನಿ ಅನಂತ್ ಕುಮಾರ್, ಸ್ಮಿತ್ ತೋಶಿವಾಲ್, ಸೌರಭ್ ವರ್ಮಾ, ಅರುಣ್ ಜಾರ್ಜ್, ಲೀ ಸಂಘೋ, ಆರ್ಯಮನ್ ಟಂಡನ್, ಪಾರ್ವತಿ ಎಸ್. ಕೃಷ್ಣನ್, ಬಿ.ಎಂ. ರಾಹುಲ್

ಕೇರಳ ಟಸ್ಕರ್ಸ್: ಜೂಲಿಯನ್ ಕ್ಯಾರಗಿ, ಪೃಥ್ವಿ ಕೆ. ರಾಯ್, ಕಿಮ್ ಹ್ವಿ ತೇ, ಮನು ಅತ್ರಿ, ರುಜುಲಾ ರಾಮು, ಅಶ್ವಿನಿ ಭಟ್, ಶ್ರುತಿ ಮುಂಡದ, ವೈಭವ್ ರವಿ, ಹರ್ಷಿಲ್ ದಾನಿ, ಸಿದ್ಧಾರ್ಥ್ ಎಲಂಗೋ

ಮುಂಬೈ ವೋಲ್ವ್ಸ್: ಪೋಲಿನಾ ಬುಹ್ರೋವಾ, ಬಿ. ಸುಮೀತ್ ರೆಡ್ಡಿ, ಕಿಮ್ ಡುಕ್ ಯಂಗ್, ವಿಷ್ಣುವರ್ಧನ್, ಆದ್ಯಾ ವರಿಯಾತ್, ಹೇಮಂತ್ ಎಂ. ಗೌಡ, ಆದಿತ್ಯ ಜೋಶಿ, ಸೂರಜ್ ಗೋಲಾ, ರುದ್ರ ಶಾಹಿ, ಪಿ. ಅಮೃತಾ

ನಾರ್ತ್‌ಈಸ್ಟ್ ರೈನೋಸ್: ಸಾಯಿ ಪ್ರಣೀತ್, ಕೃಷ್ಣಪ್ರಸಾದ್ ಗರಗ, ಫ್ರಾನ್ಸಿಸ್ಕಾ ವೋರ್ಕ್‌ಮನ್, ಒಂಡ್ರೆಜ್ ಕ್ರಾಲ್, ಎಸ್.ಡಿ. ಸನೀತ್, ನೆಯ್ಸ ಕಾರ್ಯಪ್ಪ, ಮಂಜಿತ್ ಸಿಂಗ್, ಡಿಂಕು ಸಿಂಗ್, ಜೇಡೆ ಅನಿಲ್, ಚಿರಂಜೀವಿ ರೆಡ್ಡಿ

ಮಿಥುನ್ ಮಂಜುನಾಥ್

ಟಿ20 ಕ್ರಿಕೆಟ್: ವೆಸ್ಟ್ ಇಂಡೀಸ್ ವಿರುದ್ಧ ಮತ್ತೆ ಮುಗ್ಗರಿಸಿದ ಭಾರತ

ಪೂರನ್ ಬ್ಯಾಟಿಂಗ್ ಅಬ್ಬರ

ಗಯಾನ (ಪಿಟಿಐ): ನಿಕೋಲಸ್ ಪೂರನ್ ಅವರ ಅಬ್ಬರದ ಆಟದ ನೆರವಿನಿಂದ ವೆಸ್ಟ್ ಇಂಡೀಸ್ ತಂಡದವರು ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಭಾರತದ ವಿರುದ್ಧ ಎರಡು ವಿಕೆಟ್‌ಗಳ ಗೆಲುವು ಸಾಧಿಸಿದರು.

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ ತಂಡ, ತಿಲಕ್ ವರ್ಮಾ (51 ರನ್, 41 ಎ., 4X5, 6X1) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 152 ರನ್ ಗಳಿಸಿತು.

ನಿಕೋಲಸ್ ಪೂರನ್ (67 ರನ್, 40 ಎ., 4X6, 6X4) ಅಬ್ಬರದ ಆಟದ ನೆರವಿನಿಂದ ಆತಿಥೇಯ ತಂಡ 18.5 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 155 ರನ್ ಗಳಿಸಿತು. ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ 2–0 ಯಿಂದ ಮುನ್ನಡೆ ಗಳಿಸಿತು.

ಸಾಧಾರಣ ಗುರಿ ಬೆನ್ನಟ್ಟಿದ ವಿಂಡೀಸ್ ತಂಡಕ್ಕೆ, ಮೊದಲ ಓವರ್‌ನಲ್ಲೇ ಎರಡು ವಿಕೆಟ್ ಪಡೆದ ಹಾರ್ದಿಕ್ ಪಾಂಡ್ಯ (35ಕ್ಕೆ 3) ಆರಂಭಿಕ ಆಘಾತ ನೀಡಿದರು. ಆದರೆ ಪೂರನ್ ಹೊಡೆಬಡಿಯ ಆಟದಿಂದ ಪಂದ್ಯದ ಗತಿಯನ್ನು ಬದಲಿಸಿದರು. ಅವರಿಗೆ ರೊವ್ಮನ್ ಪೊವೆಲ್ ಮತ್ತು ಶಿಮ್ರೊನ್ ಹೆಟ್ಮೆಯರ್ ತಕ್ಕ ಸಾಥ್ ನೀಡಿದರು.

ವಿಂಡೀಸ್ ಗೆಲುವಿನಲ್ಲಿ ಮಿಂಚಿದ ನಿಕೋಲಸ್ ಪೂರನ್ –ಎಎಫ್‌ಪಿ ಚಿತ್ರ

ವಿಂಡೀಸ್ ಗೆಲುವಿಗೆ 27 ರನ್‌ಗಳು ಬೇಕಿದ್ದಾಗ ಪೂರನ್ ಔಟಾದರು. ಈ ವೇಳೆ ಮೂರು ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡು ಒತ್ತಡಕ್ಕೆ ಸಿಲುಕಿತು. ಆದರೆ ಅಕೀಲ್ ಹೊಸೇನ್ (ಅಜೇಯ 16) ಮತ್ತು ಅಲ್ಜರಿ ಜೋಸೆಫ್ (ಅಜೇಯ 10) ಅವರು ತಂಡವನ್ನು ಜಯದತ್ತ ಮುನ್ನಡೆಸಿದರು.

ತಿಲಕ್ ವರ್ಮಾ ಆಸರೆ: ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ಆರಂಭ ಚೆನ್ನಾಗಿರಲಿಲ್ಲ. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಅಲ್ಜರಿ ಜೋಸೆಫ್ ಎಸೆತದಲ್ಲಿ ಶುಭಮನ್ ಗಿಲ್ (7 ರನ್) ಔಟಾದರು. ನಂತರದ ಓವರ್‌ನಲ್ಲಿ ಸೂರ್ಯಕುಮಾರ್ ಯಾದವ್ ಕೇವಲ ಒಂದು ರನ್ ಗಳಿಸಿ ರನ್‌ಔಟ್ ಆದರು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಇಶಾನ್ (27ರನ್) ಜೊತೆಗೂಡಿದ ತಿಲಕ್ ವರ್ಮಾ ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿದರು. ಇಶಾನ್ ಹತ್ತನೇ ಓವರ್‌ನಲ್ಲಿ ಶೆಫರ್ಡ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು.

ಕ್ರೀಸ್‌ಗೆ ಬಂದ ಸಂಜು ಸ್ಯಾಮ್ಸನ್ (7 ರನ್) ಹುಸೇನ್ ಬೌಲಿಂಗ್‌ನಲ್ಲಿ ಮುಂದಡಿ ಇಟ್ಟು ಆಡಲು ಯತ್ನಿಸಿ ದಂಡ ತೆತ್ತರು. ವಿಕೆಟ್‌ಕೀಪರ್ ಪೂರನ್ ಸ್ಟಂಪಿಂಗ್ ಮಾಡಿ, ಸಂಜುಗೆ ಪೆವಿಲಿಯನ್ ದಾರಿ ತೋರಿಸಿದರು.

ಆದರೆ ಇನ್ನೊಂದು ಬದಿಯಲ್ಲಿ ತಿಲಕ್ ವಿಚಲಿತರಾಗದೇ ಆಡುತ್ತಿದ್ದರು. ಅವರೊಂದಿಗೆ ಸೇರಿಕೊಂಡ ನಾಯಕ ಹಾರ್ದಿಕ್ (24; 18ಎ, 6X2) ಚೇತರಿಕೆ ನೀಡಿದರು. ಐದನೇ ವಿಕೆಟ್‌ಗೆ 38 ರನ್‌ಗಳು ಸೇರಿದವು. 20 ವರ್ಷದ ತಿಲಕ್, ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಭಾರತದ ಅತಿಕಿರಿಯ ಆಟಗಾರ ಎನಿಸಿಕೊಂಡರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 152 (ಇಶಾನ್ ಕಿಶನ್ 27, ತಿಲಕ್ ವರ್ಮಾ 51, ಹಾರ್ದಿಕ್ ಪಾಂಡ್ಯ 24, ಅಕೀಲ್ ಹುಸೇನ್ 29ಕ್ಕೆ2, ಅಲ್ಜರಿ ಜೋಸೆಫ್ 28ಕ್ಕೆ2, ರೊಮೆರಿಯೊ ಶೇಫರ್ಡ್ 28ಕ್ಕೆ2) ವೆಸ್ಟ್ ಇಂಡೀಸ್: 18.5 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 155 (ಕೈಲ್ ಮೇಯರ್ಸ್ 15, ನಿಕೊಲಸ್ ಪೂರನ್ 67, ರೊವ್ಮನ್ ಪೊವೆಲ್ 21, ಶಿಮ್ರೊನ್ ಹೆಟ್ಮೆಯರ್ 22, ಹಾರ್ದಿಕ್ ಪಾಂಡ್ಯ 35ಕ್ಕೆ 3, ಅರ್ಷದೀಪ್ ಸಿಂಗ್ 34ಕ್ಕೆ 1, ಯಜುವೇಂದ್ರ ಚಾಹಲ್ 19ಕ್ಕೆ 2) ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 2 ವಿಕೆಟ್‌ಗಳ ಗೆಲುವು

ವಿಶ್ವಕಪ್ ಕ್ರಿಕೆಟ್: ಪಾಕ್ ತಂಡಕ್ಕೆ ಅನುಮತಿ

ಕರಾಚಿ (ಪಿಟಿಐ): ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗಾಗಿ ಭಾರತಕ್ಕೆ ಪ್ರಯಾಣಿಸಲು ಪಾಕಿಸ್ತಾನ ಕ್ರಿಕೆಟ್ ತಂಡಕ್ಕೆ ಪಾಕ್ ಸರ್ಕಾರ ಅನುಮತಿ ನೀಡಿದೆ. ಇದರೊಂದಿಗೆ ಪಾಕ್ ತಂಡದ ಪಾಲ್ಗೊಳ್ಳುವಿಕೆ ಬಗ್ಗೆ ಹಲವು ತಿಂಗಳುಗಳಿಂದ ತಲೆದೋರಿದ್ದ ಅನಿಶ್ಚಿತತೆಗೆ ತೆರೆಬಿದ್ದಿದೆ.

ಕ್ರೀಡೆಯನ್ನು ರಾಜಕೀಯದೊಂದಿಗೆ ಬೆರೆಸಬಾರದು ಎಂದು ಪಾಕಿಸ್ತಾನವು ನಿರಂತರವಾಗಿ ಹೇಳುತ್ತಾ ಬಂದಿದೆ. ಆದ್ದರಿಂದ ಮುಂಬರುವ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲು ತಮ್ಮ ತಂಡವನ್ನು ಭಾರತಕ್ಕೆ ಕಳುಹಿಸಲು ನಿರ್ಧರಿಸಿದ್ದೇವೆ ಎಂದು ಪಾಕಿಸ್ತಾನ ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ.

‘ಅಂತರರಾಷ್ಟ್ರೀಯ ಕ್ರೀಡೆಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ಪೂರೈಸುವಲ್ಲಿ ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧದ ಸ್ಥಿತಿಯು ಅಡ್ಡಿಯಾಗಬಾರದು ಎಂದು ಪಾಕಿಸ್ತಾನ ನಂಬುತ್ತದೆ’ ಎಂದು ಹೇಳಿದೆ.

ಭಾರತ ಪ್ರವಾಸದ ವೇಳೆ ಪಾಕ್ ಆಟಗಾರರ ಭದ್ರತೆಯ ಬಗ್ಗೆ ಕಳವಳವನ್ನು ಹೊಂದಿದ್ದೇವೆ. ಈ ವಿಚಾರವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮತ್ತು ಭಾರತ ಸರ್ಕಾರಕ್ಕೆ ತಿಳಿಸಲಾಗುವುದು ಎಂದಿದೆ.

ಮಲೇಷ್ಯಾ ಮಣಿಸಿದ ಭಾರತ

ಹಾಕಿ: ಹರ್ಮನ್‌ಪ್ರೀತ್ ಬಳಗಕ್ಕೆ 5–0 ಗೋಲುಗಳ ಗೆಲುವು

ಚೆನ್ನೈ (ಪಿಟಿಐ): ಆಕ್ರಮಣಕಾರಿ ಆಟವಾಡಿದ ಭಾರತ ತಂಡದವರು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಪಂದ್ಯದಲ್ಲಿ 5–0 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿದರು.

ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕಾರ್ತಿ ಸೆಲ್ವಂ (15ನೇ ನಿ.), ಹಾರ್ದಿಕ್ ಸಿಂಗ್ (32), ಹರ್ಮನ್ ಪ್ರೀತ್ ಸಿಂಗ್ (42), ಗುರುಜಂತ್ ಸಿಂಗ್ (53) ಮತ್ತು ಜುಗ್ರಾಜ್ ಸಿಂಗ್ (54) ಅವರು ಆತಿಥೇಯ ತಂಡದ ಪರ ಗೋಲು ಗಳಿಸಿದರು.

ಟೂರ್ನಿಯಲ್ಲಿ ಎರಡನೇ ಗೆಲುವು ಪಡೆದ ಭಾರತ, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಮೂರು ಪಂದ್ಯಗಳನ್ನು ಆಡಿರುವ ಹರ್ಮನ್ ಪ್ರೀತ್ ಸಿಂಗ್ ಬಳಗ ಏಳು ಪಾಯಿಂಟ್ಸ್ ಹೊಂದಿದೆ. ಮಲೇಷ್ಯಾ ಆರು ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಕಳೆದ ಪಂದ್ಯದಲ್ಲಿ ಜಪಾನ್ ಎದುರು ನೀರಸ ಪ್ರದರ್ಶನ ನೀಡಿ ಡ್ರಾಕ್ಕೆ ತೃಪ್ತಿಪಟ್ಟುಕೊಂಡಿದ್ದ ಭಾರತ ತಂಡ, ಮಲೇಷ್ಯಾ ವಿರುದ್ಧ ಸ್ಫೂರ್ತಿಯುತ ಪ್ರದರ್ಶನ ನೀಡಿತು. 3 ಗೋಲುಗಳು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಬಂದವು.

ಭಾರತ ತಂಡ ಸೋಮವಾರ ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ಕೊರಿಯಾದ ಸವಾಲು ಎದುರಿಸಲಿದೆ.

ಪಾಕ್–ಜಪಾನ್ ಪಂದ್ಯ ಡ್ರಾ: ಪಾಕಿಸ್ತಾನ ತಂಡ ಜಪಾನ್ ಜತೆ 3–3 ಗೋಲುಗಳ ಡ್ರಾ ಸಾಧಿಸಿತು. ಈ ಫಲಿತಾಂಶದಿಂದ ಉಭಯ ತಂಡಗಳೂ ಸೆಮಿಫೈನಲ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡಿವೆ.

ಮೊದಲ ನಿಮಿಷದಿಂದಲೇ ಉಭಯ ತಂಡಗಳು ಆಕ್ರಮಣಕಾರಿ ಆಟದ ಮೊರೆ ಹೋದವು. ರಾಣಾ ಅಬ್ದುಲ್ ಅವರು 9ನೇ ನಿಮಿಷದಲ್ಲಿ ಪಾಕ್‌ಗೆ ಮುನ್ನಡೆ ತಂದಿತ್ತರೆ, ಜಪಾನ್‌ನ ಸೆರೆನ್ ತನಕಾ (13ನೇ) ಪಂದ್ಯವನ್ನು ಸಮಸ್ಥಿತಿಗೆ ತಂದರು.

ಆ ಬಳಿಕ ಪಾಕ್ ತಂಡದ ಪರ ಮೊಹಮ್ಮದ್ ಖಾನ್ (25 ಮತ್ತು 55ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಜಪಾನ್ ಪರ ಕಾಟೊ ರೊಸೆಯಿ (37) ಹಾಗೂ ಒಹಶಿ ಮಸಾಕಿ (45) ಅವರು ಚೆಂಡನ್ನು ಗುರಿ ಸೇರಿಸಿದರು. ಕೊನೆಯ ನಿಮಿಷಗಳಲ್ಲಿ ಉಭಯ ತಂಡಗಳು ಗೆಲುವಿನ ಗೋಲಿಗಾಗಿ ಮೇಲಿಂದ ಮೇಲೆ ಪ್ರಯತ್ನಿಸಿದರೂ, ಯಶಸ್ಸು ದೊರೆಯಲಿಲ್ಲ.

ಡ್ರಾ ಪಂದ್ಯದಲ್ಲಿ ಕೊರಿಯಾ: ದಿನದ ಮತ್ತೊಂದು ಪಂದ್ಯದಲ್ಲಿ ಚೀನಾ ತಂಡ ಕೊರಿಯಾ ತಂಡವನ್ನು 1–1 ಗೋಲುಗಳ ಡ್ರಾದಲ್ಲಿ ಕಟ್ಟಿಹಾಕಿತು. ಜಾಂಗ್‌ಯುನ್ ಜಾಂಗ್ ಅವರು ಕೊರಿಯಾ ಪರ ಗೋಲು ಗಳಿಸಿದರೆ, ಚಾಂಗ್‌ಕಾಂಗ್ ಚೆನ್ ಅವರು ಚೀನಾ ಪರ ಚೆಂಡನ್ನು ಗುರಿ ಸೇರಿಸಿ ಸಮಬಲಕ್ಕೆ ಕಾರಣರಾದರು.

ಇಂದಿನ ಪಂದ್ಯಗಳು: ಜಪಾನ್–ಮಲೇಷ್ಯಾ (ಸಂಜೆ 4), ಪಾಕಿಸ್ತಾನ–ಚೀನಾ (ಸಂಜೆ 6.15), ಭಾರತ–ಕೊರಿಯಾ (ರಾತ್ರಿ 8.30)

ಮಲೇಷ್ಯಾ ವಿರುದ್ಧ ಗೋಲು ಗಳಿಸಿದ ಭಾರತ ತಂಡದ ಕಾರ್ತಿ ಸೆಲ್ವಂ (ಎಡ) ಅವರು ಸಹ ಆಟಗಾರರದೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಬೆಂಗಳೂರು ಪೋಲೊ ಆವೃತ್ತಿ ಇಂದಿನಿಂದ

ಬೆಂಗಳೂರು: ಸೋಮವಾರದಿಂದ ಆರಂಭವಾಗುವ ಬೆಂಗಳೂರು ಪೋಲೊ ಆವೃತ್ತಿಯಲ್ಲಿ ದೇಶದ ಪ್ರಮುಖ ತಂಡಗಳು ಪೈಪೋಟಿ ನಡೆಸಲು ಸಜ್ಜಾಗಿವೆ.

ಇಂಡಿಯನ್ ಪೋಲೊ ಸಂಸ್ಥೆಯ ಆಶ್ರಯದಲ್ಲಿ ಅಗ್ರಾಂ ರೈಡಿಂಗ್ ಮತ್ತು ಪೋಲೊ ಅಕಾಡೆಮಿ (ಎಆರ್‌ಪಿಎ) ಇದರ ನೇತೃತ್ವದಲ್ಲಿ ಬೆಂಗಳೂರಿನ ಎಎಸ್‌ಸಿ ಸೆಂಟರ್ ಮತ್ತು ಕಾಲೇಜಿನ ಅಗ್ರಾಂ ಪೋಲೊ ಕ್ರೀಡಾಂಗಣದಲ್ಲಿ ಆ.7ರಿಂದ 27ರವರೆಗೆ ಪೋಲೊ ಪಂದ್ಯಗಳನ್ನು ಆಯೋಜಿಸಲಾಗಿದೆ.

ನಾಲ್ಕು ಕಪ್‌ಗಳ ಪಂದ್ಯಗಳಿಗೆ ಒಟ್ಟು 9 ತಂಡಗಳು ಭಾಗವಹಿಸಲಿವೆ. ಪ್ರತಿದಿನ ಮಧ್ಯಾಹ್ನ 2ಕ್ಕೆ ಪಂದ್ಯಗಳು ಆರಂಭವಾಗಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಆಸಕ್ತರು ಪ್ರವೇಶದ್ವಾರ 1 ಮತ್ತು 5ರಿಂದ ತೆರಳಬಹುದಾಗಿದೆ.

ಭಾನುವಾರ ಟ್ರೋಫಿ ಅನಾವರಣ, ಮಿಲ್‌ಬ್ಯಾಂಡ್ ಪ್ರದರ್ಶನ, ವಿವಿಧ ತಂಡಗಳ ಪರಿಚಯ, ಕುದುರೆ ಸವಾರಿ ಪ್ರದರ್ಶನ ನಡೆಯಿತು. ಲೆಫ್ಟಿನೆಂಟ್ ಕರ್ನಲ್ ಜಸ್ಪಾಲ್ ಸಿಂಗ್ ನೇಗಿ ಮತ್ತು ಎಎಸ್‌ಸಿಯ ಕಮಾಂಡರ್ ಬ್ರಿಗೇಡಿಯರ್ ಟಿ.ಎಸ್. ಮಾನ್ ಪಾಲ್ಗೊಂಡರು.

ಬಿಟಿಸಿ ಸ್ಥಳಾಂತರಕ್ಕೆ ಸರ್ಕಾರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಬೆಂಗಳೂರು ಟರ್ಫ್ ಕ್ಲಬ್ ಮಾಸಿಕ ಪರವಾನಗಿ ನವೀಕರಣ ಮಾಡಲು ನಿರಾಕರಿಸಿದೆ. ಇದರಿಂದಾಗಿ ಬಿಟಿಸಿಯಲ್ಲಿ ನಡೆಯಬೇಕಿದ್ದ ರೇಸ್‌ಗಳು, ಆಫ್‌ಕೋರ್ಸ್ ಬೆಟ್ಟಿಂಗ್ ಚಟುವಟಿಕೆಗಳು ಸ್ಥಗಿತವಾಗಿದೆ.

ಅದರಿಂದಾಗಿ ಕ್ಲಬ್ ಆಡಳಿತ ಸಮಿತಿಯು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಶುಕ್ರವಾರ ಭೇಟಿಯಾಗಿ, ಪರವಾನಗಿ ನವೀಕರಿಸುವಂತೆ ಮನವಿ ಮಾಡಿಕೊಂಡಿತು.

ಆದರೆ ಈ ಸಭೆಯಲ್ಲಿ ಮುಖ್ಯಮಂತ್ರಿ ಅವರು, ‘ಸದ್ಯ ನಗರದ ಹೃದಯ ಭಾಗದಲ್ಲಿರುವ ಸ್ಥಳದಿಂದ ರೇಸ್‌ಕೋರ್ಸ್ ಅನ್ನು ಬೇರೆಡೆಗೆ ಸ್ಥಳಾಂತರಿಸಬೇಕು ಮತ್ತು ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣವನ್ನು ಹಿಂಪಡೆಯಬೇಕು’ ಎಂದು ಹೇಳಿದರೆನ್ನಲಾಗಿದೆ.

‘ಈ ವಿಷಯವು ಈಗ ಪ್ರತಿಷ್ಠೆಯಾಗಿ ಮಾರ್ಪಟ್ಟಿದೆ’ ಎಂದು ಟರ್ಫ್ ಕ್ಲಬ್‌ನ ಹೆಸರು ಬಹಿರಂಗಪಡಿಸಲು ಇಚ್ಛಿಸದ ಸದಸ್ಯರೊಬ್ಬರು ಹೇಳಿದ್ದಾರೆ.

‘ಮೊದಲು ಜಿಎಸ್‌ಟಿ ಮತ್ತು ಈಗ ಈ ಪ್ರಕರಣ. ಇದರಿಂದಾಗಿ ಪರಿಸ್ಥಿತಿಯು ಮಂಕಾಗಿದೆ. ಮುಂದಿನ ದಿನಗಳಲ್ಲಿ ಯಾವ ರೀತಿಯ ಬೆಳವಣಿಗಳು ನಡೆಯಲಿವೆ ನೋಡೋಣ’ ಎಂದೂ ಅವರು ನುಡಿದರು.

ರೇಸ್‌ಕೋರ್ಸ್ ಇರುವ ಬೆಲೆಬಾಳುವ ಆಸ್ತಿಗಾಗಿ ಕ್ಲಬ್ ಮತ್ತು ಸರ್ಕಾರದ ನಡುವಿನ ಜಿದ್ದಾಜಿದ್ದಿಯು ಐದು ದಶಕಗಳಿಂದ ನಡೆಯುತ್ತಿದೆ. ಆದರೆ ಈಗ ಸರ್ಕಾರದ ಪಟ್ಟಿನಿಂದಾಗಿ ಬಿಟಿಸಿಯ ಪರಿಸ್ಥಿತಿ ಗಂಭೀರವಾಗುವ ಸಾಧ್ಯತೆ ಇದೆ. ಈಗಾಗಲೇ ಜಿಎಸ್‌ಟಿಯಿಂದಾಗಿ ಅಪಾರ ನಷ್ಟದ ಭೀತಿಯಲ್ಲಿದೆ. ರೇಸಿಂಗ್ ಚಟುವಟಿಕೆಗಳು ಕುಂಠಿತವಾಗುತ್ತಿವೆ. ಆದ್ದರಿಂದ ಹಿಂದೆಂದಿಗಿಂತಲೂ ಹೆಚ್ಚು ಈಗ ಪೆಟ್ಟು ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ.

2008 ರಲ್ಲಿ ಯಡಿಯೂರಪ್ಪ ಸರ್ಕಾರವು ರೇಸ್‌ಕೋರ್ಸ್ ಅನ್ನು ಬೇರೆಡೆಗೆ ಸ್ಥಳಾಂತರ ಮಾಡುವುದಾಗಿ ಘೋಷಿಸಿತ್ತು. ಆದರೆ ಸ್ಥಳಾಂತರಕ್ಕೆ ವಿರೋಧಿಸಿ ಬಿಟಿಸಿ ನ್ಯಾಯಾಲಯದ ಮೆಟ್ಟಿಲೇರಿತ್ತು. ಮೈಸೂರಿನ ಮಹಾರಾಜರು ಈ ಭೂಮಿಯನ್ನು ‘ಇನಾಮು’ ಎಂದು ಕೊಟ್ಟಿದ್ದರು. ಈ ತಾಣದಲ್ಲಿ ಕುದುರೆ ರೇಸಿಂಗ್ ಮಾತ್ರ ನಡೆಸಬೇಕು ಎಂಬ ಷರತ್ತು ವಿಧಿಸಲಾಗಿತ್ತೆಂದು ಕೋರ್ಟ್‌ಗೆ ತಿಳಿಸಲಾಗಿತ್ತು ಎಂದು ಕ್ಲಬ್‌ನ ಸ್ಟೀವರ್ಡ್ ಒಬ್ಬರು ತಿಳಿಸಿದರು.

ನಂತರದಲ್ಲಿ ಹೈಕೋರ್ಟ್‌ನಲ್ಲಿ ಬಿಟಿಸಿ ಪ್ರಕರಣದಲ್ಲಿ ಸೋತಿತು. ಆರು ತಿಂಗಳೊಳಗೇ ಜಾಗ ತೆರವುಗೊಳಿಸುವಂತೆ ಕೋರ್ಟ್ ಸೂಚಿಸಿತು. ಬಿಟಿಸಿಯು ಪ್ರಕರಣವನ್ನು ಸುಪ್ರೀಂ ಕೋರ್ಟ್‌ನವರೆಗೆ ಒಯ್ದಿತು.

‘ಬಿಟಿಸಿಯನ್ನು ಇಲ್ಲಿಂದ ಬೇರೆಡೆಗೆ ಸ್ಥಳಾಂತರಿಸಲು ನಮಗೆ ವಿರೋಧವಿಲ್ಲ. ವಾಸ್ತವವಾಗಿ, ಈ ಸ್ಥಳವು ಈಗ ಉತ್ತಮ ಸ್ಥಿತಿಯಲ್ಲಿ ಇಲ್ಲ. ಬೇರೆಡೆ ನಮಗೆ ಸೂಚಿಸಲಾಗುತ್ತಿರುವ ಪರ್ಯಾಯ ಸ್ಥಳಗಳು ಕ್ಲಬ್ ಸ್ಥಾಪನೆ ಮತ್ತು ನಿರ್ವಹಣೆಗೆ ಸೂಕ್ತವಾಗಿಲ್ಲ’ ಎಂದು ಸೀನಿಯರ್ ಸ್ಟೀವರ್ಡ್ ಹೇಳಿದರು.

ಮಹಾರಾಜ ಟ್ರೋಫಿ ಕ್ರಿಕೆಟ್: ಟಿಕೆಟ್ ಮಾರಾಟ ಆರಂಭ

ಬೆಂಗಳೂರು: ಇದೇ ತಿಂಗಳು ನಡೆಯಲಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯಗಳ ಟಿಕೆಟ್ ಮಾರಾಟವನ್ನು ಆನ್‌ಲೈನ್‌ನಲ್ಲಿ ಆರಂಭಿಸಲಾಗಿದೆ.

ಆಗಸ್ಟ್ 13ರಿಂದ ಆರಂಭವಾಗುವ ಪಂದ್ಯಗಳಿಗೆ ಟಿಕೆಟ್ ದರವನ್ನು ₹ 150 ನಿಗದಿ ಮಾಡಲಾಗಿದೆ. ಟಿಕೆಟ್‌ಗಳನ್ನು www.insider.in ವೆಬ್‌ಸೈಟ್ ಮೂಲಕ ಖರೀದಿಸಬೇಕು.

‘ಟಿಕೆಟ್‌ಗಳ ಮಾರಾಟ ಆರಂಭಿಸಿದ್ದೇವೆ. ಕ್ರಿಕೆಟ್ ಪ್ರೇಮಿಗಳು ಯುವ ಆಟಗಾರರನ್ನು ಪ್ರೋತ್ಸಾಹಿಸಲು ಕ್ರೀಡಾಂಗಣದಲ್ಲಿ ಸೇರುವ ನಿರೀಕ್ಷೆ ಇದೆ. ಈ ಟೂರ್ನಿಯನ್ನು ಅವಿಸ್ಮರಣೀಯವಾಗುವ ವಿಶ್ವಾಸವಿದೆ’ ಎಂದು ಟೂರ್ನಿಯ ಆಡಳಿತ ಸಮಿತಿಯ ಚೇರ್ಮನ್ ಬಿ.ಕೆ. ಸಂಪತ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೆರಿಕ ತಂಡಕ್ಕೆ ಸ್ವೀಡನ್ ಆಘಾತ

ಮೆಲ್ಬರ್ನ್ (ಎಎಫ್‌ಪಿ): ಸ್ವೀಡನ್ ತಂಡದವರು ಪೆನಾಲ್ಟಿ ಶೂಟೌಟ್‌ನಲ್ಲಿ 5–4 ರಿಂದ ಕಳೆದ ಬಾರಿಯ ಚಾಂಪಿ ಯನ್ ಅಮೆರಿಕ ತಂಡವನ್ನು ಮಣಿಸಿ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಾಲ್ಕು ಬಾರಿ ಚಾಂಪಿಯನ್ ಆಗಿ ರುವ ಅಮೆರಿಕ ತಂಡ, ವಿಶ್ವಕಪ್ ಟೂರ್ನಿ ಯಿಂದ ಇಷ್ಟು ಬೇಗ ನಿರ್ಗಮಿಸಿದ್ದು ಇದೇ ಮೊದಲು. ಈ ಹಿಂದಿನ ಎಲ್ಲ ಎಂಟು ಟೂರ್ನಿಗಳಲ್ಲಿ ತಂಡವು ಕನಿಷ್ಠ ಸೆಮಿಫೈನಲ್‌ವರೆಗೆ ಪ್ರವೇಶಿಸಿತ್ತು.

ಭಾನುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದ ನಿಗದಿತ 90 ನಿಮಿಷಗಳು ಮತ್ತು ಹೆಚ್ಚುವರಿ ಅವಧಿಯ ಆಟದಲ್ಲಿ ಗೋಲುಗಳು ಬರಲಿಲ್ಲ. ಅಮೆರಿಕ ತಂಡದವರು ಚೆಂಡಿನ ಮೇಲೆ ಹೆಚ್ಚು ನಿಯಂತ್ರಣ ಸಾಧಿಸಿದ್ದರೂ, ಸ್ವೀಡನ್ ತಂಡದ ಗೋಲ್‌ಕೀಪರ್ ಜೆಸಿರಾ ಮುಸೊವಿಚ್ ಅವರು ಕೆಲವೊಂದು ಸೊಗಸಾದ ಸೇವ್‌ಗಳ ಮೂಲಕ ಗೋಲು ಗಳಿಸಲು ಅವಕಾಶ ನೀಡಲಿಲ್ಲ.

ಪೆನಾಲ್ಟಿ ಶೂಟೌಟ್‌ನಲ್ಲಿ ತಲಾ ಐದು ಅವಕಾಶಗಳ ಬಳಿಕ ಉಭಯ ತಂಡಗಳು 3–3 ರಿಂದ ಸಮಬಲ ಸಾಧಿಸಿದ್ದವು. ಸಡನ್ ಡೆತ್‌ನಲ್ಲಿ ಅದೃಷ್ಟವು ಸ್ವೀಡನ್ ಕೈಹಿಡಿಯಿತು.

ವಿಶ್ವದ ಅಗ್ರಮಾನ್ಯ ತಂಡ ಅಮೆರಿಕ ಹೊರಬಿದ್ದಿರುವ ಕಾರಣ ಫಿಫಾ ರ‍್ಯಾಂಕಿಂಗ್‌ನಲ್ಲಿ ಮೊದಲ ಎರಡು ಸ್ಥಾನಗಳಲ್ಲಿರುವ ತಂಡಗಳು ಟೂರ್ನಿಯಿಂದ ನಿರ್ಗಮಿಸಿದಂತಾಗಿವೆ. ಎರಡನೇ ರ‍್ಯಾಂಕ್ ಹೊಂದಿರುವ ಜರ್ಮನಿ, ಲೀಗ್ ಹಂತದಲ್ಲೇ ಹೊರಬಿದ್ದಿತ್ತು.

ಇದೀಗ ಮೂರನೇ ರ‍್ಯಾಂಕ್‌ನಲ್ಲಿರುವ ಸ್ವೀಡನ್, ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿದೆ. ಈ ತಂಡ ಕ್ವಾರ್ಟರ್ ಫೈನಲ್‌ನಲ್ಲಿ 2011ರ ಚಾಂಪಿಯನ್ ಜಪಾನ್ ವಿರುದ್ಧ ಸೆಣಸಲಿದೆ.

ಅಮೆರಿಕ ವಿರುದ್ಧ ಗೆದ್ದ ಸ್ವೀಡನ್‌ನ ಆಟಗಾರ್ತಿಯರ ಸಂಭ್ರಮ –ಎಎಫ್‌ಪಿ ಚಿತ್ರ

ಕ್ವಾರ್ಟರ್‌ಗೆ ನೆದರ್ಲೆಂಡ್ಸ್: ಇನ್ನೊಂದು 16ರ ಘಟ್ಟದ ಪಂದ್ಯದಲ್ಲಿ ನೆದರ್ಲೆಂಡ್ಸ್ 2–0 ಗೋಲುಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿ ಎಂಟರಘಟ್ಟಕ್ಕೆ ಲಗ್ಗೆಯಿಟ್ಟಿತು.

2019ರ ರನ್ನರ್ಸ್ ಅಪ್ ನೆದರ್ಲೆಂಡ್ಸ್ ತಂಡಕ್ಕೆ ಜಿಲ್ ರೂರ್ಡ್ ಅವರು 9ನೇ ನಿಮಿಷದಲ್ಲಿ ಮುನ್ನಡೆ ತಂದುಕೊಟ್ಟರು. 68ನೇ ನಿಮಿಷದಲ್ಲಿ ಲಿನೆತ್ ಬೀರೆನ್‌ಸ್ಟೈನ್ ಅವರು ಎರಡನೇ ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಎಫ್‌ಸಿಗೆ ಗೆಲುವು

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಬಿಡಿಎಫ್‌ಎ ಆಶ್ರಯದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 6–2 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಬೆಂಜಮಿನ್ ಲುಫೆಂಗ್ (42, 61 ಮತ್ತು 73ನೇ ನಿ.) ಅವರು ಹ್ಯಾಟ್ರಿಕ್ ಗೋಲು ಗಳಿಸಿ ಕಿಕ್‌ಸ್ಟಾರ್ಟ್ ಪರ ಗಮನ ಸೆಳೆದರು. ಸುಶೀಲ್ ಮೈತೇಯಿ (40), ಏನಮ್ ಗ್ರಫೆನ್‌ಬರ್ಗ್ ಜುವಾ (56) ಮತ್ತು ಶೆಲ್ಟನ್ ನಿಕ್ಸನ್ (90 + 4) ಅವರು ತಲಾ ಒಂದು ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ 3–1 ಗೋಲುಗಳಿಂದ ಕೊಡಗು ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಸತೀಶ್ ಕುಮಾರ್ (31 ಮತ್ತು 43ನೇ ನಿ.) ಮತ್ತು ಆರ್. ಶಿವಕುಮಾರ್ (87) ಅವರು ಇಂಡಿಪೆಂಡೆಂಟ್ಸ್ ಪರ ವ್ರೂ, ಶ್ಲೋಕ್ ತಿವಾರಿ (27) ಅವರು ಕೊಡಗು ತಂಡಕ್ಕೂ ಗೋಲು ತಂದಿತ್ತರು.

ಸಂಕ್ಷಿಪ್ತ ಸುದ್ದಿ

ಉದ್ದೀಪನ ಮದ್ದು ಸೇವನೆ: ಸಿಕ್ಕಿಬಿದ್ದ ಜುಡೊಕಾ ಸೈನಿ

ನವದೆಹಲಿ (ಪಿಟಿಐ): ಮುಂಬರಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಸಂಭವನೀಯರ ತಂಡದಲ್ಲಿದ್ದ ಜುಡೊ ಪಟು ಜಸ್ಲೀನ್ ಸಿಂಗ್ ಸೈನಿ ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ವಿಫಲರಾಗಿದ್ದಾರೆ.

ಹೋದ ತಿಂಗಳು ತೈಪೆ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಭಾಗವಹಿಸಿದ್ದಾಗ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ಟೂರ್ನಿಯಲ್ಲಿ ಅವರು 66 ಕೆ.ಜಿ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು.

‘ಅಂತರರಾಷ್ಟ್ರೀಯ ಏಜೆನ್ಸಿಯು ನಡೆಸಿದ ಪರೀಕ್ಷೆಯಲ್ಲಿ ಅವರು (ಜಸ್ಲೀನ್) ನಿಷೇಧಿತ ಮದ್ದು ಸೇವನೆ ಮಾಡಿ ರುವುದು ಪತ್ತೆಯಾಗಿದೆ. ಆದ್ದರಿಂದ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವುದಿಲ್ಲ’ ಎಂದು ತಂಡದ ತರಬೇತುದಾರರೊಬ್ಬರು ತಿಳಿಸಿದ್ದಾರೆ.

ಯಂಗ್ ಓರಿಯನ್ಸ್ ತಂಡಕ್ಕೆ ಜಯ

ಬೆಂಗಳೂರು: ಯಂಗ್ ಓರಿಯನ್ಸ್ ಎಸ್.ಸಿ ತಂಡವು ಪ್ರೊ.ಎನ್.ಸಿ. ಪರಪ್ಪ ಸ್ಮಾರಕ ರಾಜ್ಯ ‘ಎ’ ಡಿವಿಷನ್‌ನ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ್ ಎಸ್.ಯು. ತಂಡವನ್ನು 113–65ರಿಂದ ಮಣಿಸಿತು.

ಇತರ ಪಂದ್ಯಗಳಲ್ಲಿ ಬ್ಯಾಂಕ್ ಆಫ್ ಬರೋಡ ತಂಡವು ಐಬಿಬಿಸಿ ತಂಡವನ್ನು 78–48ರಿಂದ, ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವು ಬಿಎಸ್‌ಎನ್‌ಎಲ್ ತಂಡವನ್ನು 85–56ರಿಂದ ಮತ್ತು ಎಸ್. ಬ್ಲೂಸ್ ತಂಡವು ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವನ್ನು 76–63ರಿಂದ ಸೋಲಿಸಿತು.

ಸರ್ಫ್‌ರಾಜ್ ಖಾನ್ ಮದುವೆ

ಶ್ರೀನಗರ (ಪಿಟಿಐ): ಮುಂಬೈ ಕ್ರಿಕೆಟ್ ತಂಡದ ಬ್ಯಾಟರ್ ಸರ್ಫ್‌ರಾಜ್ ಖಾನ್ ಅವರ ಮದುವೆ ಕಾಶ್ಮೀರಿ ಹುಡುಗಿಯ ಜತೆ ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಭಾನುವಾರ ನಡೆಯಿತು.

ಮದುವೆ ಸಮಾರಂಭದ ವಿಡಿಯೊಗಳು ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಸರ್ಫ್‌ರಾಜ್ ಅವರು ಕಪ್ಪು ಬಣ್ಣದ ಶೇರ್ವಾನಿ ಧರಿಸಿ ಕಾಣಿಸಿಕೊಂಡಿದ್ದಾರೆ.